24 ವರ್ಷಗಳಿಂದ ದೆಹಲಿಯಲ್ಲಿ ಪ್ರಕಟವಾಗುತ್ತಿರುವ ಪ್ರಪ್ರಥಮ ರಾಷ್ಟ್ರೀಯ ಕನ್ನಡ ದಿನಪತ್ರಿಕೆ


# ದೆಹಲಿ ವಾರ್ತೆ

www.dehalivaarthe.com

EDITION: NEW DELHI / CIRCULATION IN U.P. & HARYANA | EDITOR : K.R. RENU | RNI No. DELKAN/2003/10363 | ಪುಟ 8 | ಸಂಪುಟ 24 | ಸಂಚಿಕೆ 82 | ನವದೆಹಲಿ | ಬೆಲೆ ₹10 | ಸೆಪ್ಟೆಂಬರ್ 17 2026 ಗುರುವಾರ




### ನಿತ್ಯ ಪಂಚಾಂಗ 17.09.2026 ಗುರುವಾರ



**ಶ್ರೀಶಕ 1949 ಶ್ರೀ ಪರಾಭವ ನಾಮ ಸಂವತ್ಸರ, ದಕ್ಷಿಣಾಯಣ ಗ್ರೀಷ್ಮ ಋತು, ಚಾಂದ್ರಮಾನ ಶ್ರಾವಣ-ಭಾದ್ರಪದ ಮಾಸ**

ಭಾದ್ರಪದ ಶುದ್ಧ, ಷಷ್ಠಿ, ಅನುರಾಧ ನಕ್ಷತ್ರ,
ಕನ್ಯಾ ಸಂಕ್ರಮಣ,
ಸೂರ್ಯಷಷ್ಠಿ, ಕಾರ್ತಿಕೇಯಸ್ವಾಮಿ ದರ್ಶನ,
ವಡ್ನಾಳ್ ಸ್ವರ್ಣಗೌರೀ ಉತ್ಸವ

| ದಿನ | ರಾಹುಕಾಲ | ಯಮಗಂಡ | ಗುಳಿಕಕಾಲ |
|---|---|---|---|
| ಭಾನು | ಸ. 5.04– 6.33 | 12.00– 1.30 | 3.00– 4.00 |
| ಸೋಮ | ಬೆ. 7.20– 9.04 | 10.30–12.00 | 1.30– 3.00 |
| ಮಂಗಳ | ಮ. 3.25– 4.59 | 9.00–10.30 | 12.00– 1.30 |
| ಬುಧ | ಮ.12.16– 1.50 | 7.30– 9.00 | 10.30– 12.00 |
| ಗುರು | ಮ. 1.50– 3.29 | 6.00– 7.30 | 9.00– 10.30 |
| ಶುಕ್ರ | ಬೆ.10.42–12.16 | 3.00– 4.30 | 7.30– 9.00 |
| ಶನಿ | ಬೆ. 9.07–10.41 | 1.30– 3.00 | 6.00– 7.30 |

# ಅರ್ಹ ಮತದಾರರು ಪಟ್ಟಿಯಿಂದ ಹೊರಗುಳಿಯದಂತೆ ಎಚ್ಚರಿಕೆ ವಹಿಸಿ




**ಜಿಲ್ಲಾಧಿಕಾರಿಗಳಿಗೆ ಡಿಸಿಎಂ ಡಾ.ಜಿ. ಪರಮೇಶ್ವರ್ ಸೂಚನೆ: 43.81 ಲಕ್ಷ ಮತದಾರರ ಮ್ಯಾಪಿಂಗ್ ಆಗಿಲ್ಲ, ನೋಟಿಸ್ ನೀಡಲಾಗಿದೆ**

**ಬೆಂಗಳೂರು, ಸೆ.16:** ಬೇರೆ ಊರುಗಳಿಗೆ ಸ್ಥಳಾಂತರಗೊಂಡಿರುವವರು ಯಾವುದೇ ಕಾರಣಕ್ಕೂ ಮತದಾರರ ಪಟ್ಟಿಯಿಂದ ಹೊರಗೊಳಿಯಬಾರದು ಎಂದು ಉಪಮುಖ್ಯಮಂತ್ರಿ ಡಾ. ಜಿ.ಪರಮೇಶ್ವರ ಸೂಚನೆ ನೀಡಿದರು.

ವಿಧಾನಸೌಧದಲ್ಲಿ ಎಲ್ಲ ಜಿಲ್ಲಾಧಿಕಾರಿಗಳೊಂದಿಗೆ ವೀಡಿಯೋ ಕಾನ್ಫರೆನ್ಸ್ ಮೂಲಕ ಕಂದಾಯ ಇಲಾಖೆಯ ಪ್ರಗತಿ ಪರಿಶೀಲನಾ ಸಭೆ ನಡೆಸಿ, ರಾಜ್ಯದಾದ್ಯಂತ 43.81 ಲಕ್ಷ ಮತದಾರರ ಮ್ಯಾಪಿಂಗ್ ಆಗಿಲ್ಲ. ಹೆಸರು ತಿದ್ದುಪಡಿ ಸೇರಿ ಇನ್ನಿತರ ವಿಚಾರಗಳಿಗೆ ನೋಟಿಸ್ ನೀಡಲಾಗಿದೆ. ಯಾವುದೇ ಅರ್ಹ ಮತದಾರರು ಪಟ್ಟಿಯಿಂದ ಹೊರಗುಳಿಯದಂತೆ ಕ್ರಮ ವಹಿಸಬೇಕು ಎಂದು ನಿರ್ದೇಶಿಸಿದರು.

ಶಾಶ್ವತ ನಿವಾಸಿಗಳ ಸರ್ಟಿಫಿಕೇಟ್ (ಪಿಆರ್‌ಸಿ) ನೀಡುವ ಪ್ರಕ್ರಿಯೆಯಲ್ಲಿ ವಿಳಂಬವಾಗಬಾರದು. ಅರ್ಜಿ ನಮೂನೆ 6 ಬಗ್ಗೆ ಹೆಚ್ಚಿನ ಒತ್ತು ನೀಡಬೇಕು. ಕಾರಣಾಂತರಗಳಿಂದ ಊರು ತೊರೆದು ಹಲವು ವರ್ಷಗಳಿಂದ ಬೇರೆ ಕಡೆ ನೆಲೆಸಿರುವ ಮತದಾರರು ಪಟ್ಟಿಯಿಂದ ಹೊರಗುಳಿ ಯುವ ಸಾಧ್ಯತೆಯೂ ಇರುತ್ತದೆ. ಈ ಬಗ್ಗೆ ನಿರ್ಲಕ್ಷ್ಯ ವಹಿಸುವುದು ಬೇಡ. ಸ್ಥಳಾಂತರ ಗೊಂಡಿರುವವರ ಅಗತ್ಯ ಮಾಹಿತಿಯನ್ನು ಎಸ್‌ಐಆರ್ ಪ್ರಕ್ರಿಯೆಯಲ್ಲಿ ದಾಖಲಿಸಬೇಕು ಎಂದು ತಿಳಿಸಿದರು.

ಸಭೆಯಲ್ಲಿ ಕಂದಾಯ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿ ರಾಜೇಂದರ್ ಕುಮಾರ್ ಕಟಾರಿಯಾ, ವಿಪತ್ತು ನಿರ್ವಹಣಾ ಇಲಾಖೆಯ ಕಾರ್ಯದರ್ಶಿ ಮನೋಜ್ ಕುಮಾರ್ ಮೀನಾ, ಕಂದಾಯ ಆಯುಕ್ತರಾದ ಮೀನಾ ನಾಗರಾಜ್, ಭೂ ಮಾಪನ ಮತ್ತು ಭೂ ದಾಖಲೆ ಇಲಾಖೆಯ ಆಯುಕ್ತ ವೆಂಕಟರಾಜ್ ಮುಂತಾದವರು ಉಪಸ್ಥಿತರಿದ್ದರು.


**ಭಾರತ್ ಜೋಡೋ–ಪ್ರಕ್ರಿಯೆ ಚುರುಕುಗೊಳಿಸಿ**

ಭಾರತ್ ಜೋಡೋ ಯುವ ಸಂಘ ಮುಖ್ಯಮಂತ್ರಿಯವರ ಕನಸಿನ ಯೋಜನೆಯಾಗಿದೆ. ಸಂಘಗಳ ನೋಂದಣಿ, ಮೆಂಟರ್ಸ್‌ಗಳ ನೇಮಕ ಸೇರಿದಂತೆ ಸಂಘ ಪ್ರಾರಂಭಿಸುವ ಪ್ರಕ್ರಿಯೆಯನ್ನು ಮತ್ತಷ್ಟು ಚುರುಕುಗೊಳಿಸಬೇಕು. ತಾಂತ್ರಿಕ ಸಮಸ್ಯೆ ಉಂಟಾದ ಹಿನ್ನೆಲೆಯಲ್ಲಿ ಸ್ಥಗಿತಗೊಳಿಸಲಾಗಿತ್ತು. ಕೂಡಲೇ ಅರ್ಜಿ ನಮೂನೆಗಳನ್ನು ವಿತರಿಸಿ, ಭರ್ತಿ ಮಾಡಿಸಬೇಕು. ಭಾರತ್ ಜೋಡೋ ಯುವಕ ಸಂಘ ಇಡೀ ದೇಶದಲ್ಲಿ ಮೊದಲ ಬಾರಿಗೆ ಜಾರಿಗೊಳಿಸುತ್ತಿರುವ ಕಾರ್ಯಕ್ರಮ. ಇದರಿಂದ ಸರ್ಕಾರಕ್ಕೆ ಮತ್ತು ಅಧಿಕಾರಿಗಳಿಗೆ ಒಳ್ಳೆ ಹೆಸರು ಬರಲಿದೆ ಎಂದು ಡಾ.ಜಿ. ಪರಮೇಶ್ವರ್ ತಿಳಿಸಿದರು.

**ಪ್ರಜಾಸೇವೆ– ಅರ್ಜಿ ವಿಲೇವಾರಿ ತ್ವರಿತವಾಗಲಿ**

ಪ್ರಜಾಸೇವಾ ಅಭಿಯಾನದಲ್ಲಿ ಹೆಚ್ಚಾಗಿ ಕಂದಾಯ ಇಲಾಖೆಗೆ ಸಂಬಂಧಿಸಿದ ಅರ್ಜಿಗಳು ಬರುತ್ತಿವೆ. ಪಹಣಿ ತಿದ್ದುಪಡಿ, ಪೋಡಿ, ಪಿಂಚಣಿ ಸಮಸ್ಯೆ ಸೇರಿದಂತೆ ಮುಂತಾದ ಅರ್ಜಿಗಳನ್ನು ತ್ವರಿತಗತಿಯಲ್ಲಿ ವಿಲೇವಾರಿ ಮಾಡಬೇಕು. ಆರ್‌ಟಿಸಿ, ಪೋಡಿ ಪ್ರಕರಣಗಳನ್ನು ಸರಳೀಕರಣಗೊಳಿಸ ಲಾಗಿದೆ. ಆದಾಗ್ಯೂ ಗೊಂದಲಗಳಿದ್ದರೆ ಹಿರಿಯ ಅಧಿಕಾರಿಗಳಿಂದ ಅಗತ್ಯ ಸಲಹೆ ಪಡೆದು, ಮುಂದಿನ ಕ್ರಮ ಕೈಗೊಳ್ಳಬೇಕು ಎಂದು ಡಿಸಿಎಂ ಸೂಚಿಸಿದರು.

## ವಂದೇಮಾತರಂ ಪೂರ್ಣ ಹಾಡಿದರೆ ಕರ್ನಾಟಕ ರತ್ನ ಕೊಡಿಸುವೆ: ಪ್ರತಿಪಕ್ಷ ನಾಯಕರಿಗೆ ಪ್ರಿಯಾಂಕ್ ಖರ್ಗೆ ಸವಾಲು



**ಬೆಳಗಾವಿ, ಸೆ.16:** ವಿರೋಧ ಪಕ್ಷದ ನಾಯಕರು ವಂದೇಮಾತರಂನ ಪೂರ್ಣ ಪ್ರಮಾಣದ ಗೀತೆಯನ್ನು ಹಾಡಿದರೆ ಕರ್ನಾಟಕ ರತ್ನ ಪ್ರಶಸ್ತಿ ಕೊಡಿಸುವುದಾಗಿ ಗೃಹ ಸಚಿವ ಪ್ರಿಯಾಂಕ ಖರ್ಗೆ ಸವಾಲು ಹಾಕಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ವಂದೇ ಮಾತರಂ ವಿಚಾರವಾಗಿ ಎರಡು ಚರಣಗಳನ್ನು ಎಲ್ಲರೂ ಹಾಡುತ್ತಾರೆ. ಬಿಜೆಪಿಯ ವಿಜಯೇಂದ್ರ, ಆರ್.ಅಶೋಕ್ ವಂದೇಮಾತರಂನ ಪೂರ್ಣಭಾಗವನ್ನು ಟೆಲಿಪ್ರಾಂಪ್ಟರ್ ಮತ್ತು ಕಾಗದ ಇಲ್ಲದೇ ಹಾಡಿ ತೋರಿಸಲಿ. ಅವರಿಗೆ ಕನ್ನಡ ರಾಜ್ಯೋತ್ಸವ, ಕರ್ನಾಟಕ ರತ್ನದಂತಹ ಪ್ರಶಸ್ತಿಗಳನ್ನು ಕೊಡಿಸುತ್ತೇನೆ ಎಂದರು. ಮೂರನೇ ಚರಣ ಬೆಂಗಾಳಿ ಭಾಷೆಯಲ್ಲಿದೆ. ನಮಗೆ ಅದನ್ನು ಹಾಡಲುಬರುವುದಿಲ್ಲ. ನಾವು ಅದನ್ನು ಅಭ್ಯಾಸ ಮಾಡಿಲ್ಲ. ವಾಸ್ತವವಾಗಿ ನನಗೂ ಕೂಡ ಮೂರನೇ ಚರಣ ಗೊತ್ತಿಲ್ಲ. ನನಗಿರುವ ಮಾಹಿತಿ ಪ್ರಕಾರ ಪ್ರಧಾನಿಯವರಿಗೂ ಗೊತ್ತಿಲ್ಲ. ದೇಶದಲ್ಲಿ ಬೆಲೆ ಏರಿಕೆ, ನಿರುದ್ಯೋಗ, ಬರ ಇಂತಹ ವಿಚಾರಗಳ ಬಗ್ಗೆ ಚರ್ಚೆ ಮಾಡುತ್ತಿಲ್ಲ. ಬದಲಾಗಿ ವಂದೇಮಾತರಂ ಹೇಗೆ ಹಾಡಬೇಕು ಎಂದು ಚರ್ಚೆ ಮಾಡುತ್ತಾರೆ ಎಂದು ಲೇವಡಿ ಮಾಡಿದರು.

## ನೂತನ ಜಿಲ್ಲಾ ಅಧ್ಯಕ್ಷರಿಗೆ ಕೇಂದ್ರ ನಾಯಕರಿಂದ ಮಾರ್ಗದರ್ಶನ: ಸಿಎಂ ಡಿ.ಕೆ.ಶಿವಕುಮಾರ್

**ಬೆಂಗಳೂರು, ಸೆ.16:** ನೂತನವಾಗಿ ಜಿಲ್ಲಾ ಅಧ್ಯಕ್ಷರು ನೇಮಕಗೊಂಡಿದ್ದು, ಅವರಿಗೆ ಮಾರ್ಗದರ್ಶನ ನೀಡಲು ಹೈಕಮಾಂಡ್ ನಾಯಕರು ಸಭೆ ಕರೆದಿದ್ದಾರೆ ಎಂದು ಸಿಎಂ ಡಿ.ಕೆ. ಶಿವಕುಮಾರ್ ತಿಳಿಸಿದರು.

ಸದಾಶಿವನಗರದಲ್ಲಿ ಮಾಧ್ಯಮಗಳ ಪ್ರಶ್ನೆಗಳಿಗೆ ಶಿವಕುಮಾರ್ ಅವರು ಬುಧವಾರ ಪ್ರತಿಕ್ರಿಯೆ ನೀಡಿದರು. ಸುರ್ಜೇವಾಲ ಅವರು ಆಗಮಿಸಿರುವ ಬಗ್ಗೆ ಕೇಳಿದಾಗ ಅವರು ಈ ರೀತಿ ಉತ್ತರಿಸಿದರು. ಗುರುವಾರದಿಂದ 3 ದಿನಗಳ ಕಾಲ ವಿವಿಧ ಜಿಲ್ಲೆಗಳ ಪ್ರವಾಸದ ಬಗ್ಗೆ ಕೇಳಿದಾಗ, ಬುಧವಾರ ಕಲಬುರಗಿ, ಮಂಗಳೂರು, ಉಡುಪಿ, ಚಿಕ್ಕಮಗಳೂರು, ಹಾಸನ ಜಿಲ್ಲೆಗಳ ಪ್ರವಾಸ ಮಾಡಲಿದ್ದೇನೆ. ವಿಧಾನ ಮಂಡಲ ಅಧಿವೇಶನದಲ್ಲಿ ಬರಗಾಲ ಹಾಗೂ ಕಸ್ತೂರಿರಂಗನ್ ವರದಿಯ ಕುರಿತಂತೆ ಚರ್ಚೆ ನಡೆಯಲಿದೆ ಎಂದರು.

## ಜಿಹಾದಿಗಳಿಗೂ ಕಾಂಗ್ರೆಸ್ಸಿಗರಿಗೂ ವ್ಯತ್ಯಾಸವಿಲ್ಲ: ಛಲವಾದಿ ವ್ಯಂಗ್ಯ

**ಮುಸ್ಲಿಮರಲ್ಲಿ ದಾರಿತಪ್ಪಿದರೆ ಜಿಹಾದಿ, ಹಿಂದುತ್ವದಲ್ಲಿ ದಾರಿ ತಪ್ಪಿದರೆ ಕಾಂಗ್ರೆಸ್ಸಿಗ ರಾಗುತ್ತಾರೆ, ಚರ್ಚೆಗೆ ಗ್ರಾಸವಾದ ಹೇಳಿಕೆ**



**ಮಂಡ್ಯ, ಸೆ.16:** ಮುಸ್ಲಿಂ ಸಮುದಾಯದಲ್ಲಿ ದಾರಿ ತಪ್ಪಿದ ವ್ಯಕ್ತಿ ಜಿಹಾದಿ ಆಗುತ್ತಾರೆ, ಅದೇರೀತಿ ಹಿಂದುತ್ವದಲ್ಲಿ ದಾರಿತಪ್ಪಿದವರು ಕಾಂಗ್ರೆಸ್ಸಿಗರು ಆಗುತ್ತಾರೆ. ಜಿಹಾದಿಗಳಿಗೂ ಹಾಗೂ ಕಾಂಗ್ರೆಸ್ಸಿಗರಿಗೂ ಯಾವುದೇ ವ್ಯತ್ಯಾಸವಿಲ್ಲ ಎಂದು ವಿಧಾನ ಪರಿಷತ್ ಸದಸ್ಯ ಛಲವಾದಿ ನಾರಾಯಣಸ್ವಾಮಿ ವಿವಾದಾತ್ಮಕ ಹೇಳಿಕೆ ನೀಡಿದ್ದಾರೆ.

ಮಂಡ್ಯ ಜಿಲ್ಲೆ ಮದ್ದೂರಿನಲ್ಲಿ ಗಣೇಶ ವಿಸರ್ಜನೆ ಹಾಗೂ ಮೆರವಣಿಗೆಯ ಸಂದರ್ಭದಲ್ಲಿ ಅವರು ಈ ಮಾತುಗಳನ್ನಾಡಿದ್ದು, ಸದ್ಯ ರಾಜ್ಯ ರಾಜಕಾರಣದಲ್ಲಿ ಈ ಹೇಳಿಕೆ ತೀವ್ರ ಚರ್ಚೆಗೆ ಗ್ರಾಸವಾಗಿದೆ.

ಮದ್ದೂರಿನಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಹಿಂದೂ–ಮುಸ್ಲಿಂ ಎಲ್ಲರೂ ಅಣ್ಣ–ತಮ್ಮಂದಿರ ರೀತಿಯಲ್ಲಿ ಇದ್ದಾರೆ. ಎರಡು ಸಮುದಾಯದಲ್ಲೂ ಒಳ್ಳೆಯವರು ಹಾಗೂ ಕೆಟ್ಟವರು ಇದ್ದಾರೆ. ಮುಸ್ಲಿಂ ಸಮುದಾಯದಲ್ಲಿ ದಾರಿ ತಪ್ಪಿದ ವ್ಯಕ್ತಿ ಜಿಹಾದಿ ಆಗುತ್ತಾನೆ. ಅದೇ ರೀತಿ ಹಿಂದುತ್ವದಲ್ಲೂ ಅಂತಹವರು ಇದ್ದು, ದಾರಿ ತಪ್ಪಿದವರು ಕಾಂಗ್ರೆಸ್ಸಿಗರು ಆಗುತ್ತಾರೆ' ಎಂದು ವಾಗ್ದಾಳಿ ನಡೆಸಿದರು.

ಜಿಹಾದಿಗಳು ಹಾಗೂ ಕಾಂಗ್ರೆಸ್ಸಿಗರು ಇಬ್ಬರೂ ದೇಶಕ್ಕೆ ಗಂಡಾಂತರವಾಗುತ್ತಾರೆ. ಕಾಂಗ್ರೆಸ್ ಪಕ್ಷವು ತನ್ನ ಜಿಹಾದಿ ನಡವಳಿಕೆಯನ್ನು ಬಿಟ್ಟು, ದೇಶಭಕ್ತಿ ಹಾಗೂ ನಾವೆಲ್ಲರೂ ಒಂದೇ ಎಂಬ ಸದ್ಭಾವನೆಯನ್ನು ಬೆಳೆಸಿಕೊಳ್ಳಬೇಕು. ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷವು ಶಾಂತಿ ಕದಡುವ ಕೆಲಸ ಮಾಡುತ್ತಿದೆ ಎಂದು ಕಿಡಿಕಾರಿದರು.

ಇನ್ನೊಂದೆಡೆ, ಮದ್ದೂರಿನ ಪೇಟೆ ಬೀದಿಯಲ್ಲಿ ಸಾಮೂಹಿಕ ಗಣೇಶ ಮೆರವಣಿಗೆ ಅತ್ಯಂತ ವಿಜೃಂಭಣೆಯಿಂದ ಸಾಗಿತು. 108 ಗಣೇಶ ಮೂರ್ತಿಗಳು ಹಾಗೂ ವಿವಿಧ ಕಲಾತಂಡಗಳೊಂದಿಗೆ ಹಿಂದೂ ಯುವಕರು ಹೆಜ್ಜೆ ಹಾಕಿದರು. ಮೆರವಣಿಗೆಯು ಮಸೀದಿ ಹಾಗೂ ದರ್ಗಾ ಇರುವ ಪ್ರದೇಶದ ಬಳಿಗೆ ಆಗಮಿಸುತ್ತಿದ್ದಂತೆ ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಪೊಲೀಸರು ಬಿಗಿ ಬಂದೋಬಸ್ತ್ ಏರ್ಪಡಿಸಿದ್ದರು.

## ಪಂಚಾಯಿತಿ ಮಟ್ಟದಲ್ಲಿ ನಿಯಮಮೀರಿ ರಸ್ತೆ ನಿರ್ಮಿಸಿದರೆ ಕ್ರಮ: ಅಧಿಕಾರಿಗಳಿಗೆ ಸಚಿವ ಕೃಷ್ಣ ಬೈರೇಗೌಡ ಎಚ್ಚರಿಕೆ

**ಬೆಂಗಳೂರು, ಸೆ.16:** ಬೆಂಗಳೂರು ಮಹಾನಗರ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಕಳೆದ ಒಂದೂವರೆ ವರ್ಷದಿಂದ ವ್ಯವಸ್ಥಿತವಾಗಿ ಯೋಜನೆ ಮಾಡಿ ಹೊಸರಸ್ತೆಗಳನ್ನು ಗುರುತಿಸಲಾಗಿದ್ದು, ಹಲವು ರಸ್ತೆಗಳನ್ನು ವಿಸ್ತರಿಸಲಾಗುತ್ತಿದೆ. ಇನ್ನುಮುಂದೆ ಗ್ರಾಮ ಪಂಚಾಯತಿ ಮಟ್ಟದಲ್ಲಿ ನಿಯಮ ಮೀರಿ ರಸ್ತೆ ನಿರ್ಮಿಸಿದರೆ ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಲಾಗುವುದು ಎಂದು ಸಚಿವ ಕೃಷ್ಣ ಬೈರೇಗೌಡ ಎಚ್ಚರಿಕೆ ನೀಡಿದ್ದಾರೆ. ಅಧಿಕಾರಿಗಳ ಸಭೆಯಲ್ಲಿ ಮಾತನಾಡಿದ ಅವರು, "ಗ್ರಾಮ ಪಂಚಾಯತಿಯಲ್ಲಿ ಬೆಕ್ಕು ಕಣ್ಣು ಮುಚ್ಚಿ ಹಾಲು ಕುಡಿದರೆ ಜಗತ್ತಿಗೆ ಗೊತ್ತಾಗಲ್ಲ" ಎಂಬ ರೀತಿಯಲ್ಲಿ ಮಾಸ್ಟರ್ ಪ್ಲಾನ್ ಉಲ್ಲಂಘಿಸಿ ರಸ್ತೆಗಳನ್ನು ನಿರ್ಮಿಸಿದರೆ, ಸಂಬಂಧಪಟ್ಟ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳ ವಿರುದ್ಧ ಕಾನೂನು ಕ್ರಮ ಜರುಗಿಸಲಾಗುವುದು ಎಂದು ತಿಳಿಸಿದರು. ಬಿಎಂಆರ್‌ಡಿಎ ವ್ಯಾಪ್ತಿಯಲ್ಲಿ ಹೊಸ ರಸ್ತೆಗಳ ವಿಸ್ತರಣೆ–ರಾಜಧಾನಿ ಬೆಂಗಳೂರಿನ ಸುತ್ತಮುತ್ತಲಿನ ಸಾರಿಗೆ ವ್ಯವಸ್ಥೆಯನ್ನು ಸುಧಾರಿಸಲು ಮತ್ತು ಭವಿಷ್ಯದ ನಗರೀಕರಣವನ್ನು ದೃಷ್ಟಿಯಲ್ಲಿಟ್ಟುಕೊಂಡು ಬಿಎಂಆರ್‌ಡಿಎ ವ್ಯಾಪ್ತಿಯಲ್ಲಿ ಹೊಸರಸ್ತೆಗಳನ್ನು ರೂಪಿಸಲಾಗಿದೆ. ಕಳೆದ ಒಂದೂವರೆ ವರ್ಷದಿಂದ ನಿರಂತರ ಸಮೀಕ್ಷೆ ನಡೆಸಿ ಹೊಸರಸ್ತೆಗಳನ್ನು ಅಂತಿಮಗೊಳಿಸಲಾಗಿದೆ. ವಾಹನ ದಟ್ಟಣೆ ನಿಯಂತ್ರಿಸಲು ಸದ್ಯ ಇರುವ ಪ್ರಮುಖ ರಸ್ತೆಗಳನ್ನು ವಿಸ್ತರಿಸುವ ಕಾರ್ಯ ಪ್ರಗತಿಯಲ್ಲಿದೆ.

### ಉಲ್ಲಂಘನೆಗೆ ಬೀಳಲಿದೆ ಬ್ರೇಕ್!

ಅನಧಿಕೃತ ಲೇಔಟ್‌ಗಳು ಮತ್ತು ಮಾಸ್ಟರ್ ಪ್ಲಾನ್‌ಗೆ ವಿರುದ್ಧವಾಗಿ ರಸ್ತೆಗಳನ್ನು ನಿರ್ಮಿಸಿ ಸಾರ್ವಜನಿಕರಿಗೆ ಹಾಗೂ ಸರ್ಕಾರದ ಖಜಾನೆಗೆ ನಷ್ಟ ಉಂಟುಮಾಡುವ ಪ್ರವೃತ್ತಿಗೆ ಕಡಿವಾಣ ಹಾಕಲು ಸರ್ಕಾರ ಮುಂದಾಗಿದೆ. ನಿಯಮಬಾಹಿರವಾಗಿ ರಸ್ತೆ ನಿರ್ಮಾಣಕ್ಕೆ ಅನುಮತಿ ನೀಡುವ ಅಥವಾ ಮಾಸ್ಟರ್ ಪ್ಲಾನ್ ಉಲ್ಲಂಘಿಸುವ ಪಿಡಿಓಗಳನ್ನು ನೇರವಾಗಿ ಹೊಣೆಗಾರರನ್ನಾಗಿ ಮಾಡಿ ಅವರ ವಿರುದ್ಧ ಶಿಸ್ತುಕ್ರಮ ಕೈಗೊಳ್ಳುವುದಾಗಿ ಸಚಿವರು ಸ್ಪಷ್ಟಪಡಿಸಿದ್ದಾರೆ.

## ಕಲ್ಯಾಣ ಕರ್ನಾಟಕದ ಇತಿಹಾಸ ಕರ್ನಾಟಕದ ಇತಿಹಾಸವಾಗಿ ಬದಲಾವಣೆ: ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಬಣ್ಣನೆ

**ಜನರು ಮಲ್ಲಿಕಾರ್ಜುನ ಖರ್ಗೆ ಅವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಬೇಕು**

**ಜನರ ಸಂತಸವೇ ಕಾಂಗ್ರೆಸ್ ಗುರಿ**



**ಕಲಬುರ್ಗಿ, ಸೆ.16:** "ಕಲ್ಯಾಣ ಕರ್ನಾಟಕದ ಇತಿಹಾಸ ಇಡೀ ಕರ್ನಾಟಕದ ಇತಿಹಾಸವಾಗಿ ಬದಲಾಗಿದೆ. ಕಲ್ಯಾಣ ಕರ್ನಾಟಕ ಭಾಗ ಯಾವುದಕ್ಕೂ ಕಡಿಮೆ ಇಲ್ಲದಂತೆ ಅಭಿವೃದ್ಧಿ ಹೊಂದುತ್ತಿದೆ. ಬೆಂಗಳೂರಿಗಿಂತ ಕಲಬುರ್ಗಿ ಕಡಿಮೆಯೇನಿಲ್ಲ" ಎಂದು ಸಿಎಂ ಡಿ ಕೆ ಶಿವಕುಮಾರ್ ಅವರು ಬಣ್ಣಿಸಿದರು. ಕಲಬುರ್ಗಿ ನಗರದ ಪಬ್ಲಿಕ್ ಗಾರ್ಡನ್ ನಲ್ಲಿ ಆಯೋಜಿಸಿರುವ ಬೀದಿ ಉತ್ಸವ, ಅಪ್ಪನ ಕೆರೆಯ ವಿವಿಧ ಅಭಿವೃದ್ಧಿ ಕಾರ್ಯಗಳನ್ನು ಬುಧವಾರ ಉದ್ಘಾಟಿಸಿ ಮಾತನಾಡಿದರು.

"ಪವಿತ್ರವಾದ ಸ್ವಾತಂತ್ರ್ಯ ನಮಗೆ ಸಿಕ್ಕ ಮೇಲೆ ಕಲ್ಯಾಣ ಕರ್ನಾಟಕ ಭಾಗಕ್ಕೆ ಸ್ವಾತಂತ್ರ್ಯ ಸಿಕ್ಕಿತು. ಇದು ಶುಭ ಸಂದರ್ಭ. ಈ ಭಾಗದ ಅಭಿವೃದ್ಧಿಗೆ ನಮ್ಮ ಸರ್ಕಾರ ದಾಖಲೆಯುತ ಕೊಡುಗೆ ನೀಡಿದೆ. ನಾನು ಯಾರನ್ನೂ ಟೀಕೆ ಮಾಡುವುದಿಲ್ಲ" ಎಂದರು.

ಜನರು ಖರ್ಗೆ ಅವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಬೇಕು

ಅತಿ ಹೆಚ್ಚು ವೈದ್ಯಕೀಯ, ಎಂಜಿನಿಯರಿಂಗ್ ಸೀಟು ಸೇರಿದಂತೆ ಹಲವಾರು ಅವಕಾಶಗಳನ್ನು 371 ಜೆ ಮೂಲಕ ಮಲ್ಲಿಕಾರ್ಜುನ ಖರ್ಗೆ ಅವರು ಕಲ್ಯಾಣ ಕರ್ನಾಟಕ ಭಾಗಕ್ಕೆ ನೀಡಿದ್ದಾರೆ. ಈ ಭಾಗದ ಜನರು ತಮ್ಮ ಮನೆಯಲ್ಲಿ ಮಲ್ಲಿಕಾರ್ಜುನ ಖರ್ಗೆ ಅವರ ಭಾವಚಿತ್ರ ಇಟ್ಟು ಪೂಜಿಸಬೇಕು" ಎಂದು ಹೇಳಿದರು.

**ಜನರ ಸಂತಸವೇ ಕಾಂಗ್ರೆಸ್ ಗುರಿ**

"ಜನರು ಸಂತಸದಿಂದ ಇರುವಂತೆ ಮಾಡುವುದೇ ಕಾಂಗ್ರೆಸ್ ಸರ್ಕಾರದ ಗುರಿ. ಇಂತಹ ಭವ್ಯ ಕಾರ್ಯಕ್ರಮ, ಕರ್ನಾಟಕದ ಕಾಂಗ್ರೆಸ್ ಸರ್ಕಾರದ ಸಾಕ್ಷಿ ಗುಡ್ಡೆ. ಈ ಯೋಜನೆಗೆ ಸಹಕರಿಸಿದವರಿಗೆ ಹಾಗೂ ಕಾರ್ಯಕ್ರಮ ಆಯೋಜಿಸಿದ ಜಿಲ್ಲಾಡಳಿತವು ಅಭಿನಂದನೀಯ" ಎಂದರು

## ಸೌತ್ ಏಷ್ಯನ್ ಫುಟ್ಬಾಲ್ ಫೆಡರೇಷನ್ ಉಪಾಧ್ಯಕ್ಷರಾಗಿ ಎನ್.ಎ. ಹ್ಯಾರಿಸ್ ಆಯ್ಕೆ




**ಬೆಂಗಳೂರು, ಸೆ.16:** ಶಾಂತಿನಗರ ವಿಧಾನಸಭಾ ಕ್ಷೇತ್ರದ ಶಾಸಕರು ಹಾಗೂ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (BDA) ಅಧ್ಯಕ್ಷ ಎನ್.ಎ. ಹ್ಯಾರಿಸ್ ಅವರು ಸೌತ್ ಏಷ್ಯನ್ ಫುಟ್ಬಾಲ್ ಫೆಡರೇಷನ್ (SAFF) ಉಪಾಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ. ಈಗಾಗಲೇ ರಾಷ್ಟ್ರೀಯ ಮಟ್ಟದ ಫುಟ್ಬಾಲ್ ಆಡಳಿತದಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿರುವ ಎನ್.ಎ. ಹ್ಯಾರಿಸ್ ಅವರು ಅಖಿಲ ಭಾರತ ಫುಟ್ಬಾಲ್ ಫೆಡರೇಷನ್ (AIFF) ಉಪಾಧ್ಯಕ್ಷರಾಗಿಯೂ ಕಾರ್ಯ ನಿರ್ವಹಿಸುತ್ತಿದ್ದಾರೆ. ಇದೀಗ SAFF ಉಪಾಧ್ಯಕ್ಷರಾಗಿ ಆಯ್ಕೆಯಾಗುವ ಮೂಲಕ ಅವರಿಗೆ ದಕ್ಷಿಣ ಏಷ್ಯಾ ಮಟ್ಟದಲ್ಲಿ ಮತ್ತೊಂದು ಮಹತ್ವದ ಜವಾಬ್ದಾರಿ ದೊರೆತಿದೆ. ದಕ್ಷಿಣ ಏಷ್ಯಾದ ರಾಷ್ಟ್ರಗಳಲ್ಲಿ ಫುಟ್ಬಾಲ್ ಕ್ರೀಡೆಯ ಅಭಿವೃದ್ಧಿ, ಯುವ ಪ್ರತಿಭೆಗಳಿಗೆ ಹೆಚ್ಚಿನ ಅವಕಾಶ ಕಲ್ಪಿಸುವುದು ಹಾಗೂ ಫುಟ್ಬಾಲ್ ಚಟುವಟಿಕೆಗಳಿಗೆ ಉತ್ತೇಜನ ನೀಡುವ ನಿಟ್ಟಿನಲ್ಲಿ SAFF ಪ್ರಮುಖ ಪಾತ್ರ ವಹಿಸುತ್ತಿದೆ. ರಾಷ್ಟ್ರೀಯ ಫುಟ್ಬಾಲ್ ಆಡಳಿತದ ಜೊತೆಗೆ ಇದೀಗ ದಕ್ಷಿಣ ಏಷ್ಯಾ ಮಟ್ಟದಲ್ಲಿಯೂ ಮಹತ್ವದ ಸ್ಥಾನ ಅಲಂಕರಿಸಿರುವ ಎನ್.ಎ. ಹ್ಯಾರಿಸ್ ಅವರ ಆಯ್ಕೆಗೆ ಕ್ರೀಡಾಭಿಮಾನಿಗಳು, ಬೆಂಬಲಿಗರು ಹಾಗೂ ವಿವಿಧ ಕ್ಷೇತ್ರಗಳ ಗಣ್ಯರು ಅಭಿನಂದನೆ ಸಲ್ಲಿಸಿದ್ದಾರೆ.

## ಜ್ಞಾನದೊಂದಿಗೆ ವಿವೇಕ ರಾಧಾಕೃಷ್ಣರ ಆಶಯ: ಡಾ.ಅವನೀಂದ್ರನಾಥ್ ರಾವ್



**ನವದೆಹಲಿ, ಸೆ.16:** ವಿದ್ಯಾರ್ಥಿಗಳಲ್ಲಿ ಜ್ಞಾನದೊಂದಿಗೆ ವಿವೇಕವನ್ನು ಬೆಳೆಸಬೇಕು ಎಂಬುವುದು ಆದರ್ಶ ಶಿಕ್ಷಕ, ದಾರ್ಶನಿಕ ಮತ್ತು ಮಾಜಿ ರಾಷ್ಟ್ರಪತಿ ಡಾ. ಸರ್ವೇಪಲ್ಲಿ ರಾಧಾಕೃಷ್ಣರ ಆಶಯವಾಗಿತ್ತು ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಪ್ರಭಾರ ಅಧ್ಯಕ್ಷ ಡಾ. ಅವನೀಂದ್ರನಾಥ ರಾವ್ ಅವರು ಹೇಳಿದರು.

ಅವರು ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯು ಜಿ. ಪಿ. ರಾಜರತ್ನಂ ಸಭಾಂಗಣದಲ್ಲಿ ದೆಹಲಿ ಕನ್ನಡ ಹಿರಿಯ ಮಾಧ್ಯಮಿಕ ಶಾಲೆಯ ಶಿಕ್ಷಕ, ಶಿಕ್ಷಕೇತರ ವೃಂದದವರಿಗೆ ಆಯೋಜಿಸಿದ ಶಿಕ್ಷಕರ ದಿನಾಚರಣೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಶಿಕ್ಷಕರು ಕೇವಲ ಪಾಠ ಹೇಳಿಕೊಡುವವರಲ್ಲ; ಅವರು ನಮ್ಮ ಭವಿಷ್ಯವನ್ನು ರೂಪಿಸುವ ಶಿಲ್ಪಿಗಳು. ಸಮಾಜಕ್ಕೆ ಯೋಗ್ಯ ನಾಗರಿಕರನ್ನು ಕೊಡುಗೆಯಾಗಿ ನೀಡಲು ಅವರು ತಮ್ಮ ಇಡೀ ಜೀವನವನ್ನೇ ಧಾರೆ ಎರೆಯುತ್ತಾರೆ. ಅಂತಹ ಗುರುಗಳ ಶ್ರಮವನ್ನು ಗುರುತಿಸಿ, ಅವರಿಗೆ ಸದಾ ಕೃತಜ್ಞರಾಗಿರುವುದು ಪ್ರತಿಯೊಬ್ಬ ವಿದ್ಯಾರ್ಥಿಯ ಹಾಗೂ ಸಮಾಜದ ಜವಾಬ್ದಾರಿಯಾಗಿದೆ ಎಂದರು.

ದೆಹಲಿ ಕನ್ನಡ ಹಿರಿಯ ಮಾಧ್ಯಮಿಕ ಶಾಲಾ ಗೌರವ ವ್ಯವಸ್ಥಾಪಕ ಉಮೇಶ್ ಬಿ.ಆರ್. ಅವರು ಶಿಕ್ಷಕರಿಗೆ ಶುಭ ಹಾರೈಸಿ ಮಾತನಾಡಿ ಭಾರತೀಯ ಪರಂಪರೆಯಲ್ಲಿ ಶಿಕ್ಷಕ ವೃತ್ತಿಗೆ ಮಹತ್ವದ ಸ್ಥಾನವಿದೆ. ವಿದ್ಯಾರ್ಥಿಗಳಿಗೆ ಶಿಕ್ಷಕರೇ ಮೊದಲ ಆದರ್ಶ. ಗುಣಮಟ್ಟದ ಶಿಕ್ಷಣಕ್ಕಾಗಿ ಶಿಕ್ಷಕರೆಲ್ಲರೂ ಶ್ರಮಿಸುತ್ತಿರುವುದು ಅನುಸರಣೀಯ ಎಂದು ಹೇಳಿದರು.

ಸಂಸ್ಥೆಯ ವತಿಯಿಂದ ಶಾಲಾ ಶಿಕ್ಷಕ, ಶಿಕ್ಷಕೇತರ ವೃಂದದವರಿಗೆ ಉಡುಗೊರೆಯನ್ನು ನೀಡಿ ಗೌರವಿಸಲಾಯಿತು., ಸಂಸ್ಥೆಯ ಉಪಾಧ್ಯಕ್ಷೆ ಎಂ. ವೀಣಾ ಜಗದೀಶ್, ಪ್ರಭಾರ ಗೌರವ ಕಾರ್ಯದರ್ಶಿ ಹಾಗೂ ಗೌರವ ಖಜಾಂಚಿ ಕಾಶೀನಾಥ ಬಿರಾದರ್, ಆಡಳಿತ ಸಮಿತಿ ಸದಸ್ಯರಾದ ಗಿರೀಶ್ ಎಸ್., ಹರಿಪ್ರಿಯಾ ಎಸ್., ವಸಂತಶೆಟ್ಟಿ ಬೆಳ್ಳಾರೆ, ಡಾ. ಅಶೋಕ್ ಗೋನಾಳ್, ಮೋಹನ್‌ಕುಮಾರ್ ಬಿ.ಎನ್., ಉಪಸ್ಥಿತರಿದ್ದರು. ಪ್ರಾಂಶುಪಾಲ ಪ್ರಶಾಂತಕುಮಾರ್ ಸ್ವಾಗತಿಸಿದರು. ಉಪಪ್ರಾಂಶುಪಾಲೆ ಪ್ರೇಮಲತಾ ಬಿ. ವಂದಿಸಿದರು. ಶಿಕ್ಷಕರಾದ ಪ್ರೊಮಿಳಾ ದಹಿಯಾ, ಬಿದಿಶಾ ಚಟರ್ಜಿ ಕಾರ್ಯಕ್ರಮ ನಿರೂಪಿಸಿದರು.

## ಉಚಿತ ಯುಪಿಐ ವ್ಯವಹಾರದಲ್ಲಿ ವ್ಯಾಪಾರಿಗಳಿಗೆ ಶುಲ್ಕದ ಬಲೆ ಅಂತಿಮವಾಗಿ ಗ್ರಾಹಕನಿಗೆ ಬರೆ: ಡಾ.ಆನಂದಕುಮಾರ್



**ಬೆಂಗಳೂರು, ಸೆ.16:** ಅಧಿಕ ಮೌಲ್ಯದ ನೋಟು ಅಮಾನ್ಯೀಕರಣದಿಂದ ಡಿಜಿಟಲ್ ಭಾರತ ನಿರ್ಮಿಸಿದ ಕೇಂದ್ರ ಸರ್ಕಾರ ಇದೀಗ ಡಿಜಿಟಲ್ ಭಾರತದಿಂದ ಯುಪಿಐ ವ್ಯವಹಾರಗಳಿಗೆ ತೆರಿಗೆ ವಿಧಿಸುವ ಮೂಲಕ ದೇಶದ ಆರ್ಥಿಕತೆ ಕುಸಿಯುವಂತೆ ಮಾಡಿದೆ. ಯುಪಿಐ ಸುಂಕ ವ್ಯಾಪಾರಿಯಿಂದ ಗ್ರಾಹಕನಿಗೆ ವರ್ಗಾವಣೆಯಾಗಲಿದ್ದು, ಅಂತಿಮವಾಗಿ ಸಾಮಾನ್ಯ ಜನರ ಜೇಬಿಗೆ ಭಾರಿ ಹೊರೆಯಾಗಲಿದೆ ಎಂದು ಎಐಸಿಸಿ ಎಸ್.ಸಿ ವಿಭಾಗದ ರಾಷ್ಟ್ರೀಯ ಸಂಯೋಜಕ ಹಾಗೂ ಮಹಾರಾಷ್ಟ್ರ ಉಸ್ತುವಾರಿ ಡಾ. ಆನಂದ ಕುಮಾರ್ ಕಳವಳ ವ್ಯಕ್ತಪಡಿಸಿದ್ದಾರೆ.

ಡಿಜಿಟಲ್ ಪಾವತಿ ವ್ಯವಸ್ಥೆಯ ಯುಪಿಐಗೆ ಈಗ ಶುಲ್ಕದ ಕರಿನೆರಳು ಆವರಿಸಿದೆ. ವರ್ಷಗಳ ಕಾಲ ಸರಳ, ವೇಗ, ಸುರಕ್ಷಿತ ಮತ್ತು ಉಚಿತ? ಎಂಬ ಭರವಸೆಯೊಂದಿಗೆ ಜನರನ್ನು ನಂಬಿಸಿ ಡಿಜಿಟಲ್ ಪಾವತಿಯತ್ತ ಕರೆದೊಯ್ದ ಬಳಿಕ, 2,000ಕ್ಕಿಂತ ಹೆಚ್ಚಿನ ವ್ಯವಹಾರಗಳಿಗೆ 0.4% ಮರ್ಚೆಂಟ್ ಡಿಸ್ಕೌಂಟ್ ರೇಟ್ (ಎಂ.ಡಿ.ಆರ್) ತೆರಿಗೆ ವ್ಯವಸ್ಥೆ ಜಾರಿಗೆ ತರಲಾಗಿದೆ. ಯುಪಿಐಯನ್ನು ದೇಶದಾದ್ಯಂತ ವ್ಯಾಪಕಗೊಳಿಸಲು ಸರ್ಕಾರ 2021–22ರಿಂದ 2024–25ರವರೆಗೆ ಯುಪಿಐ ಪರಿಸರ ವ್ಯವಸ್ಥೆಗೆ ಸುಮಾರು 8,730 ಕೋಟಿ ಪ್ರೋತ್ಸಾಹಧನ ನೀಡಿದೆ. ವ್ಯವಹಾರ ಶುಲ್ಕ ವಿಧಿಸುವ ಪ್ರಸ್ತಾವವೇ ಇಲ್ಲ ಎಂದು ಸರ್ಕಾರ ಕಳೆದ ವರ್ಷ ಹೇಳಿತ್ತು. ಹಾಗಿದ್ದರೆ ಕೇವಲ ಒಂದು ವರ್ಷದೊಳಗೆ ನೀತಿಯಲ್ಲಿ ಇಂತಹ ಮಹತ್ವದ ಬದಲಾವಣೆ ತಂದಿದ್ದು ಏಕೆ? ಎಂದು ಪ್ರಶ್ನಿಸಿದ್ದಾರೆ.

ಈ ಕುರಿತು ಹೇಳಿಕೆ ಬಿಡುಗಡೆ ಮಾಡಿರುವ ಅವರು, ಅಮೆಜಾನ್ ಹುಲ್ಲುಗಾವಲಿನಂತೆ ಡಿಜಿಟಲ್ ಪಾವತಿ ವ್ಯವಸ್ಥೆ ಇದೀಗ ದೇಶದಲ್ಲಿ ಸಮೃದ್ಧವಾಗಿದ್ದು, ಜಗತ್ತಿನಲ್ಲಿಯೇ ಅತ್ಯಂತ ಹೆಚ್ಚು ವ್ಯವಹಾರ ನಡೆಸುವ ದೇಶವಾಗಿ ಹೊರ ಹೊಮ್ಮಿದೆ. ಡಿಜಿಟಲ್ ಪಾವತಿ ವ್ಯವಸ್ಥೆಯ ನಿರ್ವಹಣೆ ಹೆಸರಿನಲ್ಲಿ ವ್ಯಾಪಾರಿಗಳ ಮೇಲೆ ಹೊರೆ ವಿಧಿಸಿರುವುದು ಸರಿಯಲ್ಲ. ವ್ಯಾಪಾರಿ ತೆರಿಗೆ ಪಾವತಿಸುತ್ತಾನೆ. ಕೊನೆಗೆ ಗ್ರಾಹಕನೇ ತೆರಿಗೆ ಭರಿಸುವ ಬಲಿಪಶುವಾಗಲಿದ್ದಾನೆ. ವ್ಯಾಪಾರಿಯ ವ್ಯವಹಾರ ವೆಚ್ಚ ಹೆಚ್ಚಾದಾಗ, ಆ ಹೆಚ್ಚುವರಿ ಖರ್ಚುಗಳನ್ನು ಸರಕುಗಳ ಬೆಲೆ, ಸೇವಾ ಶುಲ್ಕ ಅಥವಾ ಬೇರೆ ರೂಪದಲ್ಲಿ ಗ್ರಾಹಕರ ಮೇಲೆ ವರ್ಗಾಯಿಸಲಿದ್ದಾರೆ. ಚಹಾ ಅಂಗಡಿಯಿಂದ ತರಕಾರಿ ವ್ಯಾಪಾರಿ ವರೆಗೆ, ಆಟೋಚಾಲಕರಿಂದ ಸಣ್ಣ ಉದ್ಯಮಿಗಳವರೆಗೆ, ಬ್ಯಾಂಕ್ ಖಾತೆ ಮತ್ತು ಮೊಬೈಲ್ ಇರುವ ಬಹುತೇಕ ಜನ ಡಿಜಿಟಲ್ ಪಾವತಿಗೆ ಒಗ್ಗಿಕೊಂಡಿದ್ದಾರೆ. ಕುರಿ ಕೊಬ್ಬಿದರೆ ಕುರಬನಿಗೆ ಲಾಭ ಎನ್ನುವಂತೆ ಕುರಿಯನ್ನು ಕೊಬ್ಬಿಸಿ ಬಲಿಕೊಡಲು ಸರ್ಕಾರ ಮುಂದಾಗಿದೆ. ಈ ವ್ಯವಸ್ಥೆಯ ಬಗ್ಗೆ ವಿಶ್ವಾಸ ಮೂಡಿಸಲು ವರ್ಷಗಳೇ ಬೇಕಾಯಿತು. ಆದರೆ ಶುಲ್ಕದ ವ್ಯವಸ್ಥೆ ಹಂತಹಂತವಾಗಿ ವಿಸ್ತರಿಸಿದರೆ ಹೇಗೆ ಎಂಬ ಆತಂಕ ವ್ಯಕ್ತವಾಗಿದೆ. ಇಂದು 2,000 ಮಿತಿ. ನಾಳೆ ಇನ್ನಷ್ಟು ಹೆಚ್ಚಾದರೆ? ಇಂದು ನಿರ್ದಿಷ್ಟ ವ್ಯಾಪಾರಿ, ವ್ಯವಹಾರ, ಮುಂದೆ ಇತರ ವ್ಯವಹಾರಗಳಿಗೂ ಶುಲ್ಕ ವಿಧಿಸುವುದಿಲ್ಲ ಎಂಬ ಭರವಸೆ ಎಲ್ಲಿದೆ? ಎಂದು ಡಾ. ಆನಂದ ಕುಮಾರ್ ಪ್ರಶ್ನಿಸಿದ್ದಾರೆ.

ಯುಪಿಐ ಪಾವತಿ ಪರಿಸರದಲ್ಲಿ ಶುಲ್ಕದ ಬಾಗಿಲು ತೆರೆಯಲಾಗಿದೆ. ಇಂದು 2,000ಕ್ಕಿಂತ ಹೆಚ್ಚಿನ ನಿರ್ದಿಷ್ಟ ವ್ಯವಹಾರಗಳಿಗೆ ಮಾತ್ರ ಅನ್ವಯಿಸುವ ಶುಲ್ಕ ನಾಳೆ ಇನ್ನಷ್ಟು ವ್ಯವಹಾರಗಳಿಗೆ ವಿಸ್ತರಿಸಲಿದೆ. ಡಿಜಿಟಲ್ ಇಂಡಿಯಾದ ಯಶಸ್ಸಿಗೆ ಯುಪಿಐ ಪ್ರಮುಖ ಸಾಧನವಾಗಿದ್ದರೆ, ಅದರ ವೆಚ್ಚವನ್ನು ಸಾರ್ವಜನಿಕ ಮೂಲಸೌಕರ್ಯದಂತೆ ಸರ್ಕಾರವೇ ಭರಿಸಬೇಕಿತ್ತು. ಯುಪಿಐ ಭಾರತದ ತಂತ್ರಜ್ಞಾನ ಸಾಮರ್ಥ್ಯದ ಪ್ರತೀಕ. ಅದನ್ನು ದುರ್ಬಲಗೊಳಿಸುವ ಯಾವುದೇ ನೀತಿ ದೇಶದ ಡಿಜಿಟಲ್ ಪ್ರಗತಿಗೆ ಹಿನ್ನಡೆಯಾಗಲಿದೆ. ಡಿಜಿಟಲ್ ಕ್ರಾಂತಿ ಎಂದರೆ ಕೇವಲ ವ್ಯವಹಾರಗಳ ಸಂಖ್ಯೆ ಹೆಚ್ಚಿಸುವುದಲ್ಲ. ಅದರ ಅರ್ಥ ಸಾಮಾನ್ಯ ನಾಗರಿಕನಿಗೆ ಸುಲಭ, ಕಡಿಮೆ ವೆಚ್ಚದ ಮತ್ತು ವಿಶ್ವಾಸಾರ್ಹ ಹಣಕಾಸು ವ್ಯವಸ್ಥೆ ಕಲ್ಪಿಸುವುದು ನೈಜ ಕ್ರಾಂತಿಯಾಗಲಿದೆ. ಯುಪಿಐಯನ್ನು ವಿಶ್ವದ ಮಾದರಿ ಎಂದು ಬಿಂಬಿಸುವುದಾದರೆ, ಅದರ ಯಶಸ್ಸಿನ ಫಲವೂ ಜನರಿಗೇ ಸಿಗಬೇಕು. ಶುಲ್ಕದ ಹೊರೆ ನಿಧಾನವಾಗಿ ಜನರ ಜೇಬಿಗೆ ಭಾರವಾಗಲಿದೆ. ಯುಪಿಐ ಭಾರತದ ಜನರ ಡಿಜಿಟಲ್ ಹಕ್ಕಿನಂತಿದ್ದ ವ್ಯವಸ್ಥೆಯನ್ನು ಆದಾಯದ ಮತ್ತೊಂದು ಮಾರ್ಗವನ್ನು ರೂಪಿಸಿರುವುದು ಸರಿಯಲ್ಲ. ತೆರಿಗೆ ವಿಧಿಸಿರುವುದನ್ನು ಕೈಬಿಟ್ಟು ಜನಸಾಮಾನ್ಯರ ಡಿಜಿಟಲ್ ಸಬಲೀಕರಣದ ಸಾಧನವಾಗಿಯೇ ಉಳಿಸುವುದು ಸರ್ಕಾರದ ಜವಾಬ್ದಾರಿಯಾಗಿದೆ ಎಂದು ಹೇಳಿದ್ದಾರೆ.

Chief reporter : SANDEEP RENU ✆ 99728 72151 | Executive Editor : SHARAT JYOTSNA B.R ✆ 9886766483 ✉ vaarthe@gmail.com

Published from: K10,'A'/4, Khriki Extension, Malviya Nagar, New Delhi-110 017. Phone: 95-120-3917916-20
Printed at: Jyoti Printers, E-94, Sector 6, Noida, UP. Phone: 0120-4232687 Off : E-94,Sector 6, Noida,UP | RNI No. DELKAN/2003/10363

24 ವರ್ಷಗಳಿಂದ ದೆಹಲಿಯಲ್ಲಿ ಪ್ರಕಟವಾಗುತ್ತಿರುವ ಪ್ರಪ್ರಥಮ ರಾಷ್ಟ್ರೀಯ ಕನ್ನಡ ದಿನಪತ್ರಿಕೆ

ದೆಹಲಿ ವಾರ್ತೆ

ಸೆಪ್ಟಂಬರ್ 17 2026 ಗುರುವಾರ

## ಒಳಪುಟಗಳಲ್ಲಿ

ಪಾಕ್‌ನಲ್ಲಿ ಇಂಧನ ಅಭಾವ: ಭಾರತಕ್ಕೂ ಎಚ್ಚರಿಕೆ ಗಂಟೆ - ಪು.4

ಎಸಿ ರೂಂನಲ್ಲಿ ಕೂರಬೇಡಿ, ರಂಗಕ್ಕಿಳಿಯಿರಿ: ಅಧಿಕಾರಿಗಳಿಗೆ ಸಚಿವ ಚಲುವರಾಯಸ್ವಾಮಿ ಸೂಚನೆ - ಪು.5

ಅಮೆರಿಕ ಮಹಿಳೆಗೆ ಪರಿಹಾರ ನೀಡುವ ಆದೇಶ ಪಾಲಿಸದ ಹೋಮ್‌ಸ್ಟೇ ಮಾಲೀಕನ ವಿರುದ್ಧ ನ್ಯಾಯಾಂಗ ನಿಂದನೆ ಅರ್ಜಿ ಸಲ್ಲಿಕೆ - ಪು.7

# ಕಾವೇರಿ ನೀರು ಹಂಚಿಕೆ: 6 ಸಾವಿರಕ್ಕೆ ಬದಲು 3 ಸಾವಿರ ಕ್ಯೂಸೆಕ್‌ಗೆ ಇಳಿಸಿ

## ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರಕ್ಕೆ ಕರ್ನಾಟಕ ಮನವಿ

**ನವದೆಹಲಿ, ಸೆ.16: ಕಾವೇರಿ ಜಲಾನಯನ ಪ್ರದೇಶದಲ್ಲಿ ಮಳೆ ಹಾಗೂ ಜಲಾಶಯಗಳ ಒಳಹರಿವು ಗಣನೀಯವಾಗಿ ಕುಸಿದಿರುವ ಹಿನ್ನೆಲೆಯಲ್ಲಿ, ಬಿಳಿಗುಂಡ್ಲುವಿನಲ್ಲಿ ತಮಿಳುನಾಡಿಗೆ ಖಚಿತ ಪಡಿಸಬೇಕಾದ ನೀರಿನ ಪ್ರಮಾಣವನ್ನು ಕಡಿತ ಗೊಳಿಸುವಂತೆ ಕರ್ನಾಟಕ ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರಕ್ಕೆ ಮನವಿ ಮಾಡಿದೆ.**

CWMAಯ 57ನೇ ಸಭೆಯಲ್ಲಿ ಸೆಪ್ಟೆಂಬರ್ 9ರಿಂದ 23ರವರೆಗೆ ಪ್ರತಿದಿನ ಬಿಳಿಗುಂಡ್ಲುವಿನಲ್ಲಿ 6,000 ಕ್ಯೂಸೆಕ್ ನೀರು ಖಚಿತಪಡಿಸುವಂತೆ ಕರ್ನಾಟಕಕ್ಕೆ ಸೂಚಿಸಲಾಗಿತ್ತು. ಆದರೆ ಪ್ರಸ್ತುತ ಪರಿಸ್ಥಿತಿಯನ್ನು ಪರಿಗಣಿಸಿ ಈ ಪ್ರಮಾಣವನ್ನು 3,000 ಕ್ಯೂಸೆಕ್‌ಗೆ ಇಳಿಸುವಂತೆ ರಾಜ್ಯ ಮನವಿ ಮಾಡಿದೆ.

ಸೆಪ್ಟೆಂಬರ್ 15ರ ವೇಳೆಗೆ ಕರ್ನಾಟಕದ ನಾಲ್ಕು ಪ್ರಮುಖ ಜಲಾಶಯಗಳಲ್ಲಿ ಒಟ್ಟು 55.389 ಟಿಎಂಸಿ ಲೈವ್ ಸ್ಟೋರೇಜ್ ಮಾತ್ರ ಉಳಿದಿದ್ದು, ಇದು ಒಟ್ಟು ಗರಿಷ್ಠ ಸಂಗ್ರಹ ಸಾಮರ್ಥ್ಯದ ಶೇ.52.97ರಷ್ಟಾಗಿದೆ. ಜೂನ್ 1ರಿಂದ ಸೆಪ್ಟೆಂಬರ್ 15ರವರೆಗೆ ಈ ಜಲಾಶಯಗಳಿಗೆ 111 ಟಿಎಂಸಿ ಒಳಹರಿವು ಬಂದಿದ್ದು, ಇದೇ ಅವಧಿಯ 30 ವರ್ಷಗಳ ಸರಾಸರಿ ಒಳಹರಿವು 228.108 ಟಿಎಂಸಿಯಾಗಿದೆ. ಅಂದರೆ ಶೇ.51ಕ್ಕೂ ಅಧಿಕ ಕೊರತೆ ದಾಖಲಾಗಿದೆ ಎಂದು ಕರ್ನಾಟಕ ತಿಳಿಸಿದೆ.

ಆಗಸ್ಟ್ 27ರಂದು ನಾಲ್ಕು ಜಲಾಶಯಗಳ ಒಟ್ಟು ಒಳಹರಿವು 26,930 ಕ್ಯೂಸೆಕ್ ಇದ್ದದ್ದು, ಸೆಪ್ಟೆಂಬರ್ 8ರಂದು 3,887 ಕ್ಯೂಸೆಕ್‌ಗೆ ಕುಸಿದಿದೆ. ಬಳಿಕ ಸೆಪ್ಟೆಂಬರ್ 15ರ ವೇಳೆಗೆ ಒಳಹರಿವು ಸುಮಾರು 3,000 ಕ್ಯೂಸೆಕ್‌ಗೆ ಇಳಿದಿದೆ ಎಂದು ರಾಜ್ಯದ ಮನವಿಯಲ್ಲಿ ಉಲ್ಲೇಖಿಸಲಾಗಿದೆ.



ಸೆಪ್ಟೆಂಬರ್ 8ರಿಂದ 18ರವರೆಗೆ ಕಾವೇರಿ ಜಲಾನಯನ ಪ್ರದೇಶದಲ್ಲಿ ಯಾವುದೇ ಪ್ರಮುಖ ಮಳೆಯ ಸಾಧ್ಯತೆ ಇಲ್ಲ. ಒಟ್ಟಾರೆ ಮಳೆ ವಾಡಿಕೆಗಿಂತ ಕಡಿಮೆಯಾಗುವ ಸಾಧ್ಯತೆ ಇದೆ ಎಂದು ಭಾರತೀಯ ಹವಾಮಾನ ಇಲಾಖೆ ಪ್ರತಿನಿಧಿ ಸಭೆಯಲ್ಲಿ ತಿಳಿಸಿರುವುದನ್ನೂ ಕರ್ನಾಟಕ ತನ್ನ ಮನವಿಯಲ್ಲಿ ಉಲ್ಲೇಖಿಸಿದೆ. ಈ ಮಳೆ ಕೊರತೆ ಅಕ್ಟೋಬರ್ ಮಧ್ಯಭಾಗದವರೆಗೂ ಮುಂದುವರಿಯುವ ಸಾಧ್ಯತೆಯಿದೆ ಎಂದು ರಾಜ್ಯ ಹೇಳಿದೆ.

ಬಿಳಿಗುಂಡ್ಲುವಿನಲ್ಲಿಯೂ ನೀರಿನ ಹರಿವು ತೀವ್ರವಾಗಿ ಕಡಿಮೆಯಾಗಿದೆ. ಜೂನ್ 1ರಿಂದ ಸೆಪ್ಟೆಂಬರ್ 15ರವರೆಗೆ ಒಟ್ಟು 38.12 ಟಿಎಂಸಿ ಹರಿವು ದಾಖಲಾಗಿದ್ದು, ಸಾಮಾನ್ಯ ವರ್ಷದಲ್ಲಿ ಇದೇ ಅವಧಿಗೆ ನಿಗದಿಯಾಗಿರುವ ಪ್ರಮಾಣ 104.760 ಟಿಎಂಸಿ ಎಂದು ಕರ್ನಾಟಕ ತಿಳಿಸಿದೆ.

ಸಂಕಷ್ಟದ ವರ್ಷದಲ್ಲಿ ಲಭ್ಯವಿರುವ ನೀರನ್ನು ಅನುಪಾತದ ಆಧಾರದ ಮೇಲೆ ಹಂಚಿಕೆ ಮಾಡಬೇಕು ಎಂಬ ಕಾವೇರಿ ಜಲವಿವಾದಗಳ ನ್ಯಾಯ ಮಂಡಳಿಯ ನಿಲುವನ್ನು CWMA ಸಮರ್ಪಕವಾಗಿ ಪರಿಗಣಿಸಿಲ್ಲ ಎಂದು ಕರ್ನಾಟಕ ವಾದಿಸಿದೆ. ಬಿಳಿಗುಂಡ್ಲುವಿನ ಹರಿವಿನ ಕೊರತೆಗೆ ಕರ್ನಾಟಕದ ಜಲಾಶಯಗಳಲ್ಲಿನ ನೀರಿನ ಪ್ರಮಾಣ ಮಾತ್ರ ಕಾರಣವಲ್ಲ; ಮಧ್ಯಂತರ ಜಲಾನಯನ ಪ್ರದೇಶವೂ ಪ್ರಮುಖ ಪಾತ್ರ ವಹಿಸುತ್ತದೆ ಎಂದು ರಾಜ್ಯ ಹೇಳಿದೆ.

ಕರ್ನಾಟಕದ ಪ್ರಕಾರ, ಬಿಳಿಗುಂಡ್ಲುವಿನಲ್ಲಿ ತಮಿಳುನಾಡಿಗೆ ದೊರೆಯಬೇಕಾದ ನೀರಿನ ಒಂದು ದೊಡ್ಡಭಾಗ ಮಧ್ಯಂತರ ಜಲಾನಯನ ಪ್ರದೇಶದಿಂದ ಬರುತ್ತದೆ. ಆದ್ದರಿಂದ ಅಲ್ಲಿನ ಹರಿವು ಕಡಿಮೆಯಾಗಿರುವ ಸಂದರ್ಭದಲ್ಲಿ ಅದರ ಸಂಪೂರ್ಣ ಹೊಣೆಯನ್ನು ಕರ್ನಾಟಕದ ಜಲಾಶಯಗಳ ಮೇಲೆ ಹೊರಿಸುವಂತಿಲ್ಲ ಎಂದು ಮನವಿಯಲ್ಲಿ ತಿಳಿಸಲಾಗಿದೆ.

ಕರ್ನಾಟಕದಲ್ಲಿ ನೀರಾವರಿ ಮತ್ತು ಕುಡಿಯುವ ನೀರಿನ ಅಗತ್ಯಕ್ಕೆ 144 ಟಿಎಂಸಿ ಹಾಗೂ ಫೆಬ್ರವರಿಯಿಂದ ಮೇ ವರೆಗೆ ಪರಿಸರ ಹರಿವಿಗಾಗಿ 10 ಟಿಎಂಸಿ ಸೇರಿ ಒಟ್ಟು 154 ಟಿಎಂಸಿ ಅಗತ್ಯವಿದೆ ಎಂದು ರಾಜ್ಯ ತಿಳಿಸಿದೆ. ಆದರೆ ಸೆಪ್ಟೆಂಬರ್ 15ರಂದು ನಾಲ್ಕು ಜಲಾಶಯಗಳಲ್ಲಿ ಲಭ್ಯವಿರುವ ನೀರು 55.389 ಟಿಎಂಸಿ ಮಾತ್ರ. ಮುಂದಿನ ಒಳಹರಿವು ಸುಮಾರು 20 ಟಿಎಂಸಿಗಿಂತ ಹೆಚ್ಚಾಗದು ಎಂಬ ಅಂದಾಜನ್ನೂ ರಾಜ್ಯ ಮುಂದಿಟ್ಟಿದೆ.

ಈ ಹಿನ್ನೆಲೆಯಲ್ಲಿ ಬಿಳಿಗುಂಡ್ಲುವಿಗೆ ನೀರು ಬಿಡುಗಡೆ ಮುಂದುವರಿಸಿದರೆ ಕರ್ನಾಟಕದ ಕುಡಿಯುವ ನೀರು, ನೀರಾವರಿ ಹಾಗೂ ಇತರ ಅಗತ್ಯಗಳ ಮೇಲೆ ಪರಿಣಾಮ ಬೀರುವ ಸಾಧ್ಯತೆಯಿದೆ ಎಂದು ರಾಜ್ಯ ತಿಳಿಸಿದೆ. ರೈತರ ನಿಂತಿರುವ ಬೆಳೆಗಳ ಮೇಲೂ ಪರಿಣಾಮ ಉಂಟಾಗಬಹುದು ಎಂದು ಮನವಿಯಲ್ಲಿ ಉಲ್ಲೇಖಿಸಲಾಗಿದೆ.

ತಮಿಳುನಾಡಿನ ಮೆಟ್ಟೂರು ಜಲಾಶಯದಲ್ಲಿ ಸೆಪ್ಟೆಂಬರ್ 15ರಂದು 50.225 ಟಿಎಂಸಿ ಲೈವ್ ಸ್ಟೋರೇಜ್ ಇದೆ ಎಂದು ಕರ್ನಾಟಕ ಹೇಳಿದೆ.

ಮಧ್ಯಂತರ ಜಲಾನಯನ ಪ್ರದೇಶದಿಂದ ತಮಿಳುನಾಡಿಗೆ ಸುಮಾರು 40 ಟಿಎಂಸಿ ಅಥವಾ ಅದಕ್ಕಿಂತ ಹೆಚ್ಚು ನೀರು ಲಭ್ಯವಾಗುವ ಸಾಧ್ಯತೆಯಿದೆ. ಇದರಿಂದ ತಮಿಳುನಾಡಿಗೆ ಒಟ್ಟು 90 ಟಿಎಂಸಿ ನೀರು ಲಭ್ಯವಾಗಬಹುದು ಎಂಬ ಲೆಕ್ಕವನ್ನು ರಾಜ್ಯ ಮುಂದಿಟ್ಟಿದೆ.

ಹೀಗಾಗಿ ಪ್ರಸ್ತುತ ನೀರಿನ ಕೊರತೆಯ ಪರಿಸ್ಥಿತಿಯನ್ನು ಪರಿಗಣಿಸಿ, ಸೆಪ್ಟೆಂಬರ್ 9ರಿಂದ 23ರವರೆಗೆ ಬಿಳಿಗುಂಡ್ಲುವಿನಲ್ಲಿ ಪ್ರತಿದಿನ 6,000 ಕ್ಯೂಸೆಕ್ ನೀರು ಖಚಿತಪಡಿಸುವ ಬದಲು 3,000 ಕ್ಯೂಸೆಕ್ ನೀರು ಖಚಿತಪಡಿಸುವಂತೆ ಕರ್ನಾಟಕ CWMAಗೆ ಮನವಿ ಮಾಡಿದೆ.

# ನಟ ಅನಂತ್‌ನಾಗ್‌ಗೆ ಪ್ರತಿಷ್ಠಿತ ದಾದಾಸಾಹೇಬ್ ಫಾಲ್ಕೆ ಪ್ರಶಸ್ತಿ

**ಬೆಂಗಳೂರು ಸೆ.16:** ಕನ್ನಡ ಚಿತ್ರರಂಗದ ಖ್ಯಾತ ನಟ ಅನಂತ್‌ನಾಗ್ ಅವರಿಗೆ 2024ನೇ ಸಾಲಿನ ಪ್ರತಿಷ್ಠಿತ ದಾದಾ ಸಾಹೇಬ್ ಫಾಲ್ಕೆ ಪ್ರಶಸ್ತಿ ಘೋಷಿಸಲಾಗಿದೆ. ಮೇರುನಟ ಡಾ. ರಾಜ್‌ಕುಮಾರ್ ಹಾಗೂ ವಿ.ಕೆ.ಮೂರ್ತಿ ನಂತರ ಭಾರತೀಯ ಚಿತ್ರರಂಗದ ಅತ್ಯುನ್ನತ ಪ್ರಶಸ್ತಿಗೆ ಭಾಜನರಾದ 3ನೇ ಕನ್ನಡಿಗನೆಂಬ ಹೆಗ್ಗಳಿಕೆಗೆ ಅನಂತ್‌ನಾಗ್ ಪಾತ್ರರಾಗಿದ್ದಾರೆ.



**ಸೆ.22ರಂದು ಗುಜರಾತ್‌ನಲ್ಲಿ ನಡೆಯುವ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿ ಸಮಾರಂಭದಲ್ಲಿ ಪ್ರದಾನ**

ಸೆಪ್ಟೆಂಬರ್ 22ರಂದು ಗುಜರಾತ್‌ನ ಕೆವಾಡಿಯಾದಲ್ಲಿ ನಡೆಯುವ 72ನೇ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿ ಸಮಾರಂಭದಲ್ಲಿ ಈ ಗೌರವ ಪ್ರದಾನ ನಡೆಯಲಿದೆ.

ಕನ್ನಡ ಚಿತ್ರರಂಗಕ್ಕೆ ನೀಡಿದ ಅದ್ಭುತ ಕೊಡುಗೆಗಾಗಿ 1995ರ ಸಾಲಿನ (43ನೇ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿ) ದಾದಾಸಾಹೇಬ್ ಫಾಲ್ಕೆ ಪ್ರಶಸ್ತಿಯನ್ನು ವರನಟ ಡಾ. ರಾಜ್‌ಕುಮಾರ್ ಅವರಿಗೆ ನೀಡಿ ಗೌರವಿಸಲಾಗಿತ್ತು.

ಇವರು ಈ ಪ್ರಶಸ್ತಿಯನ್ನು ಪಡೆದ ಮೊದಲ ಕನ್ನಡಿಗ ನಟ ಎಂಬ ಹೆಗ್ಗಳಿಕೆ ಪಡೆದಿದ್ದರು. ಬಳಿಕ ಕನ್ನಡರಾದರೂ ಬಾಲಿವುಡ್‌ನಲ್ಲಿ ನೆಲೆಗೊಂಡ ಖ್ಯಾತ ಛಾಯಾಗ್ರಾಹಕ ವಿ.ಕೆ.ಮೂರ್ತಿ ಅವರಿಗೆ ನೀಡಲಾಗಿತ್ತು.

ಆದರೆ ದಾದಾಸಾಹೇಬ್ ಫಾಲ್ಕೆ ಪ್ರಶಸ್ತಿ ಆಯ್ಕೆ ಸಮಿತಿಯ ಶಿಫಾರಸಿನ ಮೇರೆಗೆ 2024ನೇ ಸಾಲಿನ ಗೌರವಕ್ಕೆ ಅನಂತ್ ನಾಗ್ ಅವರು ಭಾಜನರಾಗಿರೋದು ಕನ್ನಡಿಗರಿಗೆ ಸಂತಸದ ಜೊತೆಗೆ ಗೌರವವನ್ನೂ ಹೆಚ್ಚಿಸಿದೆ.

ಐದು ದಶಕಗಳಿಗೂ ಹೆಚ್ಚು ಕಾಲ ಚಿತ್ರಗಳಲ್ಲಿ ಸಕ್ರಿಯರಾಗಿರುವ ಅನಂತ್ ನಾಗ್, ಕನ್ನಡ, ಹಿಂದಿ ಮರಾಠಿ ಸೇರಿದಂತೆ ಹಲವು ಭಾಷೆಗಳಲ್ಲಿ 300ಕ್ಕೂ ಹೆಚ್ಚು ಚಿತ್ರಗಳಲ್ಲಿ ಅಭಿನಯಿಸಿದ್ದಾರೆ.

ಕಲಾತ್ಮಕ ಮತ್ತು ವಾಣಿಜ್ಯ ಮಾದರಿಯ ಚಿತ್ರಗಳಲ್ಲಿ ಮನೋಜ್ಞ ಅಭಿನಯದ ಮೂಲಕ ಕೋಟ್ಯಂತರ ಅಭಿಮಾನಿಗಳ ಮನ ಗೆದ್ದಿರುವ ಅನಂತನಾಗ್ ಅವರಿಗೆ ಪ್ರತಿಷ್ಠಿತ ಪ್ರಶಸ್ತಿ ಲಭಿಸಿರುವುದು ಕನ್ನಡ ಚಿತ್ರರಂಗದ ದೊರೆತ ಹೆಮ್ಮೆಯಾಗಿದೆ.

**ಪ್ರಧಾನಿ ಅಭಿನಂದನೆ:** ಪ್ರಧಾನಮಂತ್ರಿ ನರೇಂದ್ರ ಮೋದಿಯವರು ಸಿಹಿಸುದ್ದಿಯನ್ನು ಹಂಚಿಕೊಂಡು ಹಿರಿಯ ನಟನಿಗೆ ಎಕ್ಸ್ ಖಾತೆಯಲ್ಲಿ ಅಭಿನಂದನೆ ಸಲ್ಲಿಸಿದ್ದಾರೆ.

# ಡಿಜಿಟಲ್, ನಗದುರಹಿತ ಭಾರತದ ಕನಸು ನುಚ್ಚುನೂರು

## ಯುಪಿಐ ವ್ಯವಹಾರ ತೆರಿಗೆ ನರೇಂದ್ರ ಮೋದಿ ಸರ್ಕಾರದ ಮಹಾದ್ರೋಹ: ರಣದೀಪ್‌ಸಿಂಗ್ ಸುರ್ಜೇವಾಲಾ

**ಬೆಂಗಳೂರು, ಸೆ.16:** ಯುಪಿಐ ವಹಿವಾಟಿಗೆ ತೆರಿಗೆ ವಿಧಿಸಿರುವುದು ಜನತೆಗೆ ಮೋದಿ ಸರ್ಕಾರ ಮಾಡಿರುವ ಮಹಾದ್ರೋಹ ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲಾ ಆಕ್ರೋಶ ವ್ಯಕ್ತಪಡಿಸಿದ್ದಾರೆ.



ನಗರದಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಬೆಲೆ ಏರಿಕೆಯಿಂದ ಜನರ ಜೇಬಿಗೆ ಕತ್ತರಿ ಬಿದ್ದಿದ್ದು, ಡಿಜಿಟಲ್ ಮತ್ತು ನಗದುರಹಿತ ಭಾರತದ ಕನಸು ನುಚ್ಚುನೂರಾಗಿದೆ ಎಂದು ಕಿಡಿಕಾರಿದರು. ಬೆಂಗಳೂರಿನಲ್ಲಿ ಅತಿ ಹೆಚ್ಚು ಯುಪಿಐ ವ್ಯವಹಾರ ನಡೆಯುತ್ತಿದ್ದು, ಬಡವರು ಮತ್ತು ಮಧ್ಯಮವರ್ಗದವರ ಮೇಲೆ ಇದರ ಪರಿಣಾಮ ಬೀರಲಿದೆ. ನ್ಯಾಷನಲ್ ಪೇಮೆಂಟ್ಸ್ ಕಾರ್ಪೊರೇಷನ್ 0.4% ಶುಲ್ಕ ವಿಧಿಸುತ್ತಿದೆ. ಇದು ಮೋದಿ ಸರ್ಕಾರ ಯುಪಿಐ ಅನ್ನು ಕಲೆಕ್ಷನ್ ಮಷಿನ್ ಆಗಿ ಪರಿವರ್ತಿಸುತ್ತಿದೆ" ಎಂದು ಸುರ್ಜೇವಾಲಾ ದೂರಿದರು

ಅಮೆರಿಕನ್ ಕಂಪನಿಗಳಿಗೆ ಲಾಭ, ಸಾಮಾನ್ಯ ಭಾರತೀಯರಿಗೆ ನಷ್ಟ. 2026ರ ಅಕ್ಟೋಬರ್ 15 ರಿಂದ ಜಾರಿಗೆ ಬರುವಂತೆ ರೂ. 2000ಕ್ಕಿಂತ ಹೆಚ್ಚಿನ ಯುಪಿಐ ವ್ಯವಹಾರಗಳ ಮೇಲೆ "ಯುಪಿಐ ವ್ಯವಹಾರ ತೆರಿಗೆ" ವಿಧಿಸಲು ಕೇಂದ್ರದ ಬಿಜೆಪಿ ಸರ್ಕಾರ ದಾರಿ ಮಾಡಿಕೊಟ್ಟಿದ್ದು, 2026ರ ಸೆಪ್ಟೆಂಬರ್ 14ರ ದಿನವು "ಡಿಜಿಟಲ್ ಪಲ್ಟಿ" ಹೊಡೆದ ಹಾಗೂ "ದ್ರೋಹ ಮತ್ತು ಶರಣಾಗತಿ"ಯ ದಿನವಾಗಿ ನೆನಪಿನಲ್ಲಿ ಉಳಿಯಲಿದೆ. ಸರ್ಕಾರ ಮತ್ತು ನ್ಯಾಷನಲ್ ಪೇಮೆಂಟ್ಸ್ ಕಾರ್ಪೊರೇಷನ್ ಆಫ್ ಇಂಡಿಯಾ ಪ್ರಸ್ತುತ ಪಿ2ಎಮ್ ವ್ಯಕ್ತಿಯಿಂದ ವ್ಯಾಪಾರಿಗೆ – ವ್ಯವಹಾರಗಳಿಗೆ 0.4% ಶುಲ್ಕವನ್ನು ನಿಗದಿಪಡಿಸುತ್ತಿವೆ. ಖಂಡಿತವಾಗಿಯೂ, ಭಾರತ ಸರ್ಕಾರವು ಕೇವಲ ಒಂದು ಅಧಿಸೂಚನೆ ಹೊರಡಿಸುವ ಮೂಲಕ ಈ ವ್ಯವಹಾರ ಶುಲ್ಕವನ್ನು ಯಾವುದೇ ಸಮಯದಲ್ಲಿ ಮತ್ತು ಯಾವುದೇ ವಹಿವಾಟಿನ ವಿಭಾಗದ ಮೇಲಾದರೂ ಹೆಚ್ಚಿಸಬಹುದು. ಡಿಜಿಟಲ್, ನಗದುರಹಿತ ಮತ್ತು ಒಳಗೊಳ್ಳುವಿಕೆಯ ಭಾರತ ನಿರ್ಮಾಣಕ್ಕೆ ಯುಪಿಐ ಒಂದು ಪ್ರಮುಖ ಅಸ್ತ್ರವಾಗಿತ್ತು, ಆದರೆ ಮೋದಿ ಸರ್ಕಾರವು ಸಾಮಾನ್ಯ ಜನರನ್ನು ಗುರಿಯಾಗಿಸಿಕೊಂಡು ಅದನ್ನು 'ತೆರಿಗೆ ವಿಧಿಸುವ ಮತ್ತು ಸಂಗ್ರಹಿಸುವ ಯಂತ್ರ'ವಾಗಿ ಪರಿವರ್ತಿಸುತ್ತಿದೆ. ಇದು ಬಿಜೆಪಿ ಸರ್ಕಾರವು ಸಾಮಾನ್ಯ ಭಾರತೀಯರಿಗೆ ಮಾಡಿದ "ದ್ರೋಹ, ಬೆನ್ನಿಗೆ ಚೂರಿ ಹಾಕಿ – ಮಹಾವಂಚನೆ"ಮಾಡಿದ ಕಥೆಯಾಗಿದೆ ಎಂದು ಸುರ್ಜೇವಾಲಾ ಕಿಡಿಕಾರಿದ್ದಾರೆ.

### ಯುಪಿಐ ಮೇಲಿನ ತೆರಿಗೆ ವಿರುದ್ಧ ದೇಶವೇ ಹೋರಾಡಬೇಕು

**ಯುಪಿಐ ವ್ಯವಹಾರದ ಮೇಲೆ ತೆರಿಗೆ ವಿಧಿಸಿರುವ ಕೇಂದ್ರ ಸರ್ಕಾರದ ವಿರುದ್ಧ ಇಡೀ ದೇಶವೇ ಹೋರಾಟ ನಡೆಸಬೇಕು ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅಭಿಪ್ರಾಯಪಟ್ಟರು. ಬೆಂಗಳೂರಿನ ಕೆಪಿಸಿಸಿ ಕಚೇರಿಯಲ್ಲಿ ಸುದ್ದಿಗಾರರ ಜೊತೆ ಮಾತನಾಡಿದ ಅವರು, ಯುಪಿಐ ವ್ಯವಹಾರದ ಮೇಲೆ ತೆರಿಗೆ ವಿಧಿಸಿರುವುದರ ವಿರುದ್ಧ ಕಾಂಗ್ರೆಸ್ ಹೋರಾಟ ಮಾಡುವುದೇ ಎಂದು ಕೇಳಿದಾಗ, ಇದು ಕೇವಲ ಕಾಂಗ್ರೆಸ್ ಪಕ್ಷದ ವಿಚಾರವಲ್ಲ. ಇಡೀ ದೇಶದ ಸಮಸ್ಯೆಯಾಗಿದೆ. ಕಾಂಗ್ರೆಸ್ ಪಕ್ಷ ವಿರೋಧ ಪಕ್ಷವಾಗಿದ್ದು, ಜನಸಾಮಾನ್ಯರ ಹಿತ ಕಾಯಲು ಹೋರಾಟ ಮಾಡಲಿದೆ. ಹೀಗಾಗಿ ನಮ್ಮ ಪ್ರಧಾನ ಕಾರ್ಯದರ್ಶಿಗಳು ದೇಶದ ಜನರ ಪರವಾಗಿ ಮಾಧ್ಯಮಗೋಷ್ಠಿ ನಡೆಸಿ ದೇಶದ ಜನರಿಗೆ ಸಂದೇಶ ರವಾನಿಸಿದ್ದಾರೆ ಎಂದು ತಿಳಿಸಿದರು.**



# ಯುಪಿಐ ಶುಲ್ಕ ವಿಧಿಸಿ ಅಮೆರಿಕ ಬೇಡಿಕೆಗೆ ಮಣಿದ ಕೇಂದ್ರ

**ನವದೆಹಲಿ, ಸೆ.16:** ಯುಪಿಐ ಮೇಲಿನ ಶೂನ್ಯ ಎಂಡಿಆರ್ ರದ್ದು ಮಾಡಿ ಶುಲ್ಕ ವಿಧಿಸುವ ಮೂಲಕ ಅಮೆರಿಕದ ಬೇಡಿಕೆಗೆ ಕೇಂದ್ರ ಸರ್ಕಾರ ಮಣಿದಿದೆ ಎಂದು ಕಾಂಗ್ರೆಸ್ ಆರೋಪಿಸಿದೆ. ಪ್ರಧಾನಿ ಮೋದಿ ಟ್ರಂಪ್‌ರನ್ನು ಓಲೈಸುತ್ತಿದ್ದಾರೆ ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ವಾಗ್ದಾಳಿ ನಡೆಸಿದ್ದಾರೆ. ಈ ಬಗ್ಗೆ ಜೈರಾಮ್ ರಮೇಶ್, ಅಮೆರಿಕದ ಕಾರ್ಡ್ ಕಂಪನಿಗಳಿಗೆ ಯುಪಿಐ ಜತೆ ಸ್ಪರ್ಧಿಸಲು ಅನುಕೂಲವಾಗಲೆಂದೇ ಶೇ.0.4ರಷ್ಟು ಎಂಡಿಆರ್ ಜಾರಿಗೊಳಿಸಲಾಗಿದೆಯೇ ಎಂದು ಪ್ರಶ್ನಿಸಿದ್ದಾರೆ. ಯುಪಿಐ ಉಚಿತವಾಗಿರುವುದರಿಂದ ವೀಸಾ ಮತ್ತು ಮಾಸ್ಟರ್‌ಕಾರ್ಡ್‌ಗೆ ತೊಂದರೆಯಾಗಿದೆ ಎಂದು ಅಮೆರಿಕದ ವ್ಯಾಪಾರ ಪ್ರತಿನಿಧಿ ಕಚೇರಿ ಈ ಹಿಂದೆ ಟೀಕಿಸಿತ್ತು ಎಂದು ಅವರು ಹೇಳಿದ್ದಾರೆ.



ಯುಪಿಐ ನಿರ್ವಹಣಾ ವೆಚ್ಚ ಹಾಗೂ ಹೊಸ ಎಂಡಿಆರ್ ನಿಯಮದ ಬಗ್ಗೆ ರಮೇಶ್ ಪ್ರಶ್ನೆ ಎತ್ತಿದ್ದಾರೆ. ಅಕ್ಟೋಬರ್ 15ರಿಂದ 2,000 ರೂ. ಮೇಲ್ಪಟ್ಟ ಆಯ್ದ ವ್ಯಕ್ತಿಯಿಂದ ವ್ಯಾಪಾರಿಗೆ ಪಾವತಿ (ಕಿ2ಬಿ) ಪಾವತಿಗಳಿಗೆ ಶೇ.0.4ರಷ್ಟು ಎಂಡಿಆರ್ ಜಾರಿಯಾಗಲಿದೆ. 75,000 ರೂ. ಮೇಲ್ಪಟ್ಟ ವಹಿವಾಟಿಗೆ ಗರಿಷ್ಠ 300 ರೂ. ಶುಲ್ಕ ಇರಲಿದೆ. ಆದರೆ, ಈ ಶುಲ್ಕ ಗ್ರಾಹಕರಿಗೆ ಅನ್ವಯಿಸುವುದಿಲ್ಲ ಎಂದು ಹಣಕಾಸು ಸಚಿವಾಲಯ ಸ್ಪಷ್ಟಪಡಿಸಿದೆ. ವ್ಯಕ್ತಿಯಿಂದ ವ್ಯಕ್ತಿಗೆ ಮಾಡುವ ಯುಪಿಐ ಪಾವತಿಗಳು ಉಚಿತವಾಗಿಯೇ ಮುಂದುವರಿಯಲಿದ್ದು, ಮಾಸಿಕ ಮಿತಿ ಅಥವಾ ಹೆಚ್ಚುವರಿ ಶುಲ್ಕ ಇರುವುದಿಲ್ಲ ಎಂದು ಸರ್ಕಾರ ತಿಳಿಸಿದೆ.

# ಇ.ಡಿ. ದಾಳಿ ಬೆನ್ನಲ್ಲೇ ನಾಳೆಯಿಂದ 2 ದಿನ ರಾಜ್ಯಕ್ಕೆ ಅಮಿತ್ ಶಾ ಭೇಟಿ

**ಬೆಂಗಳೂರು, ಸೆ.16:** ರಾಜ್ಯ ರಾಜಕೀಯದಲ್ಲಿ ಜಾರಿ ನಿರ್ದೇಶನಾಲಯದ (ಇ.ಡಿ.) ದಾಳಿ ತೀವ್ರಸಂಚಲನ ಮೂಡಿಸಿರುವ ಬೆನ್ನಲ್ಲೇ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಸೆಪ್ಟೆಂಬರ್ 18 ಮತ್ತು 19ರಂದು ರಾಜ್ಯಕ್ಕೆ ಎರಡು ದಿನಗಳ ಪ್ರವಾಸ ಕೈಗೊಂಡಿರುವುದು ಕುತೂಹಲ ಮೂಡಿಸಿದೆ.



ಇತ್ತೀಚೆಗಷ್ಟೇ ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಅವರ ಸಂಸ್ಥೆ ಹಾಗೂ ಆಪ್ತರ ಮೇಲೆ ಇ.ಡಿ ದಾಳಿ ನಡೆಸಿ ಶೋಧ ಕಾರ್ಯ ನಡೆಸಿರುವುದು ಆಡಳಿತ ಮತ್ತು ವಿಪಕ್ಷಗಳ ನಡುವೆ ಭಾರೀ ವಾಕ್ಸಮರಕ್ಕೆ ಕಾರಣವಾಗಿತ್ತು. ಈ ತನಿಖೆಯ ಕಾವು ಇನ್ನೂ ತಣಿಯದಿರುವಾಗಲೇ, ಸತೀಶ್ ಜಾರಕಿಹೊಳಿ ಅವರ ತವರು ಹಾಗೂ ಬಲವಾದ ಹಿಡಿತವಿರುವ ಬೆಳಗಾವಿ ಜಿಲ್ಲೆಗೆ ಗೃಹ ಸಚಿವರೇ ನೇರವಾಗಿ ಆಗಮಿಸುತ್ತಿರುವುದು ಹಲವು ರಾಜಕೀಯ ಸಮೀಕರಣಗಳಿಗೆ ದಾರಿ ಮಾಡಿಕೊಟ್ಟಿದೆ.

ಸೆಪ್ಟೆಂಬರ್ 18 ರಾತ್ರಿ 10 ಗಂಟೆಗೆ ಹುಬ್ಬಳ್ಳಿಯ ವಿಮಾನ ನಿಲ್ದಾಣಕ್ಕೆ ಆಗಮಿಸಲಿರುವ ಅಮಿತ್ ಶಾ ಅವರು ನಗರದ ಖಾಸಗಿ ಹೋಟೆಲ್‌ನಲ್ಲಿ ವಾಸ್ತವ್ಯ ಹೂಡಲಿದ್ದಾರೆ. ಬೆಳಿಗ್ಗೆ ಹುಬ್ಬಳ್ಳಿಯ ಗಬ್ಬೂರು ಬೈಪಾಸ್ ಬಳಿ ನೂತನವಾಗಿ ನಿರ್ಮಿಸಲಾಗಿರುವ ಕೆ.ಎಲ್.ಇ ಸಂಸ್ಥೆಯ 1,500 ಹಾಸಿಗೆಗಳ ಅಲ್ಟ್ರಾ–ಮಾಡರ್ನ್ ಹೈಟೆಕ್ ಆಸ್ಪತ್ರೆ ಹಾಗೂ ನೂತನ ವೈದ್ಯಕೀಯ ಮಹಾವಿದ್ಯಾಲಯದ ಕಟ್ಟಡವನ್ನು ಉದ್ಘಾಟಿಸಲಿದ್ದಾರೆ.

ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ತಾಲೂಕಿನ ಯಕ್ಸಂಬಾ ಗ್ರಾಮಕ್ಕೆ ಭೇಟಿ ನೀಡಲಿರುವ ಅವರು, ಶಾಸಕಿ ಶಶಿಕಲಾ ಜೊಲ್ಲೆ ಹಾಗೂ ಮಾಜಿ ಸಂಸದ ಅಣ್ಣಾಸಾಹೇಬ್ ಜೊಲ್ಲೆ ಒಡೆತನದ ಬೀರೇಶ್ವರ ಕೋ–ಆಪರೇಟಿವ್ ಕ್ರೆಡಿಟ್ ಸೊಸೈಟಿಯ ನೂತನ ಕಟ್ಟಡವನ್ನು ಉದ್ಘಾಟಿಸಲಿದ್ದಾರೆ.

# ಮೆಕ್ಕಾ ಮೇಲೆ ಹೌತಿಗಳ ದಾಳಿ ತಡೆದ ಸೌದಿ ನೇತೃತ್ವದ ಮಿಲಿಟರಿ ಒಕ್ಕೂಟ

**ಸೌದಿ ಅರೇಬಿಯಾ, ಸೆ.16:** ಇಸ್ಲಾಮಿಕ್ ಪವಿತ್ರ ತಾಣ ಮೆಕ್ಕಾದ ಮೇಲೆ ಹೌತಿಗಳು ನಡೆಸಿದ ಡ್ರೋನ್ ದಾಳಿಯನ್ನು ಯಶಸ್ವಿಯಾಗಿ ತಡೆಯಲಾಗಿದೆ. ಬುಧವಾರದಂದು ಮೆಕ್ಕಾದ ನಿರ್ಬಂಧಿತ ವಾಯುಪ್ರದೇಶವನ್ನು ಪ್ರವೇಶಿಸುವ ಮುನ್ನವೇ ಡ್ರೋನ್ ಅನ್ನು ಹೊಡೆದುರುಳಿಸಲಾಗಿದೆ ಎಂದು ಸೌದಿ ನೇತೃತ್ವದ ಮಿಲಿಟರಿ ಒಕ್ಕೂಟ ಹೇಳಿದೆ. ಇಸ್ಲಾಮಿಕ್ ಪವಿತ್ರ ತಾಣಗಳು ಮತ್ತು ಯಾತ್ರಿಕರ ಭದ್ರತೆಯು ಸೌದಿ ಅರೇಬಿಯಾಕ್ಕೆ ಪ್ರಮುಖ ಆದ್ಯತೆಯಾಗಿದೆ ಎಂದು ಒಕ್ಕೂಟದ ವಕ್ತಾರ ತುರ್ಕಿ ಅಲ್–ಮಲಿಕಿ ಹೇಳಿದ್ದಾರೆ. ಹೌತಿಗಳ ವಿರುದ್ಧ ಒಕ್ಕೂಟವು ಅಗತ್ಯ ಕ್ರಮ ಕೈಗೊಳ್ಳುತ್ತದೆ. ಏತನ್ಮಧ್ಯೆ, ಮೆಕ್ಕಾ ಅಥವಾ ಇತರ ಪವಿತ್ರ ಸ್ಥಳಗಳನ್ನು ಗುರಿಯಾಗಿಸಿಕೊಂಡಿರುವುದನ್ನು ಹೌತಿ ನಿರಾಕರಿಸಿದೆ. ಹೌತಿ ಗುಂಪು ಮೆಕ್ಕಾ ಅಥವಾ ಇತರ ಪವಿತ್ರ ಸ್ಥಳಗಳಿಗೆ ಯಾವುದೇ ಬೆದರಿಕೆಯನ್ನು ಒಡ್ಡುವುದಿಲ್ಲ ಎಂದು ಹೇಳಿದೆ.

# ಎಸ್‌ಐಆರ್‌ನಿಂದ 1.07 ಕೋಟಿ ಮತದಾರರು ಡಿಲೀಟ್: ಕೆ.ಸಿ. ವೇಣುಗೋಪಾಲ್ ಆತಂಕ

**ಬೆಂಗಳೂರು, ಸೆ.16:** ಕರ್ನಾಟಕದಲ್ಲಿ ಮತದಾರರ ಪಟ್ಟಿ ವಿಶೇಷ ತೀವ್ರ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಪ್ರಕ್ರಿಯೆಯಡಿ ಸುಮಾರು 1.07 ಕೋಟಿ ಮತದಾರರ ಹೆಸರನ್ನು ಕೈಬಿಡಲಾಗಿದೆ ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ಹೇಳಿದ್ದಾರೆ.



ಬೆಂಗಳೂರಿನಲ್ಲಿ ಸುದ್ದಿಗೋಷ್ಠಿ ನಡೆಸಿದ ಅವರು, ರಾಜ್ಯದ ಮತದಾರರ ಪಟ್ಟಿಯಿಂದ ಸುಮಾರು ಶೇ.23ರಷ್ಟು ಅಂದರೆ 1 ಕೋಟಿಗೂ ಅಧಿಕ ಮತದಾರರ ಹೆಸರನ್ನು ನಿಯಮಬಾಹಿರವಾಗಿ ಡಿಲೀಟ್ ಮಾಡಲಾಗಿದೆ.

ಫಾರ್ಮ್–7 ರ ವ್ಯಾಪಕ ದುರುಪಯೋಗದಿಂದಾಗಿ ಅರ್ಹ ಮತದಾರರ, ವಿಶೇಷವಾಗಿ ದಲಿತರು, ಆದಿವಾಸಿಗಳು, ಹಿಂದುಳಿದ ವರ್ಗಗಳು (ಒಬಿಸಿ) ಮತ್ತು ಅಲ್ಪಸಂಖ್ಯಾತ ಮತದಾರರ ಹೆಸರನ್ನು ವ್ಯವಸ್ಥಿತವಾಗಿ ತೆಗೆದುಹಾಕಲಾಗಿದೆ ಎಂದು ದೂರಿದ್ದಾರೆ.

ಈ ಸಂದರ್ಭದಲ್ಲೇ ನಿಜವಾದ ಕಾರಣದಿಂದಾಗಿ ಡಿಲೀಟ್ ಮಾಡಿದ್ದರೆ ಯಾರಿಗೂ ಸಮಸ್ಯೆ ಅನಿಸುತ್ತಿರಲಿಲ್ಲ. ಆದರೆ ಕಳೆದ ನಾಲ್ಕೈದು ವರ್ಷದಿಂದ ಚುನಾವಣಾ ಆಯೋಗದ ಕ್ರಮಗಳನ್ನು ನೋಡುತ್ತಿದ್ದೇವೆ. ನಮಗೆ ಸರಿಯಾದ ಉತ್ತರವನ್ನೂ ನೀಡುತ್ತಿಲ್ಲ. ಚುನಾವಣೆಗಳನ್ನು ಜನರ ಆದೇಶದ ಮೂಲಕ ಗೆಲ್ಲಬೇಕೇ ಹೊರತು ವೋಟ್ ಚೋರಿ (ಮತಗಳ ಕಳ್ಳತನ) ಮೂಲಕ ಅಲ್ಲ ಎಂದು ಕೇಂದ್ರದ ಬಿಜೆಪಿ ಸರ್ಕಾರವನ್ನು ಟೀಕಿಸಿದ್ದಾರೆ.

ಕರ್ನಾಟಕ ಮುಖ್ಯ ಚುನಾವಣಾಧಿಕಾರಿ ವಿ. ಅನ್ಬುಕುಮಾರ್ ಬಿಡುಗಡೆ ಮಾಡಿರುವ SIR ಕರಡು ಮತದಾರರ ಪಟ್ಟಿಯ ಪ್ರಕಾರ, ರಾಜ್ಯದಲ್ಲಿ ಒಟ್ಟು 1,07,96,339 (1.07 ಕೋಟಿ) ಮತದಾರರ ಹೆಸರುಗಳನ್ನು ಪಟ್ಟಿಯಿಂದ ಕೈಬಿಡಲಾಗಿದೆ. ಈ ಭಾರಿ ಕಡಿತದ ನಂತರ ಕರ್ನಾಟಕದ ಕರಡು ಮತದಾರರ ಪಟ್ಟಿಯಲ್ಲಿ ಸದ್ಯ 4.46 ಕೋಟಿ ಮತದಾರರು ಮಾತ್ರ ಬಾಕಿ ಉಳಿದಿದ್ದಾರೆ.

# ಸಿಜೆಪಿ ಪ್ರತಿಭಟನೆ: ಪೆಲೆಟ್ ಗನ್ ಬಳಕೆ, ಮಹಿಳೆಯರ ಮೇಲಿನ ಹಿಂಸಾಚಾರ ತನಿಖೆಗೆ ಸುಪ್ರೀಂ ಸೂಚನೆ

**ನವದೆಹಲಿ, ಸೆ.16:** ಜಂತರ್ ಮಂತರ್‌ನಲ್ಲಿ ಜುಲೈ 20ರಂದು ನಡೆದ ಸಿಜೆಪಿ ಪ್ರತಿಭಟನೆ ವೇಳೆ ಪೆಲೆಟ್ ಗನ್ ಬಳಕೆ, ಮಹಿಳಾ ಪ್ರತಿಭಟನಕಾರರ ಮೇಲಿನ ಹಿಂಸಾಚಾರ ಹಾಗೂ ಪೊಲೀಸ್ ಸಿಬ್ಬಂದಿಗೆ ಗಾಯವಾದ ಪ್ರಕರಣಗಳ ಕುರಿತು ಸಮಗ್ರ ತನಿಖೆ ನಡೆಸುವಂತೆ ಸುಪ್ರೀಂ ಕೋರ್ಟ್ ಐವರು ಸದಸ್ಯರ ಉನ್ನತ ಮಟ್ಟದ ತನಿಖಾ ಸಮಿತಿಗೆ ನಿರ್ದೇಶನ ನೀಡಿದೆ.

ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್, ನ್ಯಾಯಮೂರ್ತಿಗಳಾದ ಜೋಯ್‌ಮಾಲ್ಯ ಬಾಗ್ಚಿ ಹಾಗೂ ವಿ. ಮೊಹನಾ ಅವರನ್ನೊಳಗೊಂಡ ಪೀಠ ಈ ನಿರ್ದೇಶನ ನೀಡಿದೆ.

ಜುಲೈ 20ರಂದು ನಡೆದ ಪ್ರತಿಭಟನೆಯ ಸಂದರ್ಭದಲ್ಲಿ ಪೊಲೀಸರು ಹಾಗೂ ಪ್ರತಿಭಟನಾಕಾರರ ನಡುವೆ ನಡೆದ ಸಂಘರ್ಷಕ್ಕೆ ಸಂಬಂಧಿಸಿದಂತೆ ಪರಸ್ಪರ ವಿಭಿನ್ನ ಆರೋಪಗಳು ಕೇಳಿಬಂದ ಹಿನ್ನೆಲೆಯಲ್ಲಿ ನ್ಯಾಯಾಲಯವು ಸ್ವತಂತ್ರ ತನಿಖೆಗೆ ಒತ್ತು ನೀಡಿದೆ.

ತನಿಖೆಯ ಮೊದಲ ಹಂತದಲ್ಲಿ ನಾಲ್ಕು ಪ್ರಮುಖ ವಿಚಾರಗಳನ್ನು ಪರಿಶೀಲಿಸುವಂತೆ ಸಮಿತಿಗೆ ಸೂಚಿಸಲಾಗಿದೆ.



**ಪೊಲೀಸರು ಹಾಗೂ ಪ್ರತಿಭಟನಾಕಾರರ ನಡುವೆ ನಡೆದ ಸಂಘರ್ಷಕ್ಕೆ ವಿಭಿನ್ನ ಆರೋಪಗಳು ಕೇಳಿಬಂದ ಹಿನ್ನೆಲೆಯಲ್ಲಿ ಸ್ವತಂತ್ರ ತನಿಖೆಗೆ ಒತ್ತು**

ಪ್ರತಿಭಟನಾಕಾರರ ವಿರುದ್ಧ ಪೆಲೆಟ್‌ಗನ್ ಬಳಸಲಾಗಿತ್ತೇ, ಮಹಿಳಾ ಪ್ರತಿಭಟನಾಕಾರರ ಮೇಲೆ ನಿರ್ದಿಷ್ಟವಾಗಿ ಹಿಂಸಾಚಾರ ಅಥವಾ ಕಿರುಕುಳ ನಡೆದಿತ್ತೇ, ಪ್ರತಿಭಟನೆ ವೇಳೆ ಪೊಲೀಸ್ ಸಿಬ್ಬಂದಿಗೆ ಉಂಟಾದ ಗಾಯಗಳು, ಪ್ರತಿಭಟನಾಕಾರರು ಅಥವಾ ಭದ್ರತಾ ಸಿಬ್ಬಂದಿಯಿಂದ ನಡೆದಿರುವುದಾಗಿ ಆರೋಪಿಸಲಾದ ಅತಿಯಾದ ಹಿಂಸಾಚಾರ ಹಾಗೂ ಸಾರ್ವಜನಿಕ ಆಸ್ತಿಪಾಸ್ತಿ ಹಾನಿಯ ಆರೋಪಗಳ ವಾಸ್ತವಾಂಶಗಳನ್ನು ಸಮಿತಿ ಪರಿಶೀಲಿಸಲು ನ್ಯಾಯಲಯ ಹೇಳಿದೆ.

ಸುಪ್ರೀಂ ಕೋರ್ಟ್ ಆಗಸ್ಟ್‌ನಲ್ಲಿ ರಚಿಸಿದ್ದ ಉನ್ನತಮಟ್ಟದ ತನಿಖಾ ಸಮಿತಿಗೆ ಮಾಜಿ ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ಆರ್. ಸುಭಾಷ್‌ರೆಡ್ಡಿ ಅಧ್ಯಕ್ಷರಾಗಿದ್ದಾರೆ. ಪಂಜಾಬ್ ಮತ್ತು ಹರಿಯಾಣ ಹೈಕೋರ್ಟ್ ಮಾಜಿ ಮುಖ್ಯ ನ್ಯಾಯಮೂರ್ತಿ ರವಿಶಂಕರ್ ಝಾ, ಮಾಜಿ ದೆಹಲಿ ಹೈಕೋರ್ಟ್ ನ್ಯಾಯಮೂರ್ತಿ ಶಾಲಿಂದರ್ ಕೌರ್, ಮಾಜಿ ಸಿಬಿಐ ನಿರ್ದೇಶಕ ರಿಷಿ ಕುಮಾರ್ ಶುಕ್ಲಾ ಹಾಗೂ ನಿವೃತ್ತ ಮೇಘಾಲಯ ಡಿಜಿಪಿ ಎಲ್.ಆರ್. ಬಿಷ್ಣೋಯ್ ಸಮಿತಿಯ ಇತರ ಸದಸ್ಯರಾಗಿದ್ದಾರೆ.

ತನಿಖೆಯಲ್ಲಿ ಪ್ರಮುಖ ಸಾಕ್ಷಿಗಳಾಗಿರುವವರು, ವಿಶೇಷವಾಗಿ ದುರ್ಬಲ ಸ್ಥಿತಿಯಲ್ಲಿರುವ ಸಾಕ್ಷಿಗಳು ಮತ್ತು ಮಹಿಳಾ ಪ್ರತಿಭಟನಾಕಾರರ ಗೌಪ್ಯತೆ ಹಾಗೂ ಸುರಕ್ಷತೆಯನ್ನು ಕಾಪಾಡುವಂತೆ ಸುಪ್ರೀಂ ಕೋರ್ಟ್ ಸೂಚಿಸಿದೆ. ಅಗತ್ಯವಿದ್ದರೆ ಸಾಕ್ಷಿಗಳು ಹಾಗೂ ಇತರರು ತಮ್ಮ ಹೇಳಿಕೆಗಳು ಮತ್ತು ದಾಖಲೆಗಳನ್ನು ಆನ್‌ಲೈನ್ ಮೂಲಕ ಸಲ್ಲಿಸಲು ಪ್ರತ್ಯೇಕ ಪೋರ್ಟಲ್ ವ್ಯವಸ್ಥೆ ರೂಪಿಸುವ ಸಾಧ್ಯತೆಯನ್ನೂ ನ್ಯಾಯಾಲಯ ಸೂಚಿಸಿದೆ.



### ಪೆಲೆಟ್ ಗನ್ ಬಳಕೆಯ ಬಗ್ಗೆ ವಿವಾದ

**ಜುಲೈ 20ರ ಪ್ರತಿಭಟನೆ ಸಂದರ್ಭದಲ್ಲಿ ಪೆಲೆಟ್‌ಗನ್ ಬಳಸಲಾಗಿದೆ ಎಂಬ ಆರೋಪಗಳು ಕೇಳಿಬಂದಿದ್ದವು. ಈ ಹಿನ್ನೆಲೆಯಲ್ಲಿ ಪೆಲೆಟ್‌ಗನ್ ಬಳಕೆಗೆ ಸಂಬಂಧಿಸಿದ ಶಸ್ತ್ರಾಸ್ತ್ರ ದಾಖಲೆ, ಮದ್ದುಗುಂಡುಗಳ ಲಾಗ್, ಕರ್ತವ್ಯ ದಾಖಲೆಗಳು ಹಾಗೂ RAF ನಿಯೋಜನೆಗೆ ಸಂಬಂಧಿಸಿದ ದಾಖಲೆಗಳನ್ನು ಸಂರಕ್ಷಿಸುವಂತೆ ನ್ಯಾಯಾಲಯ ಈ ಹಿಂದೆ ಸೂಚಿಸಿತ್ತು. ಗಾಯಗೊಂಡ ಪ್ರತಿಭಟನಾಕಾರರಿಗೆ ಅಗತ್ಯ ವೈದ್ಯಕೀಯ ಚಿಕಿತ್ಸೆ ಒದಗಿಸುವಂತೆಯೂ ದೆಹಲಿ ಸರ್ಕಾರಕ್ಕೆ ನಿರ್ದೇಶನ ನೀಡಲಾಗಿತ್ತು.**

# ಎನ್‌ಡಿಎ ರಾಜ್ಯಗಳಲ್ಲಿ ಯುಸಿಸಿ ಜಾರಿ: ಮೈತ್ರಿಕೂಟದೊಳಗೇ ವಿರೋಧ

**ನವದೆಹಲಿ, ಸೆ.16:** ಮುಂಬರುವ 2029ರ ಲೋಕಸಭಾ ಚುನಾವಣೆಯೊಳಗೆ ದೇಶದ 21 ಎನ್‌ಡಿಎ ಆಡಳಿತದ ರಾಜ್ಯಗಳಲ್ಲಿ ಏಕರೂಪ ನಾಗರಿಕ ಸಂಹಿತೆ (ಯುಸಿಸಿ) ಜಾರಿಗೊಳಿಸಲಾಗುವುದು ಎಂಬ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರ ಘೋಷಣೆಗೆ ಮೈತ್ರಿಕೂಟದೊಳಗೇ ತೀವ್ರ ವಿರೋಧ ವ್ಯಕ್ತವಾಗಿದೆ. ಕೇಂದ್ರದಲ್ಲಿ ಆಡಳಿತಾರೂಢ ಮೋದಿ–ಶಾ ಸರ್ಕಾರಕ್ಕೆ ಆಧಾರ ಸ್ತಂಭಗಳಂತಿರುವ ಬಿಹಾರದ ಜೆಡಿಯು ಹಾಗೂ ಆಂಧ್ರಪ್ರದೇಶದ ಟಿಡಿಪಿ ಪಕ್ಷಗಳು ಅಸಮಾಧಾನ ಹೊರಹಾಕಿದ್ದು, ಸರ್ಕಾರದ ಈ ಯೋಜನೆಗೆ ಬಹುದೊಡ್ಡ ಹಿನ್ನಡೆಯಾಗುವ ಸಾಧ್ಯತೆಯಿದೆ.

ಇತ್ತೀಚೆಗಷ್ಟೇ ಮುಂಬೈನಲ್ಲಿ ಮಾತನಾಡಿದ್ದ ಅಮಿತ್ ಶಾ, 370ನೇ ವಿಧಿ ರದ್ದತಿ ಹಾಗೂ ತ್ರಿವಳಿ ತಲಾಖ್ ನಿರ್ಮೂಲನೆಯ ಸಾಧನೆಗಳನ್ನು ಉಲ್ಲೇಖಿಸಿ, ಮುಂದಿನ ಮಹತ್ವಾಕಾಂಕ್ಷೆಯಾಗಿ 21 ಎನ್‌ಡಿಎ ಆಡಳಿತದ ರಾಜ್ಯಗಳಲ್ಲಿ ಯುಸಿಸಿ ಜಾರಿಗೊಳಿಸುವ ಗುರಿ ಹೊಂದಲಾಗಿದೆ ಎಂದು ಘೋಷಿಸಿದ್ದರು. ಆದರೆ, ಈ ನಿರ್ಧಾರದ ಬಗ್ಗೆ ಮೈತ್ರಿಕೂಟದಲ್ಲಿ ಯಾವುದೇ ಪೂರ್ವಭಾವಿ ಚರ್ಚೆ ನಡೆದಿಲ್ಲ ಎಂಬುದು ಇದೀಗ ಮಿತ್ರಪಕ್ಷಗಳ ಅಸಮಾಧಾನಕ್ಕೆ ಕಾರಣವಾಗಿದೆ.

ಬಿಹಾರದಲ್ಲಿ ಗಣನೀಯ ಪ್ರಮಾಣದ ಮುಸ್ಲಿಂ ಮತಬ್ಯಾಂಕ್ ಹೊಂದಿರುವ ಮುಖ್ಯಮಂತ್ರಿ ನಿತೀಶ್ ಕುಮಾರ್ ನೇತೃತ್ವದ ಜೆಡಿಯು, ರಾಜ್ಯದಲ್ಲಿ ಯುಸಿಸಿ ಜಾರಿಗೆ ಅವಕಾಶ ನೀಡುವುದಿಲ್ಲ ಎಂದು ಕಡ್ಡಿಮುರಿದಂತೆ ಹೇಳಿದೆ. ರಾಷ್ಟ್ರಮಟ್ಟದಲ್ಲಿ ಮಸೂದೆ ತಂದರೆ ಬೆಂಬಲಿಸುವ ಬಗ್ಗೆ ಪರಿಶೀಲಿಸುತ್ತೇವೆ, ಆದರೆ ಬಿಹಾರದಲ್ಲಿ ಮಾತ್ರ ಇದನ್ನು ಯಾವುದೇ ಕಾರಣಕ್ಕೂ ಜಾರಿಗೊಳಿಸಲು ಬಿಡುವುದಿಲ್ಲ ಎಂದು ಜೆಡಿಯು ನಾಯಕ ಶ್ಯಾಮ್ ರಜಾಕ್ ಸ್ಪಷ್ಟಪಡಿಸಿದ್ದಾರೆ. ಬಿಹಾರದ ಮತ್ತೊಂದು ಮೈತ್ರಿ ಪಕ್ಷ ಎಲ್‌ಜೆಪಿ (ರಾಂ ವಿಲಾಸ್) ಕೂಡ ಕರಡು ಪ್ರತಿ ಬಿಡುಗಡೆಯಾಗುವ ಮುನ್ನ ತರಾತುರಿಯಲ್ಲಿ ಬೆಂಬಲ ನೀಡುವುದಿಲ್ಲ ಎಂದು ಎಚ್ಚರಿಕೆಯ ಹೆಜ್ಜೆ ಇಟ್ಟಿದೆ. ಇತ್ತ ಕೇಂದ್ರ ಸರ್ಕಾರಕ್ಕೆ 16 ಸಂಸದರ ಬಲ ತುಂಬಿರುವ ಆಂಧ್ರಪ್ರದೇಶದ ಟಿಡಿಪಿ ಕೂಡ ತಟಸ್ಥ ಒಲವು ತೋರಿದೆ. ಶೇ10ರಷ್ಟು ಮುಸ್ಲಿಂ ಜನಸಂಖ್ಯೆ ಇರುವ ಆಂಧ್ರದಲ್ಲಿ ಅಲ್ಪಸಂಖ್ಯಾತರ ಹಿತಾಸಕ್ತಿ ಕಾಪಾಡುವುದಾಗಿ ಈ ಹಿಂದೆ ಚಂದ್ರಬಾಬು ನಾಯ್ಡು ಭರವಸೆ ನೀಡಿದ್ದರು. ಇದೀಗ ಯುಸಿಸಿ ಬಗ್ಗೆ ಪ್ರತಿಕ್ರಿಯಿಸಿರುವ ಟಿಡಿಪಿ ನಾಯಕರು, ಈ ಬಗ್ಗೆ ಎಲ್ಲ ಪಾಲುದಾರರೊಂದಿಗೆ ವ್ಯಾಪಕ ಚರ್ಚೆ ನಡೆಸದೇ ಯಾವುದೇ ಅಂತಿಮ ತೀರ್ಮಾನ ಕೈಗೊಳ್ಳುವುದಿಲ್ಲ ಎಂದು ತಿಳಿಸುವ ಮೂಲಕ ಸರ್ಕಾರದ ಏಕಪಕ್ಷೀಯ ನಿರ್ಧಾರಕ್ಕೆ ತಡೆ ಹಾಕಿದ್ದಾರೆ.

ಜೆಡಿಯು ಮತ್ತು ಟಿಡಿಪಿ ಪಕ್ಷಗಳು ವಿರೋಧ ಹಾಗೂ ಎಚ್ಚರಿಕೆಯ ನಿಲುವು ಪ್ರದರ್ಶಿಸಿದ್ದರೆ, ಎನ್‌ಡಿಎ ಮೈತ್ರಿಕೂಟದ ಇತರ ಪಕ್ಷಗಳಾದ ಶಿವಸೇನೆ ಮತ್ತು ಎಚ್‌ಎಎಂ (ಸೆಕ್ಯುಲರ್) ಯುಸಿಸಿ ಜಾರಿಗೆ ಸಂಪೂರ್ಣ ಬೆಂಬಲ ವ್ಯಕ್ತಪಡಿಸಿವೆ. ಪಶ್ಚಿಮ ಬಂಗಾಳದಲ್ಲಿ ಬಿಜೆಪಿ ಜೊತೆ ಹೊಸದಾಗಿ ಕೈಜೋಡಿಸಿರುವ ಎನ್‌ಸಿಪಿಐ (ಟಿಎಂಸಿ ಬಂಡಾಯ ಸಂಸದರ ಗುಂಪು) ಕೂಡ ಯಾವುದೇ ಕರಡು ಪ್ರಸ್ತಾವನೆ ಬರುವ ಮುನ್ನ ಚರ್ಚೆ ಅತ್ಯಗತ್ಯ ಎಂದಿದೆ.

2024ರ ಲೋಕಸಭಾ ಚುನಾವಣೆಯಲ್ಲಿ ಕೇವಲ 240 ಸ್ಥಾನಗಳನ್ನು ಗೆದ್ದಿರುವ ಬಿಜೆಪಿ, ಬಹುಮತಕ್ಕಾಗಿ ಜೆಡಿಯು (12 ಸಂಸದರು) ಮತ್ತು ಟಿಡಿಪಿ (16 ಸಂಸದರು) ಮೇಲೆಯೇ ಸಂಪೂರ್ಣ ಅವಲಂಬಿತವಾಗಿದೆ. ಇದೀಗ ಈ ಎರಡೂ ಪ್ರಮುಖ ಮಿತ್ರಪಕ್ಷಗಳು ಯುಸಿಸಿ ವಿಚಾರದಲ್ಲಿ ಭಿನ್ನರಾಗ ಎಳೆದಿರುವುದು ಮತ್ತು ಅಲ್ಪಸಂಖ್ಯಾತರ ಹಿತಾಸಕ್ತಿಯ ಪರ ನಿಂತಿರುವುದು, ತಮ್ಮ ಸೈದ್ಧಾಂತಿಕ ಅಜೆಂಡಾವನ್ನು ರಾಜ್ಯಗಳ ಮೂಲಕ ಹೇರಲು ಹೊರಟಿರುವ ಕೇಂದ್ರ ಸರ್ಕಾರಕ್ಕೆ ನುಂಗಲಾರದ ತುತ್ತಾಗಿ ಪರಿಣಮಿಸಿದೆ.




ಕೇಂದ್ರ ಜಲಶಕ್ತಿ ಸಚಿವ ಸಿ.ಆರ್.ಪಾಟೀಲ್ ಬುಧವಾರ ನವದೆಹಲಿಯಲ್ಲಿ 'ಸ್ವಚ್ಛತಾ ಹೀ ಸೇವಾ' ಅಭಿಯಾನಕ್ಕೆ ಚಾಲನೆ ನೀಡಿದರು.

# ಭಾರತೀಯ ಯುದ್ಧನೌಕೆಗೆ ಪಾಕಿಸ್ತಾನಿ ನೌಕೆಯ ಡಿಕ್ಕಿ

**ಪಾಕ್ ರಾಜತಾಂತ್ರಿಕ ಅಧಿಕಾರಿಯನ್ನು ಕರೆಸಿಕೊಂಡ ಭಾರತ: ತೀವ್ರ ಆಕ್ಷೇಪ**



**ನವದೆಹಲಿ, ಸೆ.16:** ಉತ್ತರ ಅರಬ್ಬಿ ಸಮುದ್ರದಲ್ಲಿ ಭಾರತೀಯ ನೌಕಾಪಡೆಯ ಮುಂಚೂಣಿ ಯುದ್ಧನೌಕೆ ಹಾಗೂ ಪಾಕಿಸ್ತಾನ ನೌಕಾಪಡೆಯ ನೌಕೆಯ ನಡುವೆ ಡಿಕ್ಕಿ ಸಂಭವಿಸಿದೆ. ಸೆಪ್ಟೆಂಬರ್ 15ರ ಸಂಜೆ ಈ ಘಟನೆ ನಡೆದಿದ್ದು, ಘಟನೆಯ ಬಗ್ಗೆ ಭಾರತ ತೀವ್ರ ಆಕ್ಷೇಪ ವ್ಯಕ್ತಪಡಿಸಿದೆ. ವಿದೇಶಾಂಗ ಸಚಿವಾಲಯದ ಪ್ರಕಾರ, ನಿಯಮಿತ ಕಣ್ಗಾವಲು ಕಾರ್ಯಾಚರಣೆಯಲ್ಲಿ ತೊಡಗಿದ್ದ ಭಾರತೀಯ ನೌಕಾಪಡೆಯ ಯುದ್ಧನೌಕೆಯ ಅತ್ಯಂತ ಸಮೀಪಕ್ಕೆ ಪಾಕಿಸ್ತಾನ ನೌಕಾಪಡೆಯ ಹಡಗು ವೇಗವಾಗಿ ಬಂದಿತ್ತು. ಬಳಿಕ ಅಸುರಕ್ಷಿತ ಹಾಗೂ ವೃತ್ತಿಪರವಲ್ಲದ ರೀತಿಯಲ್ಲಿ ಭಾರತೀಯ ಯುದ್ಧ ನೌಕೆಯ ದಿಕ್ಕಿನಲ್ಲಿ ಚಲಿಸಿದ ಪರಿಣಾಮ ಎರಡೂ ನೌಕೆಗಳ ನಡುವೆ ಡಿಕ್ಕಿ ಸಂಭವಿಸಿದೆ ಎಂದು ಭಾರತ ತಿಳಿಸಿದೆ. ಘಟನೆಯಿಂದ ಯಾವುದೇ ದೊಡ್ಡ ಪ್ರಮಾಣದ ಹಾನಿ ಸಂಭವಿಸಿರುವ ಬಗ್ಗೆ ಮಾಹಿತಿ ಲಭ್ಯವಾಗಿಲ್ಲ. ಘಟನೆ ಅಂತಾರಾಷ್ಟ್ರೀಯ ಜಲಪ್ರದೇಶದಲ್ಲಿ ನಡೆದಿದೆ ಎಂದು ವಿದೇಶಾಂಗ ಸಚಿವಾಲಯ ತಿಳಿಸಿದೆ.

**ಪಾಕ್ ರಾಜತಾಂತ್ರಿಕ ಅಧಿಕಾರಿಗೆ ಸಮನ್ಸ್**

ಘಟನೆಯನ್ನು ಗಂಭೀರವಾಗಿ ಪರಿಗಣಿಸಿರುವ ಭಾರತ, ನವದೆಹಲಿಯಲ್ಲಿರುವ ಪಾಕಿಸ್ತಾನ ಹೈಕಮಿಷನ್‌ನ ಪ್ರಭಾರಿ ರಾಜತಾಂತ್ರಿಕ ಅಧಿಕಾರಿಯನ್ನು ಕರೆಸಿಕೊಂಡು ಕಠಿಣ ಆಕ್ಷೇಪ ದಾಖಲಿಸಿದೆ. ಸಮುದ್ರದಲ್ಲಿ ಪಾಕಿಸ್ತಾನ ನೌಕಾಪಡೆಯ ಘಟಕದ ವರ್ತನೆ ಸ್ವೀಕಾರಾರ್ಹವಲ್ಲ ಮತ್ತು ವೃತ್ತಿಪರವಲ್ಲ ಎಂದು ಭಾರತ ಸ್ಪಷ್ಟಪಡಿಸಿದೆ. ಈ ಘಟನೆ ಏಪ್ರಿಲ್ 1991ರಲ್ಲಿ ಭಾರತ ಮತ್ತು ಪಾಕಿಸ್ತಾನ ನಡುವೆ ಸೇನಾ ಅಭ್ಯಾಸಗಳು, ಯುದ್ಧಾಭ್ಯಾಸಗಳು ಹಾಗೂ ಸೈನಿಕರ ಚಲನವಲನ ಕುರಿತು ಮುಂಚಿತ ಮಾಹಿತಿ ನೀಡುವ ಸಂಬಂಧ ಮಾಡಿಕೊಂಡ ಒಪ್ಪಂದದ 10ನೇ ವಿಧಿಯ ಉಲ್ಲಂಘನೆ ಎಂದು ಭಾರತ ಆರೋಪಿಸಿದೆ.

**ಮುನ್ನೆಚ್ಚರಿಕೆ ವಹಿಸುವಂತೆ ಸೂಚನೆ**

ಈ ವಿಷಯವನ್ನು ಪಾಕಿಸ್ತಾನದ ಸಂಬಂಧಿತ ಅಧಿಕಾರಿಗಳ ಗಮನಕ್ಕೆ ತರುವಂತೆ ಪಾಕಿಸ್ತಾನದ ಪ್ರಭಾರಿ ರಾಜತಾಂತ್ರಿಕ ಅಧಿಕಾರಿಗೆ ಭಾರತ ಸೂಚಿಸಿದೆ. ಜತೆಗೆ, ಸಮುದ್ರದಲ್ಲಿ ಉಭಯ ದೇಶಗಳ ಎಲ್ಲ ಸೇನಾ ಘಟಕಗಳು ಸಾಕಷ್ಟು ಮುನ್ನೆಚ್ಚರಿಕೆ ವಹಿಸಬೇಕು ಮತ್ತು ಎರಡೂ ದೇಶಗಳ ನಡುವೆ ಜಾರಿಯಲ್ಲಿರುವ ಸಂಬಂಧಿತ ಒಪ್ಪಂದಗಳ ನಿಯಮಗಳನ್ನು ಗೌರವಿಸಬೇಕು ಎಂದು ತಿಳಿಸಲಾಗಿದೆ. ಇಂತಹ ಘಟನೆ ಮತ್ತೆ ನಡೆಯದಂತೆ ಕ್ರಮ ಕೈಗೊಳ್ಳುವ ಅಗತ್ಯವನ್ನೂ ಭಾರತ ಒತ್ತಿಹೇಳಿದೆ. ಇದೇ ವಿಚಾರವಾಗಿ ಇಸ್ಲಾಮಾಬಾದ್‌ನಲ್ಲಿರುವ ಭಾರತೀಯ ಪ್ರಭಾರಿ ರಾಜತಾಂತ್ರಿಕ ಅಧಿಕಾರಿಗೂ ಪಾಕಿಸ್ತಾನದ ವಿದೇಶಾಂಗ ಸಚಿವಾಲಯದ ಮುಂದೆ ಆಕ್ಷೇಪ ದಾಖಲಿಸುವಂತೆ ಭಾರತದ ವಿದೇಶಾಂಗ ಸಚಿವಾಲಯ ಸೂಚಿಸಿದೆ.

# ಪಾಕ್‌ನಲ್ಲಿ ಇಂಧನ ಅಭಾವ; ಭಾರತಕ್ಕೂ ಎಚ್ಚರಿಕೆ ಗಂಟೆ

**ನವದೆಹಲಿ, ಸೆ.16:** ಪಶ್ಚಿಮ ಏಷ್ಯಾದಲ್ಲಿ ಉಂಟಾಗಿರುವ ಯುದ್ಧ ವಾತಾವರಣ ಮತ್ತು ಜಾಗತಿಕ ಇಂಧನ ಪೂರೈಕೆಯಲ್ಲಿ ಉಂಟಾಗಿರುವ ವ್ಯತ್ಯಯವು ದಕ್ಷಿಣ ಏಷ್ಯಾದ ದೇಶಗಳಲ್ಲಿ ತೀವ್ರ ಇಂಧನ ಬಿಕ್ಕಟ್ಟನ್ನು ಸೃಷ್ಟಿಸಿದೆ. ನೆರೆರಾಷ್ಟ್ರ ಪಾಕಿಸ್ತಾನದಲ್ಲಿ ಪರಿಸ್ಥಿತಿ ವಿಕೋಪಕ್ಕೆ ತಿರುಗಿದ್ದು, ಮುಂಬರುವ ದಿನಗಳಲ್ಲಿ ಭಾರತಕ್ಕೂ ಕಠಿಣ ಆರ್ಥಿಕ ಸವಾಲು ತಂದೊಡ್ಡುವ ಎಚ್ಚರಿಕೆಯ ಸಂಕೇತವಾಗಿದೆ.

ಪಾಕಿಸ್ತಾನದಲ್ಲಿ ಪೆಟ್ರೋಲ್ ಬೆಲೆ ಸಾರ್ವಕಾಲಿಕ ಗರಿಷ್ಠ ಮಟ್ಟವಾದ ಲೀಟರ್‌ಗೆ ರೂ.384.34ಕ್ಕೆ ಏರಿಕೆಯಾಗಿದ್ದರೆ, ಡೀಸೆಲ್ ದರ ರೂ. 415.83 ಕ್ಕೆ ಜಿಗಿದಿದೆ. ಕತಾರ್‌ನಿಂದ ಬರುವ ಎಲ್‌ಎನ್‌ಜಿ (ಪ್ರಕೃತಿ ಅನಿಲ) ಆಮದು ಸಂಪೂರ್ಣವಾಗಿ ಕುಸಿದಿದ್ದು, ವಿದ್ಯುತ್ ಉತ್ಪಾದನೆ ಮತ್ತು ಕೈಗಾರಿಕೆಗಳು ತೀವ್ರ ತೊಂದರೆ ಎದುರಿಸುತ್ತಿವೆ.

ಪರಿಸ್ಥಿತಿ ಕೈಮೀರುತ್ತಿದ್ದಂತೆ ಪ್ರಧಾನಿ ಶೆಹಬಾಜ್ ಷರೀಫ್ ಸರ್ಕಾರ ದ್ವಿಚಕ್ರ ವಾಹನಗಳು ಮತ್ತು ಸಣ್ಣ ಕಾರು ಮಾಲೀಕರಿಗೆ ಲೀಟರ್‌ಗೆ ರೂ.100ರಂತೆ ಸಬ್ಸಿಡಿ ನೀಡುವ ಯೋಜನೆಯನ್ನು ಜಾರಿಗೆ ತಂದಿದೆ. ಜತೆಗೆ, ಪ್ರತಿದಿನದ ಜಾಗತಿಕ ಬೆಲೆಗೆ ತಕ್ಕಂತೆ ಇಂಧನ ದರ ಬದಲಾಯಿಸುವ ನಿರ್ಧಾರಕ್ಕೆ ಬಂದಿದೆ. ಈ ನಡುವೆ ಭಾರತದಲ್ಲೂ ಈಗಾಗಲೇ ಇಂಧನ ಸಂಕಷ್ಟ ಉಂಟಾಗುತ್ತಿದೆ.

ದೇಶದಲ್ಲಿ ತನ್ನ ಅಗತ್ಯದ ಶೇಕಡ 85ಕ್ಕಿಂತ ಹೆಚ್ಚು ಕಚ್ಚಾ ತೈಲವನ್ನು ಆಮದು ಮಾಡಿಕೊಳ್ಳುತ್ತಿರುವುದರಿಂದ, ಜಾಗತಿಕ ಮಟ್ಟದ ಈ ಏರಿಳಿತ ಭಾರತಕ್ಕೂ ಪ್ರತ್ಯಕ್ಷ ಹಾಗೂ ಪರೋಕ್ಷ ಎಚ್ಚರಿಕೆಯಾಗಿದೆ. ಈಗಾಗಲೇ ದೇಶದಲ್ಲಿ ಪೆಟ್ರೋಲ್, ಡಿಸೇಲ್ ದರ ಭಾರಿ ಪ್ರಮಾಣದಲ್ಲಿ ಏರಿಕೆಯಾಗಿದೆ.

ಪ್ರಸ್ತುತ ಭಾರತದಲ್ಲಿ ಪೆಟ್ರೋಲ್ ದರ ರೂ.102.12 (ದೆಹಲಿ) ಆಸುಪಾಸಿನಲ್ಲಿದೆ. ಜಾಗತಿಕ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆ ಏರಿಕೆ ಮುಂದುವರಿದರೆ ತೈಲ ಕಂಪನಿಗಳ ಮೇಲಿನ ಆರ್ಥಿಕ ಹೊರೆ ಹೆಚ್ಚಾಗಲಿದೆ. ಜಾಗತಿಕ ಇಂಧನ ಬೆಲೆ ಏರಿಕೆಯು ಆಮದು ವೆಚ್ಚವನ್ನು ಹೆಚ್ಚಿಸಲಿದ್ದು, ಭಾರತೀಯ ರೂಪಾಯಿ ಮೌಲ್ಯದ ಮೇಲೆ ಒತ್ತಡ ಹೇರಲಿದೆ. ಇದು ಸರಕು ಸಾಗಣೆ ವೆಚ್ಚ ಹೆಚ್ಚಿಸಿ ದೇಶೀಯವಾಗಿ ನಿತ್ಯಬಳಕೆಯ ವಸ್ತುಗಳ ಬೆಲೆ ಏರಿಕೆಗೆ ದಾರಿ ಮಾಡಿಕೊಡುವ ಭೀತಿಯಿದೆ.

ದೇಶದಲ್ಲಿ ಸದ್ಯಕ್ಕೆ ಇಂಧನ ಅಭಾವವಿಲ್ಲ ಎಂದು ಸರ್ಕಾರ ಹೇಳಿಕೊಳ್ಳುತ್ತಿದೆ. ರಷ್ಯಾ ಸೇರಿದಂತೆ ಪರ್ಯಾಯ ಮಾರ್ಗಗಳಿಂದ ರಿಯಾಯಿತಿ ದರದಲ್ಲಿ ತೈಲ ಭದ್ರಪಡಿಸಿಕೊಳ್ಳಲು ಮತ್ತು ನವೀಕರಿಸಬಹುದಾದ ಇಂಧನದ ಕಡೆಗೆ ಗಮನಹರಿಸಲು ಸರ್ಕಾರ ತುರ್ತು ಸಿದ್ಧತೆ ನಡೆಸಬೇಕಾದ ಅವಶ್ಯಕತೆಯಿದೆ.

# ಭವಿಷ್ಯನಿಧಿ ವೇತನ ಮಿತಿ 25 ಸಾವಿರಕ್ಕೆ ಏರಿಕೆ: 51 ಲಕ್ಷಕ್ಕೂ ಅಧಿಕ ಉದ್ಯೋಗಿಗಳಿಗೆ ಸಾಮಾಜಿಕ ಭದ್ರತೆ ವಿಸ್ತರಣೆ

**ನವದೆಹಲಿ, ಸೆ.16:** ಉದ್ಯೋಗಿಗಳ ಸಾಮಾಜಿಕ ಭದ್ರತೆಯನ್ನು ಮತ್ತಷ್ಟು ಬಲಪಡಿಸುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರ ಮಹತ್ವದ ನಿರ್ಧಾರ ಕೈಗೊಂಡಿದ್ದು, ನೌಕರರ ಭವಿಷ್ಯ ನಿಧಿ ಸಂಸ್ಥೆ ವ್ಯಾಪ್ತಿಗೆ ಬರುವ ವೇತನ ಮಿತಿಯನ್ನು 15 ಸಾವಿರದಿಂದ 25 ಸಾವಿರಕ್ಕೆ ಹೆಚ್ಚಿಸಲು ಅನುಮೋದನೆ ನೀಡಿದೆ.

ಈ ನಿರ್ಧಾರದಿಂದ ಪ್ರಸ್ತುತ 15 ಸಾವಿರದಿಂದ 25 ಸಾವಿರದವರೆಗೆ ಮಾಸಿಕ ವೇತನ ಪಡೆಯುತ್ತಿರುವ ಸುಮಾರು 51 ಲಕ್ಷಕ್ಕೂ ಅಧಿಕ ಹೆಚ್ಚುವರಿ ಉದ್ಯೋಗಿಗಳು EPFO ಸಾಮಾಜಿಕ ಭದ್ರತಾ ವ್ಯವಸ್ಥೆಯ ವ್ಯಾಪ್ತಿಗೆ ಬರಲಿದ್ದಾರೆ. ಇದರಿಂದ ಈ ಉದ್ಯೋಗಿಗಳಿಗೆ ಭವಿಷ್ಯ ನಿಧಿ, ಉದ್ಯೋಗಿಗಳ ಪಿಂಚಣಿ ಯೋಜನೆ ಹಾಗೂ ಉದ್ಯೋಗಿಗಳ ಠೇವಣಿ ಲಿಂಕ್ಡ್ ವಿಮಾ ಯೋಜನೆ ಸೇರಿದಂತೆ ವಿವಿಧ ಸಾಮಾಜಿಕ ಭದ್ರತಾ ಸೌಲಭ್ಯಗಳ ಲಾಭ ದೊರೆಯಲಿದೆ. EPFO ಕಡ್ಡಾಯ ವ್ಯಾಪ್ತಿಗೆ ಸಂಬಂಧಿಸಿದ ವೇತನ ಮಿತಿಯನ್ನು 2014ರಲ್ಲಿ 15 ಸಾವಿರಕ್ಕೆ ಹೆಚ್ಚಿಸಲಾಗಿತ್ತು. ಇದೀಗ ಒಂದು ದಶಕಕ್ಕೂ ಹೆಚ್ಚು ಅವಧಿಯ ಬಳಿಕ ಈ ಮಿತಿಯನ್ನು 25 ಸಾವಿರಕ್ಕೆ ಹೆಚ್ಚಿಸುವ ನಿರ್ಧಾರ ಕೈಗೊಳ್ಳಲಾಗಿದೆ.

ಕೇಂದ್ರ ಸರ್ಕಾರದ ಪ್ರಕಾರ, ವೇತನ ಮಿತಿ ಹೆಚ್ಚಳದಿಂದ ಹೆಚ್ಚಿನ ಸಂಖ್ಯೆಯ ಉದ್ಯೋಗಿಗಳು ಔಪಚಾರಿಕ ಸಾಮಾಜಿಕ ಭದ್ರತಾ ವ್ಯವಸ್ಥೆಗೆ ಸೇರ್ಪಡೆಯಾಗಲಿದ್ದು, ಅವರ ನಿವೃತ್ತಿ ಭದ್ರತೆ ಹಾಗೂ ಕುಟುಂಬದ ಸಾಮಾಜಿಕ ಭದ್ರತೆ ಮತ್ತಷ್ಟು ಬಲಗೊಳ್ಳಲಿದೆ. ವೇತನ ಮಿತಿ ಹೆಚ್ಚಳದಿಂದ ಸರ್ಕಾರಕ್ಕೆ ವಾರ್ಷಿಕ ಅಂದಾಜು 11,339 ಕೋಟಿ ಹೆಚ್ಚುವರಿ ವೆಚ್ಚವಾಗಲಿದೆ. ಐದು ವರ್ಷಗಳ ಅವಧಿಯಲ್ಲಿ ಒಟ್ಟು ವೆಚ್ಚ ಸುಮಾರು 56,696 ಕೋಟಿ ಎಂದು ಅಂದಾಜಿಸಲಾಗಿದೆ.

EPFO ಹಾಗೂ ಕಾರ್ಮಿಕ ಮತ್ತು ಉದ್ಯೋಗ ಸಚಿವಾಲಯವು ಅಗತ್ಯ ಕಾನೂನು ಮತ್ತು ಆಡಳಿತಾತ್ಮಕ ಪ್ರಕ್ರಿಯೆಗಳನ್ನು ಪೂರ್ಣಗೊಳಿಸಿ ಈ ನಿರ್ಧಾರವನ್ನು ಜಾರಿಗೆ ತರಲಿದೆ.

### ಗ್ರಾಮೀಣ ಭಾಗದ ಯಕ್ಷ ಕಲಾವಿದರತ್ತ ರಾಜ್ಯ ಅಕಾಡೆಮಿ ದೃಷ್ಟಿ!

# ಮಹಿಷಾಸುರ ವೇಷಧಾರಿ ಸುರೇಶ್ ಬಳ್ಳಿಗೆ ಅಕಾಡೆಮಿ ಯಕ್ಷಸಿರಿ ಪ್ರಶಸ್ತಿ





**ಮುಂಬಯಿ (ಗುರುಪುರ), ಸೆ.16:** ಯಕ್ಷಗಾನ ಕಲಾವಿದ ಸುರೇಶ್ ಪೂಜಾರಿ ಬಳ್ಳಿ (ಕುಪ್ಪೆಪದವು) ಅವರಿಗೆ ಕರ್ನಾಟಕ ರಾಜ್ಯ ಯಕ್ಷಗಾನ ಅಕಾಡೆಮಿ ವತಿಯಿಂದ ನೀಡಲಾಗುವ 2026ನೇ ಸಾಲಿನ ಯಕ್ಷ ಸಿರಿ ಪ್ರಶಸ್ತಿ ಸಿಕ್ಕಿದ್ದರೆ, 2024ರಲ್ಲಿ ಕುಪ್ಪೆಪದವು ಅಲ್ಲಿಯವರೇ ಆಗಿರುವ ಉಮೇಶ್ ಸಾಲ್ಯಾನ್ ಅವರಿಗೆ ಈ ಪ್ರಶಸ್ತಿ ಒಲಿದು ಬಂದಿತ್ತು. ವಿಶೇಷವೆಂದರೆ ಇವರಿಬ್ಬರೂ ಕಟೀಲು ಯಕ್ಷಗಾನ ಮೇಳಗಳಲ್ಲಿ ಮಹಿಸಾಸುರನ ಪಾತ್ರಧಾರಿಗಳಾಗಿ ಹೆಚ್ಚು ಪ್ರಚಲಿತದಲ್ಲಿದ್ದಾರೆ.

ಕುಪ್ಪೆಪದವು ಕಿಲೆಂಜಾರು ಗ್ರಾಮದ ಬಳ್ಳಿ ಎಂಬಲ್ಲಿನ ಚೆನ್ನಪ್ಪ ಪೂಜಾರಿ ಮತ್ತು ಶಾರದಾ ದಂಪತಿಯ ಪುತ್ರ ಸುರೇಶ್ ಪೂಜಾರಿ. ಬಾಲ್ಯದಿಂದಲೇ ಯಕ್ಷಗಾನ ಕ್ಷೇತ್ರದ ಮೇಲೆ ಆಸಕ್ತರಾದ ಇವರು 1984ರಲ್ಲಿ ಕುಪ್ಪೆಪದವಿನ ದುರ್ಗೇಶ್ವರಿ ಯಕ್ಷಗಾನ ಮಂಡಳಿ ಮೂಲಕ ರಂಗಸ್ಥಳಕ್ಕೆ ಪದಾರ್ಪಣೆ ಮಾಡಿದ್ದರು. ಇರುವೈಲು ಮೇಳದಲ್ಲಿ ವೇಷ ಮಾಡಿದ್ದ ಇವರು 1989ರಲ್ಲಿ ಮನೋಹರ ಶೆಟ್ಟಿ ನಡಿಕಂಬ್ಳಗುತ್ತು ಅವರ ಶಿಫಾರಸು ಹಾಗೂ ದಿ. ಕಲ್ಲಾಡಿ ವಿಠಲ ಶೆಟ್ಟಿ ಅವರ ಸಹಕಾರದಿಂದ ಕಟೀಲು ಮೇಳ ಸೇರಿದ್ದರು. ಆರಂಭದಲ್ಲಿ ಪುಂಡುವೇಷಕ್ಕೆ ಸೀಮಿತರಾಗಿದ್ದರೂ ಮುಂದೆ ಶೂರ್ಪನಖಾ, ರಾವಣ, ಕುಂಭಕರ್ಣ, ತಾರಕಾಸುರ ಮತ್ತಿತರ ಪಾತ್ರಗಳಿಗೆ ಜೀವ ತುಂಬುತ್ತಿದ್ದರು. ದೇರಣ್ಣ ಬಜ್ಪೆ ಮತ್ತು ಮಂಜುನಾಥ ಭಟ್ ಅವರಲ್ಲಿ ನಾಟ್ಯಾಭ್ಯಾಸ ಮಾಡಿದ್ದರು.

ಇವರು ಕಳೆದ 37 ವರ್ಷಗಳಿಂದ ಕಟೀಲು ಮೇಳದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. 1994ರಲ್ಲಿ ಪ್ರಥಮ ಬಾರಿಗೆ ಮಹಿಷಾಸುರ ವೇಷ ಮಾಡಿದ್ದ ಇವರು ಮುಂದೆ ಕಟೀಲು ಮೇಳದ ಶ್ರೀ ದೇವಿ ಮಹಾತ್ಮೆಯಲ್ಲಿ ಕಾಯಂ ಮಹಿಷಾಸುರ ವೇಷಧಾರಿಯಾದರು. ವಿಶೇಷ ಅಭಿನಯ ಮತ್ತು ಮಾತುಗಾರಿಕೆಯ ಗತ್ತಿನ ಮಹಿಷಾಸುರ ಪಾತ್ರ ಇವರದ್ದಾಗಿದ್ದು, ಯಕ್ಷಪ್ರಿಯರಿಗೆ ಇವರೆಂದರೆ ಅಚ್ಚುಮೆಚ್ಚು.

ಉಡುಪಿಯ ಕಲಾರಂಗ, ಕುಂಬಳೆಯ ಬಣ್ಣದ ಮಾಲಿಂಗ ಪ್ರತಿಷ್ಠಾನ, ಎಕ್ಸೆಲ್ ಅಕಾಡೆಮಿ ಮತ್ತಿತರ ಸಂಸ್ಥೆಗಳಿಗೆ ನೂರಾರು ಪ್ರಶಸ್ತಿ, ಗೌರವಗಳು ಇವರಿಗೆ ಸಂದಾಯವಾಗಿವೆ. ಇದೀಗ ಇವರ ಪ್ರತಿಭೆಗೆ ಸಂದ ಗೌರವವೆಂಬಂತೆ ರಾಜ್ಯ ಯಕ್ಷಗಾನ ಅಕಾಡೆಮಿಯ ಯಕ್ಷ ಸಿರಿ ಪ್ರಶಸ್ತಿ ಬಂದಿದೆ. ಇದು ಇವರ ಕಲಾಸೇವೆ ಮತ್ತು ಯಕ್ಷ ಪ್ರೌಢಿಮೆಗೆ ಸಂದ ಗೌರವವಾಗಿದೆ.

ಹಲವು ಪ್ರಶಸ್ತಿಗಳು ಬಂದಿವೆ. ಯಕ್ಷಗಾನ ಅಕಾಡೆಮಿಯಿಂದ ಗುರುತಿಸಿರುವುದು ತುಂಬ ಸಂತೋಷವಾಗಿದೆ. ಯಕ್ಷರಂಗದಲ್ಲಿ ಈ ಮಟ್ಟಕ್ಕೆ ಏರಲು ಸಹಕರಿಸಿದ ಕಟೀಲಿನ ಆಸ್ರಣ್ಣರು, ಮೇಳದ ಯಜಮಾನರು ಮತ್ತು ಸಹ ಕಲಾವಿದರನ್ನು ಮರೆಯುವಂತಿಲ್ಲ. ಅಕಾಡೆಮಿಯ ಅಧ್ಯಕ್ಷರು, ಸದಸ್ಯರು, ಅದರಲ್ಲೂ ಸದಸ್ಯ ವಿನಯ ಕುಮಾರ್ ಶೆಟ್ಟಿ ಗುರುಪುರ ಅವರಿಗೆ ಕೃತಜ್ಞತೆ ಸಲ್ಲಿಸುತ್ತೇನೆ ಎಂದು ಸುರೇಶ್ ಪೂಜಾರಿ ಬಳ್ಳಿ (ಕುಪ್ಪೆಪದವು) ಹೇಳಿದರು.

ಪ್ರಶಸ್ತಿಗಳು ಪ್ರಭಾವರಹಿತ ವಾಗಿರಬೇಕು. ಅರ್ಹರನ್ನು ಗುರುತಿಸಿದಾಗ ಮಾತ್ರ ಪ್ರಶಸ್ತಿಗಳ ಮೌಲ್ಯ ಹೆಚ್ಚುತ್ತದೆ. ಪ್ರಶಸ್ತಿಗಾಗಿ ಸದಸ್ಯರೊಬ್ಬರು ಮಾಡುವ ಶಿಫಾರಸು ಆ ಕಲಾವಿದರ ಸಾಧನೆಗೆ ಪೂರಕವಾಗಿರಬೇಕೇ ಹೊರತು ಶ್ರೀಮಂತಿಕೆಗೆ ಅಲ್ಲ. ಈ ನಿಟ್ಟಿನಲ್ಲಿ ಯಕ್ಷಗಾನ ಅಕಾಡೆಮಿಯು ಕಳೆದ ಮೂರೂವರೆ ವರ್ಷಗಳ ಅವಧಿಯಲ್ಲಿ ಗ್ರಾಮೀಣ ಭಾಗದ ಹಿರಿಯ ಪ್ರತಿಭೆಗಳಿಗೆ ಮಣೆ ಹಾಕಿದೆ. ಸದಸ್ಯನಾಗಿ ಈ ಬೆಳವಣಿಗೆ ನನಗೆ ಖುಷಿ ತಂದುಕೊಟ್ಟಿದೆ ಎಂದು ಕರ್ನಾಟಕ ರಾಜ್ಯ ಯಕ್ಷಗಾನ ಅಕಾಡೆಮಿ ಸದಸ್ಯ ವಿನಯ ಕುಮಾರ್ ಶೆಟ್ಟಿ ಮಾಣಿಬೆಟ್ಟುಗುತ್ತು (ಗುರುಪುರ) ಹೇಳಿದರು.

> **ಸರ್ಕಾರದ ಯಾವುದೇ ಒಂದು ಕಲಾ ಅಕಾಡೆಮಿ ಅಥವಾ ಪರಿಷತ್ತಿನಲ್ಲಿ ಗ್ರಾಮೀಣ ಪ್ರದೇಶವನ್ನು ಪ್ರತಿನಿಧಿಸುವ ಸದಸ್ಯರಿದ್ದರೆ, ಗ್ರಾಮೀಣ ಭಾಗದಲ್ಲಿ ಅದೆಷ್ಟೋ ವರ್ಷಗಳಿಂದ ಕಲಾ ಸೇವೆಗೈಯುತ್ತಿರುವ ಅಥವಾ ನಿವೃತ್ತಿ ಹೊಂದಿರುವ ಹಿರಿಯ ಪ್ರತಿಭೆಗಳನ್ನು ಗುರುತಿಸಲು ಸುಲಭ ಸಾಧ್ಯವಾಗುತ್ತದೆ. ಇದಕ್ಕೆ ನಿದರ್ಶನವೆಂಬಂತೆ ಕರ್ನಾಟಕ ರಾಜ್ಯ ಯಕ್ಷಗಾನ ಅಕಾಡೆಮಿಯು ಕಳೆದ 4 ವರ್ಷಗಳ ಅವಧಿಯಲ್ಲಿ ಯಕ್ಷಗಾನ ಕ್ಷೇತ್ರದಲ್ಲಿ ಸುದೀರ್ಘ ಸೇವೆಗೈದ, ಜೀವಿತದ ಕೊನೆಯವರೆಗೂ ಎಲೆಮರೆ ಕಾಯಿಯಂತೆ ಇರಬೇಕಿದ್ದ ಹಲವು ಹಿರಿಯ ಮಹಾನ್ ಕಲಾವಿದರನ್ನು ಗುರುತಿಸಿ ಗೌರವಿಸಿದೆ. ಗುರುಪುರ ಹೋಬಳಿಗೆ ಸಂಬಂಧಪಟ್ಟಂತೆ 2024ರಲ್ಲಿ ಶ್ರೀ ಬೆಂಕಿನಾಥೇಶ್ವರ ಯಕ್ಷಗಾನ ಮೇಳದ ಸಂಚಾಲಕ ಹಾಗೂ ಹಿರಿಯ ಸ್ತ್ರೀ ವೇಷಧಾರಿ ಸುರೇಂದ್ರ ಮಲ್ಲಿ ಗುರುಪುರ ಮತ್ತು ಕಟೀಲು ಯಕ್ಷಗಾನ ಮೇಳದ ಮಹಿಷಾಸುರ ಪಾತ್ರಧಾರಿ ಉಮೇಶ್ ಸಾಲ್ಯಾನ್ ಕುಪ್ಪೆಪದವು, 2025ರಲ್ಲಿ ಕಟೀಲು ಮೇಳದ ಕಲಾವಿದ ಮಂಜುನಾಥ ಭಟ್ ಬೆಳ್ಳಾರೆ, 2026ರಲ್ಲಿ ಕಟೀಲು ಯಕ್ಷಗಾನ ಮೇಳದ ಮತ್ತೋರ್ವ ಮಹಿಷಾಸುರ ಪಾತ್ರಧಾರಿ ಸುರೇಶ್ ಪೂಜಾರಿ ಬಳ್ಳಿ (ಕುಪ್ಪೆಪದವು) ಅವರಿಗೆ ಯಕ್ಷಗಾನ ಅಕಾಡೆಮಿ 'ಯಕ್ಷ ಸಿರಿ' ಪ್ರಶಸ್ತಿ ಒಲಿದಿದ್ದರೆ, 2023ರ ಕೊನೆಯ ಅವಧಿಯಲ್ಲಿ ಕಟೀಲು ಯಕ್ಷಗಾನ ಮೇಳದ ಹಿರಿಯ ವೇಷಧಾರಿ ಬಾಬು ಕುಲಾಲ್ ಹಾಗೂ ತಲಕಳ ಶ್ರೀ ವಿಶ್ವನಾಥ ಮಹಾಗಣಪತಿ ಮೇಳದ ಹಿರಿಯ ವೇಷಧಾರಿ ಮಂಗಳೂರಿನ ಕೇಶವ ಶಕ್ತಿನಗರ ಅವರಿಗೂ ಈ ಪ್ರಶಸ್ತಿ ಲಭಿಸಿತ್ತು. ಯಕ್ಷಗಾನ ಉಳಿಸಿ, ಬೆಳೆಸುವಲ್ಲಿ ಶ್ರಮಿಸಿದವರಲ್ಲಿ ಮಂಗಳೂರು ಗ್ರಾಮೀಣ ಪ್ರದೇಶಗಳ ಕಲಾವಿದರ ಸೇವೆ ಮಹತ್ವದ್ದಾಗಿದೆ. ಅಂತಹ ಹಿರಿಯ ಮತ್ತು ಅಪ್ರತಿಮ ಯಕ್ಷಗಾನ ಕಲಾವಿದರಿಗೆ ಅಕಾಡೆಮಿಯ ಗೌರವ ಸಂದಾಯವಾದಾಗಲೇ ಪ್ರಶಸ್ತಿಗಳ ಗೌರವ ಹೆಚ್ಚುತ್ತದೆ ಎಂಬುದು ಮತ್ತೊಂದು ಬಾರಿ ಸಾಬೀತಾಗಿದೆ.**

# ಸೌದಿ ಈ–15 ಯುದ್ಧವಿಮಾನ ಹೊಡೆದುರುಳಿಸಿದ ಹೌತಿ: ಮೆಕ್ಕಾ ಬಳಿ ಅನಧಿಕೃತ ಡ್ರೋನ್ ಪತ್ತೆ



**ರಿಯಾದ್, ಸೆ.16:** ಯೆಮನ್ನ ಹೌತಿ ಬಂಡುಕೋರರು ಸೌದಿ ಅರೇಬಿಯಾದ ಈ–15 ಯುದ್ಧವಿಮಾನವನ್ನು ಹೊಡೆದುರುಳಿಸಿರುವುದಾಗಿ ಹೇಳಿಕೊಂಡಿದ್ದಾರೆ. ಯೆಮನ್‌ನ ಮಾರಿಬ್ ಪ್ರಾಂತ್ಯದಲ್ಲಿ ಸೌದಿ ಯುದ್ಧವಿಮಾನ ಕಾರ್ಯಾಚರಣೆ ನಡೆಸುತ್ತಿದ್ದ ವೇಳೆ ಅದನ್ನು ಕ್ಷಿಪಣಿ ದಾಳಿಯ ಮೂಲಕ ಗುರಿಯಾಗಿಸಲಾಗಿದೆ ಎಂದು ಹೌತಿ ಸೇನಾ ವಕ್ತಾರ ಯಾಹ್ಯಾ ಸರೀ ತಿಳಿಸಿದ್ದಾರೆ.

ಸೌದಿ ಪರ ಪಡೆಗಳಿಗೆ ಬೆಂಬಲ ನೀಡುವ ಉದ್ದೇಶದಿಂದ ಈ–15 ಯುದ್ಧವಿಮಾನ ಮಾರಿಬ್ ವಾಯುಪ್ರದೇಶದಲ್ಲಿ ಕಾರ್ಯಾಚರಣೆ ನಡೆಸುತ್ತಿತ್ತು. ಈ ವೇಳೆ ಸ್ಥಳೀಯವಾಗಿ ತಯಾರಿಸಲಾದ ಕ್ಷಿಪಣಿಯನ್ನು ಬಳಸಿ ಯುದ್ಧವಿಮಾನವನ್ನು ಹೊಡೆದುರುಳಿಸಲಾಗಿದೆ ಎಂದು ಹೌತಿಗಳು ತಿಳಿಸಿದ್ದಾರೆ.

ವಿಮಾನ ಪತನಗೊಂಡ ಸ್ಥಳವನ್ನು ಪತ್ತೆಹಚ್ಚಲು ಮುಂದಾದ ಎರಡು ಸೌದಿ ಯುದ್ಧವಿಮಾನಗಳನ್ನು ಕೂಡ ಹಿಮ್ಮೆಟ್ಟಿಸಲಾಗಿದೆ ಎಂದು ಅವರು ಹೇಳಿಕೊಂಡಿದ್ದಾರೆ. ಆದರೆ, F–15 ಯುದ್ಧವಿಮಾನ ಪತನಗೊಂಡಿರುವ ಕುರಿತು ಸೌದಿ ಅರೇಬಿಯಾ ಇದುವರೆಗೆ ಅಧಿಕೃತ ದೃಢೀಕರಣ ನೀಡಿಲ್ಲ.

ಇದರ ನಡುವೆಯೇ ಮೆಕ್ಕಾ ನಗರದ ದಕ್ಷಿಣ ಭಾಗದಲ್ಲಿ ಹೌತಿಗಳಿಂದ ಉಡಾಯಿಸಲಾಗಿದೆ ಎಂದು ಹೇಳಲಾದ ಡ್ರೋನ್ ಅನ್ನು ಸೌದಿ ಅರೇಬಿಯಾದ ವಾಯು ರಕ್ಷಣಾ ಪಡೆಗಳು ಹೊಡೆದುರುಳಿಸಿರುವುದಾಗಿ ವರದಿಯಾಗಿದೆ. ಡ್ರೋನ್ ಮೆಕ್ಕಾದ ನಿರ್ಬಂಧಿತ ವಾಯುಪ್ರದೇಶ ಪ್ರವೇಶಿಸುವ ಮುನ್ನವೇ ಅದನ್ನು ಪತ್ತೆಹಚ್ಚಿ ನಾಶಪಡಿಸಲಾಗಿದೆ ಎಂದು ಸೌದಿ ಸರ್ಕಾರ ತಿಳಿಸಿದೆ. ಮೆಕ್ಕಾ ಮತ್ತು ಅಲ್ಲಿರುವ ಪವಿತ್ರ ಸ್ಥಳಗಳ ಭದ್ರತೆಯಲ್ಲಿ ಯಾವುದೇ ರಾಜಿ ಇಲ್ಲ ಎಂದು ಸೌದಿ ಅಧಿಕಾರಿಗಳು ಹೇಳಿದ್ದಾರೆ. ಆದರೆ, ತಮ್ಮ ದಾಳಿಗಳು ಪವಿತ್ರ ಸ್ಥಳಗಳನ್ನು ಗುರಿಯಾಗಿಸಿಕೊಂಡಿಲ್ಲ ಎಂದು ಹೌತಿಗಳು ಸ್ಪಷ್ಟಪಡಿಸಿದ್ದಾರೆ. ಆದರೆ ಮೆಕ್ಕಾದಲ್ಲಿ ಮೊದಲ ಬಾರಿಗೆ ಡ್ರೋನ್ ಕಂಡಿ ಬಂದಿರುವುದು ಆತಂಕಕ್ಕೆ ಕಾರಣವಾಗಿದೆ.

# 6 ತಿಂಗಳಲ್ಲಿ 3000 ಅಕ್ರಮ ಹಣ ವರ್ಗಾವಣೆ ತಡೆ ಪ್ರಕರಣ: ಸುಪ್ರೀಂ ಶಂಕೆ

**ಏಕಸದಸ್ಯ ಪ್ರಾಧಿಕಾರದ ಕಾರ್ಯವೈಖರಿ ಕುರಿತು ಪ್ರಶ್ನೆ**



ನವದೆಹಲಿ, ಸೆ.16: ಜಾರಿ ನಿರ್ದೇಶನಾಲಯ (ಇ.ಡಿ.) ಜಪ್ತಿ ಮಾಡಿದ ಆಸ್ತಿಗಳ ಪ್ರಕರಣಗಳನ್ನು ಪರಿಶೀಲಿಸುವ ವಿಚಾರಣಾ ಪ್ರಾಧಿಕಾರದ ರಚನೆ ಮತ್ತು ಕಾರ್ಯ ವೈಖರಿ ಕುರಿತು ಸುಪ್ರೀಂ ಕೋರ್ಟ್‌ನಲ್ಲಿ ಗಂಭೀರ ಪ್ರಶ್ನೆಗಳು ಎದುರಾಗಿವೆ. ಅಕ್ರಮ ಹಣ ವರ್ಗಾವಣೆ ತಡೆ ಕಾಯ್ದೆ (ಪಿಎಂಎಲ್‌ಎ) ಅಡಿಯಲ್ಲಿ 6 ತಿಂಗಳಲ್ಲಿ ಮೂರು ಸಾವಿರ ಪ್ರಕರಣಗಳನ್ನು ಇ.ಡಿ ದಾಖಲಿಸಿದೆ. ಜಪ್ತಿ ಮಾಡಿದ ಆಸ್ತಿಗಳನ್ನು 180 ದಿನಗಳ ಒಳಗೆ ನಿರ್ಧರಿಸಬೇಕಾದ ಕಾನೂನು ನಿಬಂಧನೆಯನ್ನು ಪ್ರಶ್ನಿಸುತ್ತಾ, ಪೀಠವು ಏಕಸದಸ್ಯ ಪ್ರಾಧಿಕಾರದ ಕಾರ್ಯವೈಖರಿಯ ಕುರಿತು ಪ್ರಶ್ನಿಸಿದೆ.

ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್, ನ್ಯಾಯಮೂರ್ತಿ ಜೋಯ್‌ಮಾಲ್ಯ ಬಾಗ್ಚಿ ಮತ್ತು ನ್ಯಾಯಮೂರ್ತಿ ವಿ. ಮೋಹನಾ ಅವರನ್ನೊಳಗೊಂಡ ಪೀಠವು, ಆರು ತಿಂಗಳಲ್ಲಿ (180 ದಿನ) ಇಷ್ಟೊಂದು ದೊಡ್ಡ ಸಂಖ್ಯೆಯ ಪ್ರಕರಣಗಳನ್ನು ಒಬ್ಬರೇ ಸದಸ್ಯರು ನಿರ್ವಹಿಸಬೇಕಾದರೆ, ಅವರು ನಿಜವಾಗಿಯೂ ಬುದ್ಧಿಶಕ್ತಿ ಉಪಯೋಗಿಸಿ ನ್ಯಾಯಯುತವಾಗಿ ವಿಚಾರಣೆ ನಡೆಸಲು ಸಾಧ್ಯವೇ ಅಥವಾ ಕಾರ್ಯಾಂಗ (ಇ.ಡಿ.) ತೆಗೆದುಕೊಂಡ ತೀರ್ಮಾನಕ್ಕೆ ಕೇವಲ ಕಣ್ಣುಮುಚ್ಚಿ ಅಂಕಿತ ಹಾಕುವ ಪ್ರಹಸನ ನಡೆಯುತ್ತಿದೆಯೇ ಎಂದು ತಿವಿದಿದ್ದಾರೆ.

ಇದು ಜನರ ಆಸ್ತಿಯ ಹಕ್ಕುಗಳಿಗೆ ಸಂಬಂಧಿಸಿದ ಗಂಭೀರ ವಿಷಯವಾಗಿದೆ. ಕೇವಲ 100 ಪ್ರಕರಣಗಳಿದ್ದರೂ ಸಹ, ಆಸ್ತಿಯನ್ನು ಮುಟ್ಟುಗೋಲು ಹಾಕಿಕೊಳ್ಳುವ ದೊಡ್ಡ ನಿರ್ಧಾರವನ್ನು ಕೇವಲ ಒಬ್ಬರೇ ಅಧಿಕಾರಿಗೆ ಏಕೆ ವಹಿಸಬೇಕು ಎಂದು ಪ್ರಶ್ನಿಸಿರುವ ಪೀಠವು, ಪ್ರಾಧಿಕಾರದಲ್ಲಿ ಕಡ್ಡಾಯವಾಗಿ ನ್ಯಾಯಾಂಗ ಸದಸ್ಯರು ಇರಬೇಕೇ ಬೇಡವೇ ಮತ್ತು ಕಾನೂನು ಹಿನ್ನೆಲೆ ಇಲ್ಲದ ಏಕ ಸದಸ್ಯ ಪೀಠವು ಇಂತಹ ನಿರ್ಧಾರಗಳನ್ನು ತೆಗೆದುಕೊಳ್ಳಬಹುದೇ ಎಂಬುದನ್ನೂ ಕೋರ್ಟ್ ಪರಿಶೀಲಿಸುತ್ತಿದೆ. ಇಡಿ ಪರ ವಾದ ಮಂಡಿಸಿದ ವಕೀಲರು, ಪಿಎಂಎಲ್‌ಎ ಕಾಯ್ದೆಯ ಸೆಕ್ಷನ್ 6ರ ಪ್ರಕಾರ ವಿಶೇಷ ಸಂದರ್ಭಗಳಲ್ಲಿ ಏಕ ಸದಸ್ಯ ಅಥವಾ ಇಬ್ಬರು ಸದಸ್ಯರ ಪೀಠವನ್ನು ರಚಿಸಲು ಅವಕಾಶವಿದೆ ಎಂದು ಸಮರ್ಥಿಸಿಕೊಂಡರು. ಪ್ರತಿಯೊಂದು ಪ್ರಕರಣದಲ್ಲೂ ಸಂಕೀರ್ಣ ಕಾನೂನು ಪ್ರಶ್ನೆಗಳು ಇರುವುದಿಲ್ಲ. ಹಾಗಾಗಿ ಒಬ್ಬರೇ ಸದಸ್ಯರು ನಿರ್ಧಾರ ಕೈಗೊಳ್ಳುವುದು ಕಾನೂನುಬಾಹಿರವಲ್ಲ ಎಂದು ವಾದಿಸಿದರು. ವರ್ಷಕ್ಕೆ ಸುಮಾರು 400 ಪ್ರಕರಣಗಳು ಮಾತ್ರ ಇಂತಹ ಜಪ್ತಿ ಪ್ರಕ್ರಿಯೆಗೆ ಬರುತ್ತವೆ ಎಂದು ಇ.ಡಿ. ಕೋರ್ಟ್‌ಗೆ ತಿಳಿಸಿತು.

ಆದರೆ ಅರ್ಜಿದಾರರ ಪರ ವಕೀಲರು ಇಡಿ ವೆಬ್‌ಸೈಟ್‌ನಲ್ಲಿರುವ ದತ್ತಾಂಶಗಳನ್ನು ಉಲ್ಲೇಖಿಸಿ, ಸಾವಿರಾರು ಪ್ರಕರಣಗಳು ಬಾಕಿ ಉಳಿದಿರುವುದನ್ನು ಕೋರ್ಟ್ ಗಮನಕ್ಕೆ ತಂದರು. ಇದು ಪ್ರಾಧಿಕಾರದ ಮೇಲಿನ ಹೊರೆ ಮತ್ತು ನ್ಯಾಯಯುತ ವಿಚಾರಣೆಯ ಸಾಧ್ಯತೆಯ ಬಗ್ಗೆ ಸಂದೇಹ ಹುಟ್ಟುಹಾಕಿದೆ.

# ಐಪಿಎಸ್ ಅಧಿಕಾರಿ ಎತ್ತಂಗಡಿ: ಪಶ್ಚಿಮ ಬಂಗಾಳ ಸರ್ಕಾರದ ವಿರುದ್ಧ ಆಕ್ರೋಶ

**ಕೋಲ್ಕತ್ತಾ, ಸೆ. 16:** ಸಾಮಾಜಿಕ ಜಾಲತಾಣದ ವಿಡಿಯೊವೊಂದರಲ್ಲಿ ಅಸ್ಸಲಾಮು ಅಲೈಕುಂ' (ನಿಮಗೆ ಶಾಂತಿಯಾಗಲಿ), ಇನ್ಶಾ ಅಲ್ಲಾ' (ದೇವರು ಇಚ್ಛಿಸಿದರೆ) ಹಾಗೂ ಜಜಾಕಲ್ಲಾ' (ದೇವರು ನಿಮಗೆ ಒಳ್ಳೆಯದನ್ನು ಮಾಡಲಿ) ಎಂಬ ಪದಗಳನ್ನು ಬಳಸಿದ್ದ ಪಶ್ಚಿಮ ಬಂಗಾಳದ ಐಪಿಎಸ್ ಅಧಿಕಾರಿಯೊಬ್ಬರನ್ನು ದಿಢೀರನೆ ಎತ್ತಂಗಡಿ ಮಾಡಲಾಗಿದೆ. ಖರಗ್‌ಪುರದ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿಯಾಗಿದ್ದ (ಎಎಸ್‌ಪಿ) ಬುಶ್ರಾ ಬಾನೊ ಅವರನ್ನು ಸೋಮವಾರ ಪಶ್ಚಿಮ ಬಂಗಾಳ ಸಶಸ್ತ್ರ ಪಡೆಯ ಡೆಪ್ಯೂಟಿ ಕಮಾಂಡೆಂಟ್ ಆಗಿ ವರ್ಗಾವಣೆ ಮಾಡಲಾಗಿದ್ದು, ಇದು ತೀವ್ರ ಚರ್ಚೆಗೆ ಗ್ರಾಸವಾಗಿದೆ.

ಬಲಪಂಥೀಯರ ಆಕ್ಷೇಪಕ್ಕೆ ಮಣಿದು ಸರ್ಕಾರ ಕೈಗೊಂಡಿರುವ ಈ ವರ್ಗಾವಣೆ ಕ್ರಮಕ್ಕೆ ಪ್ರಜ್ಞಾವಂತ ವಲಯದಲ್ಲಿ ತೀವ್ರ ಆಕ್ಷೇಪ ಹಾಗೂ ಆಕ್ರೋಶ ವ್ಯಕ್ತವಾಗುತ್ತಿದೆ. ಹಿಂದೂ ಅಧಿಕಾರಿಯೊಬ್ಬರು ದೇವರೇ ಕಾಪಾಡಪ್ಪ ಅಥವಾ ದೇವರು ಒಳ್ಳೇದ್ ಮಾಡ್ಲಿ ಎಂದು ಸಹಜವಾಗಿ ಹೇಳಿದರೆ ಅವರನ್ನೂ ಇದೇ ರೀತಿ ವರ್ಗಾವಣೆ ಅಥವಾ ಸೇವೆಯಿಂದ ವಜಾಗೊಳಿಸುತ್ತೀರಾ ಎಂದು ಸಾರ್ವಜನಿಕರು ಸಾಮಾಜಿಕ ಜಾಲತಾಣಗಳಲ್ಲಿ ಪ್ರಶ್ನಿಸುತ್ತಿದ್ದು, ಸರ್ಕಾರದ ನಡೆ ವ್ಯಾಪಕ ಟೀಕೆಗೆ ಗುರಿಯಾಗಿದೆ. ಸೆಪ್ಟೆಂಬರ್ 13ರಂದು ಎಕ್ಸ್ (ಹಿಂದಿನ ಟ್ವಿಟರ್) ಖಾತೆಯಲ್ಲಿ ವಿಡಿಯೊವೊಂದನ್ನು ಹಂಚಿಕೊಂಡಿದ್ದ ಬುಶ್ರಾ ಬಾನೊ, ತಮ್ಮ ಯುಪಿಎಸ್‌ಸಿ ಪರೀಕ್ಷಾ ಸಿದ್ಧತೆಗೆ ಅಲಿಗಢ ಮುಸ್ಲಿಂ ವಿಶ್ವವಿದ್ಯಾಲಯದ (ಎಎಂಯು) ರೆಸಿಡೆನ್ಶಿಯಲ್ ಕೋಚಿಂಗ್ ಅಕಾಡೆಮಿ ಹೇಗೆ ನೆರವಾಯಿತು ಎಂಬುದನ್ನು ವಿವರಿಸಿದ್ದರು. ಈ ವಿಡಿಯೊದಲ್ಲಿ ಅವರು ಮಾತನಾಡುವಾಗ ಇಸ್ಲಾಮಿಕ್ ಶುಭಾಶಯ ಹಾಗೂ ಪ್ರಾರ್ಥನಾ ಪದಗಳಾದ ಅಸ್ಸಲಾಮು ಅಲೈಕುಂ (ನಿಮಗೆ ಶಾಂತಿಯಾಗಲಿ), ಇನ್ಶಾ ಅಲ್ಲಾ (ದೇವರು ಇಚ್ಛಿಸಿದರೆ) ಹಾಗೂ ಜಜಾಕಲ್ಲಾ (ದೇವರು ನಿಮಗೆ ಒಳ್ಳೆಯದನ್ನು ಮಾಡಲಿ) ಎಂಬ ಪದಗಳನ್ನು ಬಳಸಿದ್ದರು.

### ವಿಶೇಷ ಪರಿಹಾರ ಯೋಜನೆ ಪ್ರಕಟಿಸಿದ ಬ್ಯಾಂಕರ್‌ಗಳ ರಾಜ್ಯಮಟ್ಟದ ಸಮಿತಿ

# ಬರಪೀಡಿತ ತಾಲೂಕುಗಳ ರೈತರಿಗೆ ಸಾಲ ಮರುಪಾವತಿಯಲ್ಲಿ ವಿನಾಯಿತಿ

**ಬೆಂಗಳೂರು, ಸೆ.16:** ರಾಜ್ಯದ ಬರಪೀಡಿತ ತಾಲೂಕುಗಳ ರೈತರ ನೆರವಿಗೆ ಧಾವಿಸಿರುವ ಬ್ಯಾಂಕರ್‌ಗಳ ರಾಜ್ಯಮಟ್ಟದ ಸಮಿತಿ, ಕೃಷಿ ಮತ್ತು ಕೃಷಿ ಸಂಬಂಧಿತ ಸಾಲಗಳ ಮರುಪಾವತಿಗೆ ಸಂಬಂಧಿಸಿದಂತೆ ವಿಶೇಷ ಪರಿಹಾರ ಯೋಜನೆಯನ್ನು ಪ್ರಕಟಿಸಿದೆ.

ಸಾಲ ಮರುಪಾವತಿಗೆ 12 ತಿಂಗಳ ಕಾಲಾವಕಾಶ (ಮೊರಟೋರಿಯಂ) ನೀಡುವ ಜೊತೆಗೆ, ಒಟ್ಟು ಸಾಲ ಮರುಪಾವತಿಯ ಅವಧಿಯನ್ನು ವಿಸ್ತರಿಸಿ ರೈತರಿಗೆ ನೆರವಾಗಲು ನಿರ್ಧರಿಸಲಾಗಿದೆ. ಕರ್ನಾಟಕ ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ಸಭೆಯ ಟಿಪ್ಪಣಿಯ ಪ್ರಕಾರ ಈ ಪ್ರಮುಖ ನಿರ್ಧಾರಗಳನ್ನು ಕೈಗೊಳ್ಳಲಾಗಿದೆ.

ರಾಜ್ಯದ 24 ಜಿಲ್ಲೆಗಳ ಒಟ್ಟು 101 ತಾಲೂಕುಗಳನ್ನು ಬರಪೀಡಿತ ಎಂದು ಸರ್ಕಾರ ಘೋಷಿಸಿದೆ. ಇದರಲ್ಲಿ 89 ತಾಲೂಕುಗಳನ್ನು ತೀವ್ರ ಬರಪೀಡಿತ ಹಾಗೂ 12 ತಾಲೂಕುಗಳನ್ನು ಸಾಧಾರಣ ಬರಪೀಡಿತ ಎಂದು ವರ್ಗೀಕರಿಸ 'ಲಾಗಿದೆ.

**ಸಾಲ ಮರುಪಾವತಿ ಅವಧಿ ವಿಸ್ತರಣೆ:**

ಕಿಸಾನ್ ಕ್ರೆಡಿಟ್ ಕಾರ್ಡ್, ಕೃಷಿ ಸಾಲಗಳು, ಹೈನುಗಾರಿಕೆ, ರೇಷ್ಮೆ ಹಾಗೂ ಮೀನುಗಾರಿಕೆ ಸೇರಿದಂತೆ ಇತರ ಕೃಷಿ ಸಂಬಂಧಿತ ಸಾಲಗಳಿಗೆ 12 ತಿಂಗಳ ಮೊರಟೋರಿಯಂ ನೀಡಲಾಗುತ್ತದೆ. ಸಾಧಾರಣ ಬರಪೀಡಿತ ತಾಲೂಕುಗಳಲ್ಲಿ ಸಾಲ ಮರುಪಾವತಿ ಅವಧಿಯನ್ನು 36 ತಿಂಗಳಿಗೆ (3 ವರ್ಷ) ಹಾಗೂ ತೀವ್ರ ಬರಪೀಡಿತ ತಾಲೂಕುಗಳಲ್ಲಿ 60 ತಿಂಗಳಿಗೆ (5 ವರ್ಷ) ವಿಸ್ತರಿಸಲಾಗಿದೆ. ಕೇವಲ ಹಳೆಯ ಸಾಲ ಮರುಪಾವತಿ ಮುಂದೂಡುವುದು ಮಾತ್ರವಲ್ಲದೆ, ರೈತರ ತುರ್ತು ಅಗತ್ಯಕ್ಕೆ ಅನುಗುಣವಾಗಿ ಬ್ಯಾಂಕುಗಳು ತಮ್ಮ ನಿಯಮಾವಳಿಗಳಂತೆ ಹೊಸ ಸಾಲಗಳನ್ನು ವಿತರಿಸಲಿವೆ. ಸರ್ಕಾರವು ಮುಂದೆ ಮತ್ತೆ ಯಾವುದೇ ಹೊಸ ತಾಲೂಕುಗಳನ್ನು ಬರಪೀಡಿತ ಎಂದು ಘೋಷಿಸಿದರೆ, ಈ ಪರಿಹಾರದ ಚೌಕಟ್ಟು ಪ್ರತ್ಯೇಕ ಎಸ್‌ಎಲ್‌ಬಿಸಿ ಸಭೆಯ ಅಗತ್ಯವಿಲ್ಲದೇ ಸ್ವಯಂಚಾಲಿತವಾಗಿ ಅನ್ವಯವಾಗಲಿದೆ.

ಪರಿಹಾರ ಯೋಜನೆಯನ್ನು ಅಕ್ಟೋಬರ್ 11 ರೊಳಗೆ (ಬರ ಘೋಷಣೆಯಾದ 45 ದಿನಗಳ ಒಳಗೆ) ಜಾರಿಗೆ ತರಲಾಗುತ್ತದೆ. ಪರಿಹಾರದ ಸಂಪೂರ್ಣ ಪ್ರಕ್ರಿಯೆಯನ್ನು ಜನವರಿ 9 ರೊಳಗೆ (135 ದಿನಗಳ ಒಳಗೆ) ಪೂರ್ಣ ಗೊಳಿಸಲು ಬ್ಯಾಂಕುಗಳಿಗೆ ಸೂಚಿಸಲಾಗಿದೆ. ಕೆನರಾ ಬ್ಯಾಂಕ್ (ಎಸ್‌ಎಲ್‌ಬಿಸಿ) ಸಭೆಯ ಅಂತಿಮ ನಡಾವಳಿಗಳನ್ನು ಸೆಪ್ಟೆಂಬರ್ 26 ರೊಳಗೆ ಸಂಬಂಧಪಟ್ಟ ಪೋರ್ಟಲ್ ಗಳಲ್ಲಿ ಅಪ್‌ಲೋಡ್ ಮಾಡಲಿದೆ.

**ಬಲವಂತದ ವಸೂಲಾತಿಗೆ ನಿಷೇಧ**

ಈ ವರ್ಷ ರೈತರಿಂದ ಯಾವುದೇ ರೀತಿಯ ಬಲವಂತದ ಸಾಲ ವಸೂಲಾತಿ ಮಾಡದಂತೆ ಕಟ್ಟುನಿಟ್ಟಿನ 'ಝೀರೋ ಟಾಲರೆನ್ಸ್' ನೀತಿಯನ್ನು ಜಾರಿಗೆ ತರಲಾಗಿದೆ. ರೈತರಿಂದ ಬರುವ ದೂರುಗಳಿಗೆ ಜಿಲ್ಲಾಡಳಿತ ತಕ್ಷಣವೇ ಸ್ಪಂದಿಸಬೇಕು ಮತ್ತು ಯಾವುದೇ ವಸೂಲಾತಿ ಪ್ರಕ್ರಿಯೆಗೂ ಮುನ್ನ ಬ್ಯಾಂಕುಗಳನ್ನು ಸಂಪರ್ಕಿಸಬೇಕು ಎಂದು ಸೂಚಿಸಲಾಗಿದೆ.

**ರೈತರಿಗೆ ನೇರ ಜಾಗೃತಿ:**

ಜಿಲ್ಲಾಧಿಕಾರಿಗಳು, ಸಿಇಓಗಳು ಮತ್ತು ಜಿಲ್ಲಾ ಪ್ರಮುಖ ಬ್ಯಾಂಕ್ ವ್ಯವಸ್ಥಾಪಕರ ಜೊತೆಗೆ ಕೃಷಿ, ತೋಟಗಾರಿಕೆ, ಪಶುಸಂಗೋಪನೆ ಮತ್ತು ದುರಂತ ನಿರ್ವಹಣೆ ಇಲಾಖೆಗಳ ಕಾರ್ಯದರ್ಶಿಗಳು ವೀಡಿಯೋ ಕಾನ್ಫರೆನ್ಸ್ ಮೂಲಕ ಸಭೆ ನಡೆಸಿ ರೈತರಿಗೆ ಯೋಜನೆಗಳ ಮಾಹಿತಿ ತಲುಪಿಸಲಿದ್ದಾರೆ.

**ಸಹಕಾರ ವಲಯದ ಸಾಲ ಸೌಲಭ್ಯ:** ಸಹಕಾರ ಬ್ಯಾಂಕುಗಳ ಸಾಲ ಮರುಪಾವತಿ ಅವಧಿ ವಿಸ್ತರಣೆಗೆ ಸಂಬಂಧಿಸಿದಂತೆ ನಬಾರ್ಡ್ ಹಾಗೂ ರಾಜ್ಯ ಸರ್ಕಾರದ ಹಂತದಲ್ಲಿ ಚರ್ಚಿಸಿ ಶೀಘ್ರದಲ್ಲೇ ಸೂಕ್ತ ಪರಿಹಾರ ರೂಪಿಸಲಾಗುವುದು ಎಂದು ಸರ್ಕಾರದ ಮುಖ್ಯ ಕಾರ್ಯದರ್ಶಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಬುಧವಾರ ಬೆಂಗಳೂರಿನ ಜಯನಗರ ಪೊಲೀಸ್ ಠಾಣೆಯ ಬಳಿ, ವಶಪಡಿಸಿಕೊಳ್ಳಲಾದ ಮತ್ತು ಅನಾಥವಾಗಿ ಬಿದ್ದಿರುವ ವಾಹನಗಳನ್ನು ತೆರವುಗೊಳಿಸುವ ಕಾರ್ಯಕ್ರಮಕ್ಕೆ ಸಚಿವ ಕೃಷ್ಣ ಬೈರೇಗೌಡ ಮತ್ತು ಪೊಲೀಸ್ ಆಯುಕ್ತ ಸೀಮಂತ್ ಕುಮಾರ್ ಸಿಂಗ್ ಚಾಲನೆ ನೀಡಿದರು. ಪೊಲೀಸ್ ಠಾಣೆಗಳಲ್ಲಿ ದೀರ್ಘಕಾಲದಿಂದ ಶೇಖರಣೆಯಾಗಿರುವ 11,346 ವಾಹನಗಳನ್ನು ತೆರವುಗೊಳಿಸಲು ಬೆಂಗಳೂರು ಸಂಚಾರ ಪೊಲೀಸ್ (BTP) ಮತ್ತು ಬೃಹತ್ ಬೆಂಗಳೂರು ಪ್ರಾಧಿಕಾರ (GBA) ನಗರವ್ಯಾಪಿ ಬೃಹತ್ ಅಭಿಯಾನವನ್ನು ಆರಂಭಿಸಿವೆ. ಈ ಅಧಿಕೃತ ಅಭಿಯಾನಕ್ಕೆ ಜಯನಗರ ಪೊಲೀಸ್ ಠಾಣೆಯಲ್ಲಿ ಚಾಲನೆ ನೀಡಲಾಯಿತು.

### ವೈಟ್ ಫೀಲ್ಡ್- ಪಣತೂರು ಅರಣ್ಯ ಇಲಾಖೆಯ ನಗರವನ ಯೋಜನೆಯಡಿ ನಿರ್ಮಾಣ

# 45 ಎಕರೆ ವಿಸ್ತೀರ್ಣದ ವೃಕ್ಷೋದ್ಯಾನ ಉದ್ಘಾಟಿಸಿದ ಸಚಿವ ರಾಮಲಿಂಗಾ ರೆಡ್ಡಿ



**ಬೆಂಗಳೂರು, ಸೆ.16:** ವೈಟ್ ಫೀಲ್ಡ್– ಪಣತೂರು ಅರಣ್ಯ ಇಲಾಖೆಯ ನಗರವನ ಯೋಜನೆಯಡಿ 45 ಎಕರೆ ವಿಸ್ತೀರ್ಣದಲ್ಲಿ ನಿರ್ಮಿಸಿರುವ ವೃಕ್ಷೋದ್ಯಾನವನ್ನು ಅರಣ್ಯ ಮತ್ತು ಪರಿಸರ ಸಚಿವ ರಾಮಲಿಂಗಾ ರೆಡ್ಡಿ ಉದ್ಘಾಟಿಸಿದರು.

ಬೆಂಗಳೂರು ನಗರ ಜಿಲ್ಲೆಯ, ಪೂರ್ವ ತಾಲೂಕಿನ, ವರ್ತೂರು ಹೋಬಳಿಯ, ಪಣತೂರು ಗ್ರಾಮದಲ್ಲಿ ಸುಮಾರು 145 ಎಕರೆ ಪ್ರದೇಶವು ಅರಣ್ಯ ಇಲಾಖೆಯ ಸುಪರ್ದಿಯಲ್ಲಿದೆ.

ಇದರಲ್ಲಿ 45 ಎಕರೆ ಸ್ಥಳವನ್ನು ಅರಣ್ಯ ಇಲಾಖೆಯ ನಗರವನ ಯೋಜನೆಯ ಅಡಿಯಲ್ಲಿ ಹಾಗೂ ಕ್ವಾಲ್ಕಾಮ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ ಸಂಸ್ಥೆಯ ಸಿಎಸ್‌ಆರ್ ನಿಧಿಯ ನೆರವಿನೊಂದಿಗೆ ಹಾಗೂ 'ಸೇಟೀಸ್' ಎನ್‌ಜಿಒ ಸಹಯೋಗದೊಂದಿಗೆ ಈ ಪ್ರದೇಶವನ್ನು ಅಭಿವೃದ್ಧಿಪಡಿಸಿದೆ. ಇದು ವಿವಿಧ ಜಾತಿಯ ಮರಗಿಡ, ಪ್ರಾಣಿ, ಪಕ್ಷಿ ಸಂಕುಲದಿಂದ ಕೂಡಿದೆ.

ಅರಣ್ಯ ಸಚಿವರು ಮಾತನಾಡುತ್ತಾ, ಇನ್ನೂ ಉಳಿದಿರುವ 100 ಎಕರೆ ಪ್ರದೇಶವನ್ನು ಕ್ವಾಲ್ಕಾಮ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ ರವರೇ ಅಭಿವೃದ್ಧಿಪಡಿಸುವಂತೆ ಕೋರಿದರು. ಅರಣ್ಯ ಇಲಾಖೆಯಿಂದಲೂ ಅನುದಾನ ಸಹಾಯ ಮಾಡಲಾಗುವುದೆಂದು ಅರಣ್ಯ ಸಚಿವರು ತಿಳಿಸಿದರು.

ಸದರಿ ಪಾರ್ಕ್ ಅನ್ನು ರೂ. 4.50 ಕೋಟಿ ವೆಚ್ಚದಲ್ಲಿ ಸಿ.ಎಸ್.ಆರ್ ಅನುದಾನದಲ್ಲಿ ಅಭಿವೃದ್ಧಿ ಪಡಿಸಲಾಗಿದೆ. ರೂ 1 ಕೋಟಿ ಹೆಚ್ಚುವರಿ ಸಿ.ಎಸ್.ಆರ್ ಅನುದಾನ ನೀಡಿರುವುದನ್ನು ಸ್ಥಳದ ಸುತ್ತಲೂ ಕಾಪೌಂಡ್ ನಿರ್ಮಿಸಲು ಉಪಯೋಗಿಸಿಕೊಳ್ಳುವಂತೆ ಹಾಗೂ ಹಸಿರು ಬೆಳೆಸುವ ಕಾರ್ಯ ಯಥೇಚ್ಛವಾಗಿ ನಡೆಯಲಿ ಎಂದು ಮಾನ್ಯ ಸಚಿವರು ತಿಳಿಸಿದರು.

ಮುಖ್ಯಮಂತ್ರಿಗಳು ಈಗಾಗಲೇ ಘೋಷಿಸಿರುವಂತೆ ಬೆಂಗಳೂರು ನಗರದಲ್ಲಿ ಲಾಲ್ ಬಾಗ್ ಮತ್ತು ಕಬ್ಬನ್ ಪಾರ್ಕ್ ಹೊರತುಪಡಿಸಿ, ಇನ್ನಾವುದೇ ಬೃಹತ್ ಉದ್ಯಾನವನ ಇಲ್ಲದಿರುವಿದರಿಂದ, ನಗರದ ಇನ್ನೂ 4 ಕಡೆ ಇದೇ ಮಾದರಿಯ ಬೃಹತ್ ಪಾರ್ಕ್ ಅನ್ನು ನಿರ್ಮಿಸಲು ಯೋಜನೆ ರೂಪಿಸಲಾಗುತ್ತಿದೆ. ನಗರ ಪ್ರದೇಶದ ಜನರಿಗೆ ಹಸಿರು ವಾತಾವರಣವನ್ನು ಕಲ್ಪಿಸುವುದು, ಪರಿಸರ ಸಂರಕ್ಷಣೆ ಮತ್ತು ಸಾರ್ವಜನಿಕರಿಗೆ ಆರೋಗ್ಯಕರ ಸೌಲಭ್ಯಗಳನ್ನು ಒದಗಿಸುವುದು ಇದರ ಮುಖ್ಯ ಉದ್ದೇಶವಾಗಿದೆ.

### ಎಸಿ ರೂಂನಲ್ಲಿ ಕೂರಬೇಡಿ, ರಂಗಕ್ಕಿಳಿಯಿರಿ: ಅಧಿಕಾರಿಗಳಿಗೆ ಸಚಿವ ಚಲುವರಾಯಸ್ವಾಮಿ ಸೂಚನೆ

# ಕಾವೇರಿ ನೀರಾವರಿ ನಿಗಮದ ಯೋಜನೆಗಳಲ್ಲಿ ನಿರ್ಲಕ್ಷ್ಯ ಬೇಡ



**ಬೆಂಗಳೂರು, ಸೆ.16:** ಕಾವೇರಿ ನೀರಾವರಿ ನಿಗಮದ ಯೋಜನೆಗಳಲ್ಲಿ ಅಧಿಕಾರಿಗಳು ನಿರ್ಲಕ್ಷ್ಯ ವಹಿಸಬಾರದು. ಹವಾನಿಯಂತ್ರಿತ ಕೊಠಡಿಯಲ್ಲಿ ಕುಳಿತು ಲೆಕ್ಕಾಚಾರ ಹಾಕುವ ಬದಲು, ನೇರವಾಗಿ ಫೀಲ್ಡಿಗಿಳಿದು ರೈತರ ಸಮಸ್ಯೆಗಳಿಗೆ ಸ್ಪಂದಿಸಬೇಕು. ಕೆಲಸ ಮಾಡದ ಅಧಿಕಾರಿಗಳನ್ನು ನಿರ್ದಾಕ್ಷಿಣ್ಯವಾಗಿ ಅಮಾನತು ಮಾಡಲಾಗುವುದು ಎಂದು ಜಲಸಂಪನ್ಮೂಲ ಸಚಿವ ಎನ್. ಚಲುವರಾಯಸ್ವಾಮಿ ಕಟ್ಟುನಿಟ್ಟಿನ ಎಚ್ಚರಿಕೆ ನೀಡಿದ್ದಾರೆ.

ಬೆಂಗಳೂರಿನ ಕೃಷ್ಣಾ ಭಾಗ್ಯ ಜಲ ನಿಗಮದ ಸಭಾಂಗಣದಲ್ಲಿ ನಡೆದ ಕಾವೇರಿ ನೀರಾವರಿ ನಿಗಮದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಅಧಿಕಾರಿಗಳಿಗೆ ಚಾಟಿ ಬೀಸಿದರು.

ರಾಜ್ಯದ ಡ್ಯಾಂಗಳಲ್ಲಿನ ನೀರಿನ ಪ್ರಮಾಣ, ಡೆಡ್ ಸ್ಟೋರೇಜ್, ತಮಿಳುನಾಡಿಗೆ ಹರಿಸಿದ ನೀರು ಸೇರಿದಂತೆ ಪ್ರತಿಯೊಂದು ಮಾಹಿತಿಯನ್ನು ದಿನಕ್ಕೆ ಎರಡು ಬಾರಿ ಕಡ್ಡಾಯವಾಗಿ ನೀಡಬೇಕು. ಬೇಸಿಗೆ ಮುಗಿಯುವವರೆಗೂ ಕುಡಿಯುವ ನೀರಿಗೆ ತೊಂದರೆಯಾಗದಂತೆ ನೋಡಿಕೊಳ್ಳಬೇಕು ಎಂದು ಸೂಚಿಸಿದರು.

ನಿಗಮದ ವ್ಯಾಪ್ತಿಯ 23 ಸಣ್ಣ ಅಣೆಕಟ್ಟುಗಳ ಪೈಕಿ 800 ವರ್ಷ ಹಳೆಯದಾದ ಮಂದಗೆರೆ ಹಾಗೂ ಹೇಮಗಿರಿ ಅಣೆಕಟ್ಟು ಶಿಥಿಲವಾಗಿದ್ದು, ತಕ್ಷಣ ದುರಸ್ತಿ ಮಾಡಬೇಕು. ಹೇಮಾವತಿ ನೀರನ್ನು ಕುಣಿಗಲ್ ಮಾರ್ಗವಾಗಿ ಹುಲಿಯೂರು ದುರ್ಗದವರೆಗೆ ಹರಿಸಲು ಬಾಕಿ ಇರುವ 32 ಕಿ.ಮೀ ಕಾಮಗಾರಿ ಪೂರ್ಣಗೊಳಿಸಬೇಕು ಎಂದರು.

ಸಭೆಯಲ್ಲಿ ಸರ್ಕಾರದ ಕಾರ್ಯದರ್ಶಿ ಕುಲಕರ್ಣಿ, ಕಾವೇರಿ ನೀರಾವರಿ ನಿಗಮದ ವ್ಯವಸ್ಥಾಪಕ ನಿರ್ದೇಶಕ ಮಹೇಶ್ ಸೇರಿದಂತೆ ಹಿರಿಯ ಎಂಜಿನಿಯರ್‌ಗಳು ಉಪಸ್ಥಿತರಿದ್ದರು.

**ಮೂರು ವರ್ಷದೊಳಗೆ ಮೇಕೆದಾಟು ಪೂರ್ಣಗೊಳಿಸುವ ಗುರಿ:** ಮೇಕೆದಾಟು ಯೋಜನೆ ಕುರಿತು ಮಾತನಾಡಿದ ಸಚಿವರು, ಕಳೆದ ಐದು ವರ್ಷಗಳಲ್ಲಿ 112.88 ಟಿಎಂಸಿ ಹೆಚ್ಚುವರಿ ಕಾವೇರಿ ನೀರು ಸಮುದ್ರ ಪಾಲಾಗಿದೆ. ಬರಗಾಲದಲ್ಲೂ ಎರಡು ರಾಜ್ಯಗಳಿಗೆ ಅನುಕೂಲವಾಗುವ ಹಾಗೂ ಕನಿಷ್ಠ 22 ಟಿಎಂಸಿ ಕುಡಿಯುವ ನೀರು ಸಂಗ್ರಹಿಸಲು ಮೇಕೆದಾಟು ಯೋಜನೆಯೊಂದೇ ಶಾಶ್ವತ ಪರಿಹಾರವಾಗಿದೆ ಎಂದರು.

ತಮಿಳುನಾಡು ಕೇಳಿದ್ದ ಪ್ರಶ್ನೆಗಳಿಗೆ ಎಸ್‌ಒಪಿ ಕಳುಹಿಸಿ ಗೊಂದಲ ಬಗೆಹರಿಸಲಾಗಿದೆ. ಕೇಂದ್ರ ಜಲ ಆಯೋಗವೂ ಸಕಾರಾತ್ಮಕವಾಗಿ ಸ್ಪಂದಿಸಿದೆ. ಮುಖ್ಯಮಂತ್ರಿಗಳ ಮೂಲಕ ಕೇಂದ್ರ ಜಲಶಕ್ತಿ ಸಚಿವರನ್ನು ಭೇಟಿ ಮಾಡಿ, ರಾಜ್ಯದ ಎಲ್ಲಾ ಸಂಸದರ ಸಹಕಾರದೊಂದಿಗೆ ಪ್ರಧಾನಿಗೆ ಯೋಜನೆಯ ಲಾಭ ಮನವರಿಕೆ ಮಾಡಿಕೊಡಲಾಗುವುದು. ಮುಳುಗಡೆ ಪ್ರದೇಶಕ್ಕೆ ಪರ್ಯಾಯ ಭೂಮಿ ಸಿಕ್ಕ ತಕ್ಷಣ ಕಾಮಗಾರಿ ಆರಂಭಿಸಿ ಮೂರು ವರ್ಷದೊಳಗೆ ಪೂರ್ಣಗೊಳಿಸುವ ಗುರಿ ಇದೆ ಎಂದರು.

# ಸತೀಶ್ ಜಾರಕಿಹೊಳಿ ವಿರುದ್ಧ ಹೊಸ ಪ್ರಕರಣ ದಾಖಲಿಸಲು ಇ.ಡಿ. ಸಿದ್ಧತೆ

**ಬೆಂಗಳೂರು, ಸೆ.16:** ಲೋಕೋಪ ಯೋಗಿ ಸಚಿವ ಸತೀಶ್ ಜಾರಕಿಹೊಳಿ ವಿರುದ್ಧ ಜಾರಿ ನಿರ್ದೇಶನಾಲಯ (ಇ.ಡಿ.) ತನ್ನ ತನಿಖಾ ಜಾಲವನ್ನು ಮತ್ತಷ್ಟು ಬಿಗಿಗೊಳಿಸುತ್ತಿದ್ದು, ಅಕ್ರಮ ಹಣ ವರ್ಗಾವಣೆ ತಡೆ ಕಾಯ್ದೆಯಡಿ ಹೊಸ ಪ್ರಕರಣ ದಾಖಲಿಸಲು ಸಿದ್ಧತೆ ನಡೆಸಿದೆ.

ಮೂಲಗಳ ಪ್ರಕಾರ, ಸೆ.9–10ರಂದು ಬೆಂಗಳೂರು, ಬೆಳಗಾವಿ, ಗೋಕಾಕ್ ಹಾಗೂ ಕೋಲ್ಕತ್ತಾಗಳಲ್ಲಿ ಸಚಿವರ ಆಪ್ತರು ಮತ್ತು ಕುಟುಂಬಸ್ಥರ ನಿವಾಸಗಳ ಮೇಲೆ ನಡೆದ ಇಡಿ ದಾಳಿ ವೇಳೆ 3.3 ಕೋಟಿ ನಗದು, 15 ಲಕ್ಷ ಮೌಲ್ಯದ ವಿದೇಶಿ ಕರೆನ್ಸಿ ಹಾಗೂ ಹಲವಾರು ಮಹತ್ವದ ದಾಖಲೆಗಳನ್ನು ಜಪ್ತಿ ಮಾಡಲಾಗಿತ್ತು.

ಹವಾಲಾ ದಂಧೆ ಹಾಗೂ ಗಡಿಯಾಚೆಗಿನ ವಿದೇಶಿ ವಹಿವಾಟು ನಡೆಸಿರುವ ಶಂಕೆ ವ್ಯಕ್ತವಾಗಿದ್ದು, ತನಿಖೆಯನ್ನು ತೀವ್ರಗೊಳಿಸಲು ಇ.ಡಿ ನಿರ್ದೇಶಕ ರಾಹುಲ್ ನವೀನ್ ಅವರು ಕರ್ನಾಟಕ ಮತ್ತು ಗೋವಾ ವಲಯದ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದ್ದಾರೆ. ವಿದೇಶಿ ಹೂಡಿಕೆ, ಗಡಿಯಾಚೆಗಿನ ವ್ಯವಹಾರಗಳು ಹಾಗೂ ಹಣಕಾಸು ಅಕ್ರಮಗಳ ಆರೋಪಗಳ ಹಿನ್ನೆಲೆಯಲ್ಲಿ ನಡೆದಿರುವ ತನಿಖೆ ಇದೀಗ ಅಕ್ರಮ ಹಣ ವರ್ಗಾವಣೆ ತಡೆ ಕಾಯ್ದೆ ಅಡಿಯಲ್ಲಿ ಮುಂದಿನ ಹಂತಕ್ಕೆ ಸಾಗುವ ಸಾಧ್ಯತೆ ಕುರಿತು ವರದಿಗಳು ಹೊರಬಿದ್ದಿವೆ.

ಇದುವರೆಗೆ ಈ ಕಾರ್ಯಾಚರಣೆ ಮುಖ್ಯವಾಗಿ ವಿದೇಶಿ ವಿನಿಮಯ ನಿರ್ವಹಣಾ ಕಾಯ್ದೆ (ಎಫ್‌ಇಎಂಎ) ವ್ಯಾಪ್ತಿಯಲ್ಲಿನ ಅಘೋಷಿತ ವಿದೇಶಿ ಹೂಡಿಕೆಗಳು, ಗಡಿಯಾಚೆಗಿನ ವ್ಯವಹಾರಗಳು ಮತ್ತು ಹಣಕಾಸು ಅಕ್ರಮಗಳ ಪರಿಶೀಲನೆಗೆ ಸಂಬಂಧಿಸಿದೆ ಎಂದು ಇಡಿ ಹೇಳಿದೆ. ಆದರೆ ಶೋಧ ಕಾರ್ಯದಲ್ಲಿ ದೊರೆತ ದಾಖಲೆಗಳು ಮತ್ತು ಹಣದ ವ್ಯವಹಾರದ ವಿವರಗಳ ಆಧಾರದ ಮೇಲೆ ಹಣದ ಮೂಲ, ಅದರ ವರ್ಗಾವಣೆ ಹಾಗೂ ಅಂತಿಮ ಬಳಕೆಯ ಬಗ್ಗೆ ತನಿಖೆ ವಿಸ್ತರಿಸುವ ಸಾಧ್ಯತೆ ಇದೆ ಎಂಬುದು ಈಗಿನ ಚರ್ಚೆಯ ಕೇಂದ್ರವಾಗಿದೆ. ಗುತ್ತಿಗೆದಾರರಿಂದ ಸಂಗ್ರಹಿಸಲಾಗಿದೆ ಎನ್ನಲಾದ ಹಣವನ್ನು ವಿದೇಶಿ ಆಸ್ತಿಗಳು ಹಾಗೂ ಆಫ್ರಿಕಾದ ಗಣಿಗಾರಿಕೆ ಉದ್ಯಮಗಳಲ್ಲಿ ಹೂಡಿಕೆ ಮಾಡಿರುವ ಆರೋಪಗಳನ್ನೂ ಇಡಿ ಪರಿಶೀಲಿಸುತ್ತಿದೆ.

ಕಾಂಗೋದ ಮ್ಯಾಗ್ನಿಟ್ಯೂಡ್ ಸ್ಟಾರ್ ಎಸ್.ಎ.ಆರ್.ಎಲ್, ಎಲ್ಡೋರಾಡೋ ಮೈನಿಂಗ್ ರಿಸೋರ್ಸ್ ಹಾಗೂ ಜಾಂಬಿಯಾದ ನವ ಅರುಮ್ ಮೈನಿಂಗ್ ಸೇರಿದಂತೆ ಕೆಲವು ವಿದೇಶಿ ಸಂಸ್ಥೆಗಳಿಗೆ ಸಂಬಂಧಿಸಿದ ದಾಖಲೆಗಳು ತನಿಖಾಧಿಕಾರಿಗಳ ಗಮನಕ್ಕೆ ಬಂದಿವೆ ಎಂದು ವರದಿಯಾಗಿದೆ. ಇವುಗಳ ಕುರಿತು ಅಂತಿಮ ನಿರ್ಣಯ ತನಿಖೆ ಮತ್ತು ಕಾನೂನು ಪ್ರಕ್ರಿಯೆಯ ನಂತರವೇ ಸಾಧ್ಯ. ಇಡಿ ಕಾರ್ಯಾಚರಣೆಯಲ್ಲಿ ಪತ್ತೆಯಾದ 3.3 ಕೋಟಿ ಭಾರತೀಯ ಕರೆನ್ಸಿ ಮತ್ತು 15 ಲಕ್ಷದಷ್ಟು ವಿದೇಶಿ ಕರೆನ್ಸಿ ತನಿಖೆಯ ಪ್ರಮುಖ ಅಂಶವಾಗಿದೆ. ಹಣದ ಮೂಲ, ಅದರ ಮಾಲೀಕತ್ವ ಹಾಗೂ ವ್ಯವಹಾರಗಳಿಗೆ ಸಂಬಂಧಿಸಿದ ದಾಖಲೆಗಳೊಂದಿಗೆ ಅದರ ಹೊಂದಾಣಿಕೆ ಕುರಿತು ಅಧಿಕಾರಿಗಳು ಪರಿಶೀಲನೆ ನಡೆಸುತ್ತಿದ್ದಾರೆ.

# ಇಂಜಿನಿಯರಿಂಗ್ ಶಿಕ್ಷಣ ಮರು ರೂಪಿಸುವ ಅಗತ್ಯ: ಡಾ. ಶಾಲಿನಿ ರಜನೀಶ್



**ಬೆಂಗಳೂರು, ಸೆ.16:** ಕೈಗಾರಿಕೆಗಳ ಬೇಡಿಕೆ ಮತ್ತು ಉದ್ಯೋಗಕ್ಕೆ ಅನುಗುಣವಾಗಿ ಇಂಜಿನಿಯರಿಂಗ್ ಶಿಕ್ಷಣವನ್ನು ಮರು ರೂಪಿಸುವ ಅಗತ್ಯವಿದೆ ಎಂದು ಸರ್ಕಾರದ ಮುಖ್ಯ ಕಾರ್ಯದರ್ಶಿ ಡಾ. ಶಾಲಿನಿ ರಜನೀಶ್ ರವರು ಅಭಿಪ್ರಾಯ ವ್ಯಕ್ತಪಡಿಸಿದರು.

ಇಂಜಿನಿಯರಿಂಗ್ ಶಿಕ್ಷಣದಲ್ಲಿ ಶೇ.30ರಷ್ಟು ಸೀಟುಗಳು ಉಳಿತಾಯವಾಗುತ್ತಿವೆ. ಕೋರ್ಸ್‌ನಲ್ಲಿ ಸೀಟು ದೊರೆತರೂ ಉದ್ಯೋಗ ದೊರೆಯುವುದು ಕಷ್ಟಸಾಧ್ಯವಾಗುತ್ತಿದೆ. ಈ ಹಿನ್ನೆಲೆಯಲ್ಲಿ ಬೇಡಿಕೆ ಇರುವ ಕೌಶಲ್ಯಗಳಿಗೆ ಅನುಗುಣವಾಗಿ ಪಠ್ಯಕ್ರಮ ರೂಪಿಸಿದರೆ ಅನುಕೂಲವಾಗಲಿದೆ. ಬೆಂಗಳೂರು ಇಂದು ಆರ್ಥಿಕವಾಗಿ ನಂ.1 ಸ್ಥಾನದಲ್ಲಿರಲು ಶ್ರೇಷ್ಠ ಇಂಜಿನಿಯರ್ ಹಾಗೂ ಸಾರ್ವಜನಿಕ ಸೇವೆಯಲ್ಲಿ ತೊಡಗಿಸಿಕೊಂಡಿದ್ದ ಸರ್ ಎಂ.ವಿಶ್ವೇಶ್ವರಯ್ಯ ಹಾಕಿರುವ ಗಟ್ಟಿಯಾದ ತಳಹದಿ ಕಾರಣವಾಗಿದೆ. ಕೈಗಾರಿಕೆ, ಉಕ್ಕು, ಕೆಆರ್‌ಎಸ್ ನಿರ್ಮಾಣದ ಮೂಲಕ ಕೃಷಿ, ನೀರಿನ ಬಳಕೆ ಸೇರಿ ಹತ್ತಾರು ಯೋಜನೆಗಳು ನಾಡಿನ ನಿರ್ಮಾಣದಲ್ಲಿ ಸಹಕಾರಿ ಯಾಗಿವೆ. ರಾಜ್ಯದ ಜಿಡಿಪಿ ಶೇ.27ರಷ್ಟು ಪ್ರಗತಿ ಸಾಧಿಸಿದ್ದು, ಇದರಲ್ಲಿ ಎಫ್ ಕೆ ಸಿ ಸಿ ಐ ಕೊಡುಗೆ ಕೂಡ ಇದೆ ಎಂದು ಪ್ರಶಂಸಿಸಿದರು.

**ಪತಿಗೆ ಪ್ರಶಸ್ತಿ ಅರ್ಪಿಸಿದ ಗೀತಾಂಜಲಿ ವಿಕ್ರಂ ಕಿರ್ಲೋಸ್ಕರ್**

ಎಫ್‌ಕೆಸಿಸಿಐ ನೀಡುವ 2026ನೇ ಸಾಲಿನ 'ಭಾರತರತ್ನ' ಸರ್ ಎಂ. ವಿಶ್ವೇಶ್ವರಯ್ಯ ಸ್ಮಾರಕ ಪ್ರಶಸ್ತಿ ಸ್ವೀಕರಿಸಿದ ಕಿರ್ಲೋಸ್ಕರ್ ಸಿಸ್ಟಂ ಅಧ್ಯಕ್ಷೆ ಮತ್ತು ವ್ಯವಸ್ಥಾಪಕ ನಿರ್ದೇಶಕಿ ಗೀತಾಂಜಲಿ ವಿಕ್ರಂ ಕಿರ್ಲೋಸ್ಕರ್, ಪ್ರಶಸ್ತಿಯನ್ನು 2022ರಲ್ಲಿ ನಿಧನರಾದ ತನ್ನ ಪತಿ ವಿಕ್ರಂ ಕಿರ್ಲೋಸ್ಕರ್ ಅವರಿಗೆ ಅರ್ಪಿಸುವುದಾಗಿ ತಿಳಿಸಿದರು.

ಈ ವೇಳೆ ಮಾತನಾಡಿದ ಅವರು, ವ್ಯವಹಾರಗಳನ್ನು ಶಕ್ತಿಯುತಗೊಳಿಸಲು ಕೇವಲ ಸಂಪರ್ಕ ಮತ್ತು ಬಂಡವಾಳವಷ್ಟೇ ಸಾಲದು. ವ್ಯವಹಾರದಲ್ಲಿ ನಂಬಿಕೆ, ಶೇರ್ ವ್ಯಾಲ್ಯೂ, ತಾಳ್ಮೆ ಮತ್ತು ಸಮಾಜದ ಸುಧಾರಣೆಗೆ ಇರುವ ಬದ್ಧತೆ ಬಹಳ ಮುಖ್ಯವಾಗಲಿದೆ ಎಂದು ಹೇಳಿದರು.

# ಇಂದಿನಿಂದ ಸೇವಾ ಸಂಕಲ್ಪ ಅಭಿಯಾನ: ಬಿ.ವೈ. ವಿಜಯೇಂದ್ರ



**ಬೆಂಗಳೂರು, ಸೆ.16:** ಸೆ.17ರಿಂದ ಅ.17ರವರೆಗೆ ಬಿಜೆಪಿ ವತಿಯಿಂದ ಸೇವಾ ಸಂಕಲ್ಪ ಅಭಿಯಾನ ಹಮ್ಮಿಕೊಳ್ಳಲಾಗಿದೆ ಎಂದು ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ತಿಳಿಸಿದ್ದಾರೆ.

ಸುದ್ದಿಗಾರರ ಜೊತೆ ಮಾತನಾಡಿದ ಅವರು, ದೇಶದ ಹೆಮ್ಮೆಯ ಪ್ರಧಾನಮಂತ್ರಿ ನರೇಂದ್ರ ಮೋದಿಜಿ ಅವರು 25 ವರ್ಷಗಳ ಕಾಲ ಸಾರ್ವಜನಿಕ ಬದುಕಿನಲ್ಲಿ ಯಾವುದೋ ಒಂದು ಕಪ್ಪು ಚುಕ್ಕೆ ಇಲ್ಲದೇ ದೇಶವನ್ನು ಮುನ್ನಡೆಸುವಂತಹ ಕೆಲಸ ಮಾಡುತ್ತಿದ್ದಾರೆ. ರಾಷ್ಟ್ರೀಯ ಅಧ್ಯಕ್ಷ ನಿತಿನ್ ನವೀನ್ ಅವರ ಅಪೇಕ್ಷೆಯಂತೆ ಅಭಿಯಾನ ನಡೆಯಲಿದೆ. ನಾಳೆ (ಸೆ.17) ಸಂಜೆ 7 ಗಂಟೆಗೆ ರಾಜ್ಯ ಮತ್ತು ಇಡೀ ದೇಶದ ಐತಿಹಾಸಿಕ ಸ್ಥಳಗಳು, ಮನೆಮನೆಗಳಲ್ಲಿ ದೀಪ ಪ್ರಜ್ವಲನೆ ಮಾಡಲಿದ್ದೇವೆ. ಮೋದಿಜೀ ಅವರ ಅವಧಿಯಲ್ಲಿ ಆಗಿರುವ ಅಭಿವೃದ್ಧಿ ಕಾರ್ಯಗಳ ಪ್ರದೇಶದಲ್ಲೂ (ಉದಾ– ಶಿವಮೊಗ್ಗ ವಿಮಾನನಿಲ್ದಾಣ) ದೀಪ ಪ್ರಜ್ವಲನೆ ಮಾಡಲಾಗುವುದು ಎಂದು ವಿವರಿಸಿದರು. ಸಂಸದ ಬಿ.ವೈ.ರಾಘವೇಂದ್ರ, ಸ್ಥಳೀಯ ಶಾಸಕರು ಪಾಲ್ಗೊಳ್ಳಲಿದ್ದಾರೆ ಎಂದರು.

ದೀಪ ಪ್ರಜ್ವಲನೆ ಮೂಲಕ ಮೋದಿಜೀ ಅವರಿಗೆ ಭಗವಂತನು ಇನ್ನೂ ಹೆಚ್ಚು ಆಯುಸ್ಸು, ಆರೋಗ್ಯವನ್ನು ಕೊಡಲೆಂದು ಪ್ರಾರ್ಥಿಸುತ್ತೇವೆ. ವಿಕಸಿತ ಭಾರತ ಸಂಕಲ್ಪ ಈಡೇರಬೇಕಿದೆ. ದೇಶವು ಜಾಗತಿಕ ಸವಾಲುಗಳ ನಡುವೆ ಅಗ್ರಗಣ್ಯ ರಾಷ್ಟ್ರಗಳ ಸಾಲಿನಲ್ಲಿ ಇರಬೇಕೆಂಬ ನಿಟ್ಟಿನಲ್ಲಿ ಸೇವಾ ಚಟುವಟಿಕೆಗಳು ನಡೆಯಲಿವೆ ಎಂದರು. ಬಿಜೆಪಿ ಕಲೆ ಮತ್ತು ಸಾಂಸ್ಕೃತಿಕ ಪ್ರಕೋಷ್ಠದ ವತಿಯಿಂದ ಪ್ರಧಾನಮಂತ್ರಿ ನರೇಂದ್ರ ಮೋದಿ ಜೀ ಅವರ 25 ವರ್ಷಗಳ ಸೇವೆಯ ಅಂಗವಾಗಿ ವಿವಿಧ ರಾಜ್ಯಗಳ ಕಲಾವಿದರು ಚಿತ್ರಕಲಾಕೃತಿಗಳನ್ನು ಬಿಡಿಸಿದ್ದಾರೆ ಎಂದು ಮೆಚ್ಚುಗೆ ಸೂಚಿಸಿದರು. ಮೋದಿಜೀ ಅವರ ಸಾಧನೆಯನ್ನು ದೇಶದ ಜನತೆಗೆ ನೆನಪಿಸುವ ಕೆಲಸ ಮಾಡುತ್ತಿದ್ದಾರೆ ಎಂದು ವಿವರಿಸಿದರು.

ಬಿ.ಕೆ.ಹರಿಪ್ರಸಾದ್ ಅವರ ಹೇಳಿಕೆ ಗಮನಿಸಿದ್ದೇನೆ. ಅಧಿಕಾರ ನೆತ್ತಿಗೇರಿದರೆ ಹೇಗೆ ನಡೆದುಕೊಳ್ಳ ಬಹುದು ಎಂಬುದಕ್ಕೆ ಇದು ಉದಾಹರಣೆ. ಹಿಂದೆ ವಿಧಾನಸೌಧದಲ್ಲಿ ಪಾಕಿಸ್ತಾನ ಜಿಂದಾಬಾದ್ ಎಂದವರಿಗೆ ಇದೇ ಕಾಂಗ್ರೆಸ್ಸಿನವರು ರಕ್ಷಣೆ ನೀಡಿದ್ದರು. ಬಿ.ಕೆ.ಹರಿಪ್ರಸಾದ್ ಅವರ ಹೇಳಿಕೆ ದೇಶದ್ರೋಹದ ಕೆಲಸ ಎಂದು ಟೀಕಿಸಿದರು. ಇಂಥ ಹೇಳಿಕೆ ನಮ್ಮ ರಾಜ್ಯದಲ್ಲಿ ಅಭದ್ರತೆಯನ್ನು ಸೃಷ್ಟಿಸುತ್ತಿದೆ. ಆಡಳಿತ ಪಕ್ಷದವರು ಕಾನೂನು– ಸುವ್ಯವಸ್ಥೆ ಹಾಳು ಮಾಡುವ ಕೆಲಸ ಮಾಡುತ್ತಿದ್ದಾರೆ ಎಂದು ವಿಜಯೇಂದ್ರ ಆಕ್ಷೇಪಿಸಿದರು. ಕಾಂಗ್ರೆಸ್ ಪಕ್ಷದ ಪಾಪದ ಕೊಡ ತುಂಬಿದೆ. ಅವರಿಗೆ ತಿಂದದ್ದು ಅರಗುತ್ತಿಲ್ಲ; ಅಧಿಕಾರದ ಅಮಲಿನಿಂದ ಈ ರೀತಿ ಮಾಡುತ್ತಿದ್ದಾರೆ. ಇವರ ಸೊಕ್ಕನ್ನು ಅಡಗಿಸುವ ಶಕ್ತಿ ಬಿಜೆಪಿ ಕಾರ್ಯಕರ್ತರಿಗೆ ಇದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

### ಕೆಎಸ್‌ಆರ್‌ಟಿಸಿ ಪ್ರಕಟಣೆ

# ಟಿಕೆಟ್ ಇಲ್ಲದೆ ಪ್ರಯಾಣ: 4862 ಜನರಿಗೆ ದಂಡ

**ಬೆಂಗಳೂರು, ಸೆ.16–** ಆಗಸ್ಟ್–2026 ರ ಮಾಹೆಯಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮವು ತನ್ನ ತನಿಖಾ ತಂಡಗಳಿಂದ ತಪಾಸಣಾ ಕಾರ್ಯವನ್ನು ಚುರುಕುಗೊಳಿಸಿ ನಿಗಮದ ವ್ಯಾಪ್ತಿಯಲ್ಲಿ ಸಂಚರಿಸುವ 44848 ವಾಹನಗಳನ್ನು ತನಿಖೆಗೊಳಪಡಿಸಿ 4461 ಪ್ರಕರಣ ಗಳನ್ನು ಪತ್ತೆಹಚ್ಚಿ, 4862 ಟಿಕೆಟ್‌ರಹಿತ ಪ್ರಯಾಣಿಕರಿಂದ 8,90,279 ರೂ. ಗಳನ್ನು ದಂಡದ ರೂಪದಲ್ಲಿ ವಸೂಲಿ ಮಾಡಿದ್ದಾರೆ.

ನಿಗಮದ ಆದಾಯದಲ್ಲಿ ಸೋರಿಕೆ ಆಗುತ್ತಿದ್ದ 1,33,441 ರೂ.ಗಳನ್ನು ತನಿಖಾಧಿಕಾರಿಗಳು ಪತ್ತೆಹಚ್ಚಿದ್ದಾರೆ, ಹಾಗೂ ತಪ್ಪಿತಸ್ಥರ ವಿರುದ್ಧ ಇಲಾಖಾ ರೀತ್ಯಾ ಶಿಸ್ತಿನ ಕ್ರಮವನ್ನು ಜರುಗಿಸಲಾಗಿದೆ.

ಆದ್ದರಿಂದ ಸಾರ್ವಜನಿಕ ಪ್ರಯಾಣಿಕರು, ಬಸ್ಸಿನಲ್ಲಿ ಪ್ರಯಾ ಣಿಸುವಾಗ ಸರಿಯಾದ ಟಿಕೆಟ್/ಪಾಸ್ ಪಡೆದು ಪ್ರಯಾಣ ಮಾಡುವಂತೆ, ನಿಗಮವು ಈ ಮೂಲಕ ಪ್ರಯಾಣಿಕರಲ್ಲಿ ಕೋರುತ್ತದೆ.

### ನ್ಯಾಕ್ ನ 32ನೇ ಸಂಸ್ಥಾಪನಾ ದಿನಾಚರಣೆ

## ಉನ್ನತ ಶಿಕ್ಷಣ ಸುಧಾರಣೆಗೆ ಹೊಸ ಮಾನ್ಯತಾ ವ್ಯವಸ್ಥೆ

# ಗುಣಮಟ್ಟಕ್ಕೆ ಮಾನ್ಯತಾ ಮಾರ್ಗ ಸಹಕಾರಿ: ಗೋಬರ್ಧನ್ ದಾಸ್



**ಬೆಂಗಳೂರು, ಸೆ.16–** ಉನ್ನತ ಶಿಕ್ಷಣ ಸಂಸ್ಥೆಗಳ ಗುಣಮಟ್ಟವನ್ನು ವಿದ್ಯಾರ್ಥಿಗಳು, ಉದ್ಯಮ ವಲಯ ಹಾಗೂ ಸಮಾಜಕ್ಕೆ ದೊರೆಯುವ ಫಲಿತಾಂಶಗಳ ಆಧಾರದಲ್ಲಿ ಅಳೆಯಬೇಕು. ಉನ್ನತ ಶಿಕ್ಷಣದ ಗುಣಮಟ್ಟದಲ್ಲಿ ಗಮನಾರ್ಹ ಸುಧಾರಣೆ ಸಾಧಿಸುವುದು 'ವಿಕಸಿತ ಭಾರತ' ನಿರ್ಮಾಣಕ್ಕೆ ಅತ್ಯಗತ್ಯ ಎಂದು ನೀತಿ ಆಯೋಗದ ಸದಸ್ಯ ಪ್ರೊ. ಗೋಬರ್ಧನ್ ದಾಸ್ ಅಭಿಪ್ರಾಯ ಪಟ್ಟಿದ್ದಾರೆ. ಬೆಂಗಳೂರಿನ ರಾಷ್ಟ್ರೀಯ ಮೌಲ್ಯಮಾಪನ ಮತ್ತು ಮಾನ್ಯತಾ ಮಂಡಳಿ (ನ್ಯಾಕ್) ಆವರಣದಲ್ಲಿ ಬುಧವಾರ ನಡೆದ 32ನೇ ಸಂಸ್ಥಾಪನಾ ದಿನಾಚರಣೆಯಲ್ಲಿ ಅವರು ಮಾತನಾಡಿದರು. ಪದವೀಧರರ ಉದ್ಯೋಗಾರ್ಹತೆ ಹೆಚ್ಚಿಸುವುದು, ಗುಣಮಟ್ಟದ ಸಂಶೋಧನಾ ಪ್ರಕಟಣೆ, ಸಂಶೋಧನೆಯಿಂದ ನಾವೀನ್ಯತೆ ಮತ್ತು ಸ್ಟಾರ್ಟ್‌ಅಪ್‌ಗಳಿಗೆ ಉತ್ತೇಜನ ಹಾಗೂ ಭಾರತೀಯ ಶಿಕ್ಷಣವನ್ನು ಅಂತಾರಾಷ್ಟ್ರೀಯ ಮಟ್ಟಕ್ಕೆ ಕೊಂಡೊಯ್ಯುವುದು ಸೇರಿದಂತೆ ಹಲವು ಕ್ಷೇತ್ರಗಳಲ್ಲಿ ಸುಧಾರಣೆ ಅಗತ್ಯವಿದೆ ಎಂದು ಗೋಬರ್ಧನ್ ದಾಸ್ ಪ್ರತಿಪಾದಿಸಿದರು.

## ಮಾನ್ಯತೆ ವ್ಯವಸ್ಥೆಗೆ ಹೊಸರೂಪ

ರಾಷ್ಟ್ರೀಯ ಶಿಕ್ಷಣ ನೀತಿ–2020ರ ಆಶಯಗಳಿಗೆ ಅನುಗುಣವಾಗಿ ಉನ್ನತ ಶಿಕ್ಷಣದಲ್ಲಿ ಹೊಸ ಆಡಳಿತ ಮಾದರಿ ರೂಪುಗೊಳ್ಳುತ್ತಿದೆ. ಉತ್ತಮ ಹಾಗೂ ಸ್ವಾಯತ್ತ ಶಿಕ್ಷಣ ಸಂಸ್ಥೆಗಳು, ಸಾರ್ವಜನಿಕ ಹಿತಾಸಕ್ತಿ, ಸಮಗ್ರತೆ, ಉತ್ತಮ ಆಡಳಿತ ಮತ್ತು ಪಾರದರ್ಶಕ ಸಾರ್ವಜನಿಕ ಬಹಿರಂಗಪಡಿಸುವಿಕೆ ಈ ವ್ಯವಸ್ಥೆಯ ಪ್ರಮುಖ ಅಂಶಗಳಾಗಿವೆ ಎಂದು ಅವರು ಹೇಳಿದರು.

ಗುಣಮಟ್ಟ ಖಾತರಿಪಡಿಸುವಲ್ಲಿ ಮಾನ್ಯತೆ ಪ್ರಮುಖ ಪಾತ್ರ ವಹಿಸುತ್ತಿದ್ದು, ಶೀಘ್ರದಲ್ಲೇ ಜಾರಿಯಾಗಲಿರುವ ಸುಧಾರಣೆಗಳು ದೇಶದ ಉನ್ನತ ಶಿಕ್ಷಣ ವ್ಯವಸ್ಥೆಗೆ ಹೊಸ ದಿಕ್ಕು ನೀಡಲಿವೆ. ಮಾನ್ಯತಾ ವ್ಯವಸ್ಥೆಯನ್ನು ಬಲಪಡಿಸಲು 'ವಿಬಿಎಸ್‌ಎ' ಎಂಬ ಹೊಸ ವಿಭಾಗವನ್ನು ಪ್ರಸ್ತಾಪಿಸಲಾಗಿದೆ. ರಾಷ್ಟ್ರೀಯ ಮಟ್ಟದ ಆಡಳಿತ ವ್ಯವಸ್ಥೆಯೊಂದಿಗೆ ಸುಧಾರಣೆಗಳನ್ನು ಜಾರಿಗೊಳಿಸುವ ಮೂಲಕ ಮಾನ್ಯತೆಯನ್ನು ಉನ್ನತ ಶಿಕ್ಷಣದ ಕೇಂದ್ರಬಿಂದುವಾಗಿಸಬಹುದು ಗೋಬರ್ಧನ ದಾಸ್ ಹೇಳಿದರು

**ಗ್ರಾಮೀಣ ಸಂಸ್ಥೆಗಳಿಗೂ ಗುಣಮಟ್ಟದ ಮಾನ್ಯತೆ:,** ಮೂರು ದಶಕಗಳ ಅನುಭವ ಹೊಂದಿರುವ ನ್ಯಾಕ್, ರಾಷ್ಟ್ರೀಯ ಆದ್ಯತೆಗಳಿಗೆ ಹೊಂದಿಕೆಯಾಗುವ ಹಲವು ಮಾನ್ಯತಾ ಚೌಕಟ್ಟುಗಳನ್ನು ರೂಪಿಸಿದೆ. ಗ್ರಾಮೀಣ ಹಾಗೂ ದೂರದ ಪ್ರದೇಶ ಗಳಲ್ಲಿರುವ ಶಿಕ್ಷಣ ಸಂಸ್ಥೆಗಳನ್ನೂ ಗುಣಮಟ್ಟದ ಮುಖ್ಯವಾಹಿನಿಗೆ ತರುವ ಅಗತ್ಯವಿದೆ ಎಂದು ದಾಸ್ ನುಡಿದರು.

ಎರಡು ಹಂತದ ಮಾನ್ಯತಾ ವ್ಯವಸ್ಥೆಯ ಮೂಲಕ ಜಾಗತಿಕ ಉನ್ನತ ಶಿಕ್ಷಣ ಕ್ಷೇತ್ರಕ್ಕೆ ಮಾದರಿಯಾಗುವ ಉತ್ತಮ ಪದ್ಧತಿ ರೂಪಿಸಬಹುದು. ಮುಂದಿನ ಹಂತದಲ್ಲಿ ಸಂಸ್ಥೆ ಮತ್ತು ಕಾರ್ಯಕ್ರಮ ಆಧಾರಿತ ಮಾನ್ಯತೆಗಳನ್ನು ಒಗ್ಗೂಡಿಸಬೇಕು. ಕಾರ್ಯಕ್ರಮ ಮಾನ್ಯತೆ, ಸಂಸ್ಥೆಯ ಮಾನ್ಯತೆ ಮತ್ತು ಶ್ರೇಯಾಂಕ ವ್ಯವಸ್ಥೆಗಳ ನಡುವೆ ಸಮನ್ವಯ ಸಾಧಿಸಬೇಕಾಗಿದೆ. ಇದಕ್ಕಾಗಿ 'ಒಂದು ರಾಷ್ಟ್ರ, ಒಂದು ಡೇಟಾ ವೇದಿಕೆ' ಹಾಗೂ ಎಲ್ಲ ಕ್ಷೇತ್ರಗಳಲ್ಲೂ ?ಫಲಿತಾಂಶ ಆಧಾರಿತ? ವಿಧಾನಕ್ಕೆ ಒತ್ತು ನೀಡಬೇಕು ಎಂದರು.

**ಶೇ.45 ವಿವಿ, ಶೇ.25 ಕಾಲೇಜುಗಳಿಗಷ್ಟೇ ಮಾನ್ಯತೆ:** ನ್ಯಾಕ್ ಕಾರ್ಯಕಾರಿ ಸಮಿತಿ ಅಧ್ಯಕ್ಷ ಪ್ರೊ. ನಾಗೇಶ್ವರ ರಾವ್ ಮಾತನಾಡಿ, ದೇಶದ ವಿಶ್ವವಿದ್ಯಾಲಯಗಳ ಪೈಕಿ ಶೇ.45ರಷ್ಟು ಹಾಗೂ ಕಾಲೇಜುಗಳ ಪೈಕಿ ಶೇ.25ರಷ್ಟು ಮಾತ್ರ ಮಾನ್ಯತೆ ಪಡೆದಿವೆ. ಗುಣಮಟ್ಟದ ಶಿಕ್ಷಣದ ಫಲಿತಾಂಶಗಳನ್ನು ಖಚಿತಪಡಿಸಲು ಮತ್ತು ಭಾರತೀಯ ಶಿಕ್ಷಣ ಸಂಸ್ಥೆಗಳನ್ನು ಜಾಗತಿಕ ಮಟ್ಟಕ್ಕೆ ಕೊಂಡೊಯ್ಯಲು ಮಾನ್ಯತೆ ಅತ್ಯಗತ್ಯ.

ಭಾರತದ ಶಿಕ್ಷಣ ವ್ಯವಸ್ಥೆ ವೈವಿಧ್ಯಮಯವಾಗಿದ್ದು, ಸಂಸ್ಥೆಗಳ ಸ್ವರೂಪ, ಕಾರ್ಯಕ್ರಮಗಳು ಹಾಗೂ ಅವುಗಳ ಹಿನ್ನೆಲೆಯಲ್ಲೂ ಸಾಕಷ್ಟು ವ್ಯತ್ಯಾಸವಿದೆ.

ಗ್ರಾಮೀಣ–ನಗರ, ಹಳೆಯ–ಹೊಸ ಸಂಸ್ಥೆಗಳ ನಡುವಿನ ಭಿನ್ನತೆಯನ್ನು ಗಮನದಲ್ಲಿಟ್ಟುಕೊಂಡು ಮಾನ್ಯತಾ ವ್ಯವಸ್ಥೆ ಪ್ರಗತಿಪರವಾಗಿಯೂ, ಎಲ್ಲ ಸಂಸ್ಥೆಗಳಿಗೆ ಹೊಂದಿಕೊಳ್ಳುವಂತೆಯೂ ಇರಬೇಕು ಎಂದು ಹೇಳಿದರು.



17.09.2026
ದೇಶ ಕಂಡ ಸರ್ವೋಚ್ಚ
ನಾಯಕ, ರಾಷ್ಟ್ರದ
ಹೆಮ್ಮೆಯ ಪ್ರಧಾನಿಗಳಾದ
ಶ್ರೀ ನರೇಂದ್ರ
ಮೋದಿ
ಅವರಿಗೆ
ಜನ್ಮದಿನದ ಹಾರ್ದಿಕ
ಶುಭಾಶಯಗಳು
ಶುಭಕೋರುವವರು
ಡಾ. ಸಿ.ಎನ್.ಮಂಜುನಾಥ್
ಸಂಸದರು
ಬೆಂಗಳೂರು ಗ್ರಾಮಾಂತರ
ಲೋಕಸಭಾ ಕ್ಷೇತ್ರ, ಕರ್ನಾಟಕ



ಬೆಂಗಳೂರಿನ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಪ್ಲಾಂಟೇಷನ್ ಮ್ಯಾನೇಜ್‌ಮೆಂಟ್‌ನ 21ನೇ ಘಟಿಕೋತ್ಸವ ಸಮಾರಂಭದಲ್ಲಿ, ಸಂಸ್ಥೆಯ ಅಧ್ಯಕ್ಷೆ ಪಿ. ಹೇಮಲತಾ ಅವರು ಪದವೀಧರ ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಿದರು.

# ಎಐ ತಂತ್ರಜ್ಞಾನ ಎಷ್ಟೇ ಬೆಳೆದರೂ, ಶಿಕ್ಷಕರನ್ನು ಮೀರಿಸಲು ಸಾಧ್ಯವಿಲ್ಲ: ಖರ್ಗೆ

**ಕಲಬುರಗಿ, ಸೆ. 16:** ಇಂದಿನ ಆಧುನಿಕ ಕಾಲದಲ್ಲಿ ಎ.ಐ ತಂತ್ರ ಜ್ಞಾನ (ಕೃತಕ ಬುದ್ಧಿಮತೆ) ಎಷ್ಟೆ ಬೆಳೆದರು, ಶಿಕ್ಷಕರನ್ನು ಬದಲಿಯಾಗಿ ಬೋಧನೆ ಮಾಡಲು ಸಾಧ್ಯವಿಲ್ಲ. ಪ್ರಶ್ನೆ ಕೇಳಿದರೆ ತಂತ್ರಜ್ಞಾನ ಉತ್ತಯಿರಿಸಬಹುದು ಹೊರತು, ಮಕ್ಕಳಲ್ಲಿ ಪ್ರಶ್ನೆ ಕೇಳುವ ಸಾಮರ್ಥ್ಯ ಬೆಳೆಸಲು ಎ.ಐ.ನಿಂದ ಸಾಧ್ಯವಿಲ್ಲ ಎಂದು ರಾಜ್ಯದ ಗೃಹ, ಐ.ಟಿ–ಬಿ.ಟಿ, ಇ–ಆಡಳಿತ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.




2026–27ನೇ ಸಾಲಿನ ಜಿಲ್ಲಾ ಮಟ್ಟದ ಶಿಕ್ಷಕರ ದಿನಾಚರಣೆ ಕಾರ್ಯಕ್ರಮವನ್ನು ಸರ್ವಪಲ್ಲಿ ರಾಧಾಕೃಷ್ಣನ್ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಉದ್ಘಾಟಿಸಿದಲ್ಲದೆ ಜಿಲ್ಲಾ ಮಟ್ಟದ ಅತ್ಯುತ್ತಮ ಶಿಕ್ಷಕಯಿರಿಗೆ ಪ್ರಶಸ್ತಿ ಪ್ರದಾನ ಮಾಡಿ ಮಾತನಾಡಿದ ಅವರು, ಮಕ್ಕಳಲ್ಲಿ ಮೌಲ್ಯಯುತ ಶಿಕ್ಷಣ ಬಿತ್ತಬೇಕಾದ ಬಹುದೊಡ್ಡ ಜವಾಬ್ದಾರಿ ಶಿಕ್ಷಕರ ಮೇಲಿದೆ. ಎ.ಐ. ತಂತ್ರಜ್ಞಾನ ಬಂದರೂ ನಿಮ್ಮ ಜವಾಬ್ದಾರಿ ಕಡಿಮೆಯಾಗಲ್ಲ. ಬದಲಿಗೆ ದಿನದಿಂದದಿನಕ್ಕೆ ಹೆಚ್ಚುತ್ತಲೆ ಇರುತ್ತೆ ಎಂದರು.

ಮಕ್ಕಳಿಗೆ ಸರಿ–ತಪ್ಪು ಯಾವುದು ಎಂಬುವ ಪ್ರಜ್ಞೆ ಬರಲು ಮಕ್ಕಳಿಗೆ ಶಿಕ್ಷಕರೆ ಬೋಧಿಸಬೇಕಾಗುತ್ತದೆ. ಸ್ಮಾರ್ಟ್ ಕ್ಲಾಸ್ ನಿರ್ಮಾಣದಿಂದ ಮಕ್ಕಳು ಸ್ಮಾರ್ಟ್ ಆಗಲ್ಲ. ಮಕ್ಕಳಿಗೆ ಪುರಾಣ, ಪ್ರವಚನ ಜೊತೆಗೆ ವೈಜ್ಞಾನಿಕ ಚಿಂತನೆ, ಕುತೂಹಲ ಹೆಚ್ಚಿಸುವ ಶಿಕ್ಷಣ ನೀಡಿದಾಗ, ಪ್ರಶ್ನೆ ಮಾಡುವ ಧೈರ್ಯ ಮಕ್ಕಳು ತೋರಿದಾಗಲೆ ಮಕ್ಕಳನ್ನು ಸ್ಮಾರ್ಟ್ ಎನ್ನಲು ಸಾಧ್ಯ ಎಂದರು.

ಪ್ರಬುದ್ಧ ಸಮಾಜ ನಿರ್ಮಾಣ ಮಾಡುವಲ್ಲಿ ಶಿಕ್ಷಕರ ಪಾತ್ರ ಹೆಚ್ಚಿದೆ. ಒಳ್ಳೆಯ ನಾಗರಿಕರಿಂದಲೆ ಉತ್ತಮ ಸಮಾಜ, ದೇಶ ನಿರ್ಮಾಣ ಸಾಧ್ಯವಿದ್ದು, ಅಂತಹ ಒಂದು ಪವಿತ್ರ ಕೆಲಸದ ಜವಾಬ್ದಾರಿ ಶಿಕ್ಷಕ ಬಂಧುಗಳ ಮೇಲಿದೆ. ನಗರದಲ್ಲಿ ಗುರು ಭವನಕ್ಕೆ ಶಿಕ್ಷಕರ ಸಂಘ ಬೇಡಿಕೆ ಇಟ್ಟಿದ್ದು, ಕುಡಾ ನಿವೇಶನದಲ್ಲಿ ಕಡಿಮೆ ರಿಯಾಯಿತಿಯಲ್ಲಿ ನೀಡಲಾಗುವುದು. ಜಿಲ್ಲೆಯ ಎಸ್.ಎಸ್.ಎಲ್.ಸಿ ಫಲಿತಾಂಶ ಕುಸಿದಾಗ ನನ್ನೊಂದಿಗೆ ನಿಮಗೂ ಜನ ಬೈತಾರೆ, ಅದಕ್ಕೆ ತಲೆಕೆಡಿಸಿಕೊಳ್ಳದೆ ಉತ್ತಮ ಫಲಿತಾಂಶ ತರಲು ನಿರಂತರ ಪ್ರಯತ್ನ ನಿಮ್ಮದಾಗಿರಬೇಕು ಎಂದು ಶಿಕ್ಷಕರಿಗೆ ಸಚಿವ ಪ್ರಿಯಾಂಕ್ ಖರ್ಗೆ ಕರೆ ನೀಡಿದರು.

# ಬರಪೀಡಿತ ತಾಲೂಕು ಘೋಷಣೆಗೆ ಆಗ್ರಹಿಸಿ ರೈತರಿಂದ ರಸ್ತೆತಡೆ

**ಕಲಬುರಗಿ, ಸೆ. 16:** ಜಿಲ್ಲೆಯ ಸೇಡಂ ತಾಲೂಕನ್ನು ಕೂಡಲೇ ಬರಪೀಡಿತ ಪ್ರದೇಶವೆಂದು ಘೋಷಿಸಬೇಕು ಹಾಗೂ ವಿವಿಧ ಕೃಷಿ ಸಂಬಂಧಿತ ಬೇಡಿಕೆಗಳನ್ನು ಈಡೇರಿಸಬೇಕು ಎಂದು ಆಗ್ರಹಿಸಿ, ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಕಾರ್ಯಕರ್ತರು ನಗರದ ಚಿಂಚೋಳಿ ಕ್ರಾಸ್ ಬಳಿಯ ಕಲಬುರಗಿ ರಸ್ತೆಯಲ್ಲಿ ಹೆದ್ದಾರಿ ತಡೆದು, ರಸ್ತೆಯಲ್ಲೇ ಭಜನೆ ಮಾಡುವ ಮೂಲಕ ಸೆ.15ರ ಮಂಗಳವಾರ ವಿನೂತನ ಪ್ರತಿಭಟನೆ ನಡೆಸಿದರು.

ನಗರದ ಶ್ರೀ ಕೊತ್ತಲ ಬಸವೇಶ್ವರ ದೇವಾಲಯದಿಂದ 50ಕ್ಕೂ ಅಧಿಕ ಟ್ರ್ಯಾಕ್ಟರ್‌ಗಳು ಹಾಗೂ ಎತ್ತಿನ ಬಂಡಿಗಳೊಂದಿಗೆ ಮೆರವಣಿಗೆ ಹೊರಟ ರೈತರು, ಕಲಬುರಗಿ ರಸ್ತೆಗೆ ಆಗಮಿಸಿ ವಾಹನಗಳನ್ನು ಅಡ್ಡಲಾಗಿ ನಿಲ್ಲಿಸಿ ಸಂಚಾರ ಸಂಪೂರ್ಣ ಬಂದ್ ಮಾಡಿದರು. ಮಧ್ಯಾಹ್ನ 12 ಗಂಟೆಗೆ ಆರಂಭವಾದ ಈ ಪ್ರತಿಭಟನೆಯು ಸತತವಾಗಿ ಸಂಜೆ 7 ಗಂಟೆಯವರೆಗೂ ಮುಂದುವರಿಯಿತು.



**ರಸ್ತೆ ಬದಿಯಲ್ಲೇ ಅಡುಗೆ ಮಾಡಿ ಊಟ:** ಸೇಡಂ ತಾಲೂಕನ್ನು ಬರಪೀಡಿತವೆಂದು ಘೋಷಿಸುವಂತೆ ಪಟ್ಟುಹಿಡಿದ ರೈತರು ಹೆದ್ದಾರಿಯಲ್ಲೇ ಭಜನೆ ಆರಂಭಿಸಿದರು. ಪ್ರತಿಭಟನೆಯ ನಡುವೆಯೇ ರಸ್ತೆ ಪಕ್ಕದಲ್ಲೇ ಬೃಹತ್ ಪ್ರಮಾಣದಲ್ಲಿ ಅಡುಗೆ ತಯಾರಿಸಿ, ಸ್ಥಳದಲ್ಲೇ ಎಲ್ಲ ರೈತರು ಸಾಮೂಹಿಕ ಭೋಜನ ಮಾಡಿ ಧರಣಿಯನ್ನು ಮುಂದ ುವರಿಸಿದರು.

**ಎಸಿ, ತಹಸೀಲ್ದಾರ್ ಸಂಧಾನ ವಿಫಲ; ಡಿಸಿ ಭೇಟಿಗೆ ಪಟ್ಟು:** ರೈತರ ಮನವಿ ಸ್ವೀಕರಿಸಲು ತಹಸೀಲ್ದಾರ್ ಶ್ರೀಯಾಂಕಾ ಧನಶ್ರೀ ಅವರು ಸ್ಥಳಕ್ಕೆ ಆಗಮಿಸಿದರು. ಆದರೆ, "ಜಿಲ್ಲಾಧಿಕಾರಿಗಳೇ ನೇರವಾಗಿ ಸ್ಥಳಕ್ಕೆ ಬಂದು ನಮ್ಮ ಅಹವಾಲು ಆಲಿಸುವವರೆಗೂ ಹೋರಾಟದಿಂದ ಹಿಂದೆ ಸರಿಯುವುದಿಲ್ಲ" ಎಂದು ರೈತರು ಪಟ್ಟು ಹಿಡಿದರು. ಬಳಿಕ ಸ್ಥಳಕ್ಕೆ ಬಂದ ಸಹಾಯಕ ಆಯುಕ್ತ (ಎಸಿ) ಪ್ರಭುರೆಡ್ಡಿ ಅವರು ಮನವೊಲಿಸಲು ಯತ್ನಿಸಿದರೂ ರೈತರು ಒಪ್ಪಲಿಲ್ಲ. ಸಿಪಿಐ ಮಹಾದೇವ ದಿಡ್ಡಿಮನಿ ಹಾಗೂ ಪಿಎಸ್‌ಐ ಉಪೇಂದ್ರ ಕುಮಾರ್ ನಡೆಸಿದ ಸಂಧಾನ ಯತ್ನವೂ ಫಲ ನೀಡಲಿಲ್ಲ.

**ಸತತ ಏಳು ಗಂಟೆ ಹೆದ್ದಾರಿ ಬಂದ್:** ಪ್ರಯಾಣಿಕರ ಪರದಾಟ: ಸತತ ಏಳು ಗಂಟೆಗಳ ಕಾಲ ಹೆದ್ದಾರಿ ತಡೆ ನಡೆಸಿದ ಹಿನ್ನೆಲೆಯಲ್ಲಿ ಕಲಬುರಗಿ ಮಾರ್ಗದಲ್ಲಿ ವಾಹನ ಸಂಚಾರ ಸಂಪೂರ್ಣ ಅಸ್ತವ್ಯಸ್ತಗೊಂಡಿತು. ಇದರಿಂದಾಗಿ ಪ್ರಯಾಣಿಕರು, ವೃದ್ಧರು, ಮಹಿಳೆಯರು ಹಾಗೂ ಮಕ್ಕಳು ತಲುಪಬೇಕಾದ ಸ್ಥಳಗಳಿಗೆ ತೆರಳಲಾಗದೆ ತೀವ್ರ ಸಂಕಷ್ಟ ಎದುರಿಸುವಂತಾಯಿತು.

### ಎಸ್‌ಐ ಧನಂಜಯ ಹೇಳಿಕೆ ಸಮರ್ಥಿಸಿದ ಸಚಿವ ಯತೀಂದ್ರ

# ಬುದ್ಧಿವಾದ ಹೇಳಿದ್ದಾರಷ್ಟೇ, ತಪ್ಪು ಮಾಡಿಲ್ಲ

**ಮೈಸೂರು, ಸೆ.16:** ಎಸ್‌ಐ ಧನಂಜಯ ಯಾವುದೇ ತಪ್ಪು ಮಾಡಿಲ್ಲ, ಬುದ್ಧಿವಾದ ಹೇಳಿದ್ದಾರೆ ಅಷ್ಟೇ. ಆದರೆ, ಬುದ್ಧಿವಾದ ಹೇಳುವ ಧಾಟಿ ಸ್ವಲ್ಪ ಬದಲಾಗಿದೆ. ಅದನ್ನು ಬಿಟ್ಟರೆ ಪಿಐ ಧನಂಜಯ ಯಾವುದೇ ತಪ್ಪು ಮಾಡಿಲ್ಲ. ತಪ್ಪು ಮಾಡದಿರುವ ಪಿಐ ವಿರುದ್ಧ ಯಾಕೆ ಕ್ರಮಕೈಗೊಳ್ಳಬೇಕು ಎಂದು ಸಚಿವ ಯತೀಂದ್ರ ಸಿದ್ದರಾಮಯ್ಯ ಎಸ್‌ಐ ನಡೆಯನ್ನು ಸಮರ್ಥಿಸಿಕೊಂಡಿದ್ದಾರೆ.

ಟಿ.ನರಸೀಪುರ ಇನ್ಸ್‌ಪೆಕ್ಟರ್ ಧನಂಜಯ್ ಧಮ್ಕಿ ಪ್ರಕರಣ ಸಂಬಂಧ ಮೈಸೂರಿನಲ್ಲಿಂದು ಸುದ್ದಿಗಾರರೊಂದಿಗೆ ಮಾತನಾಡಿದ ಯತೀಂದ್ರ, ಅವರಿಗೆ ಬೇಕಾದಂತಹ ರಸ್ತೆಯಲ್ಲಿ ಹೋಗಲು ಬಿಡಲು ಆಗುತ್ತಾ, ಸ್ಥಳೀಯ ಆಡಳಿತದ ಅನುಮತಿ ಪಡೆದು ಮೆರವಣಿಗೆ ಮಾಡಬಹುದು. ಅನುಮತಿ ಪಡೆಯದೆ ಏನಾದ್ರೂ ಸಮಸ್ಯೆಯಾದರೆ ಯಾರು ಹೊಣೆ. ಏನಾದರೂ ಹೆಚ್ಚುಕಡಿಮೆ ಯಾದರೆ ಅದನ್ನೇ ಪಿಐ ಧನಂಜಯ ಹೇಳಿದ್ದಾರೆ. ಅದರಲ್ಲಿ ತಪ್ಪಿಲ್ಲ ಟಿ.ನರಸೀಪುರ ಪಿಐ ಧನಂಜಯ ಹೇಳಿರುವುದು ಸರಿಯಾಗೇ ಇದೆ ಎಂದಿದ್ದಾರೆ.

ಬಿಜೆಪಿಯವರು ರಣಹದ್ದುಗಳು. ಕೋಮುಗಲಭೆ ಆಗುವುದನ್ನೇ ಬಿಜೆಪಿಯವರು ಕಾಯುತ್ತಿರುತ್ತಾರೆ. ಕೋಮುಗಲಭೆ ಆಗಬೇಕು, ಯಾರಾದ್ರೂ ಸಾಯಬೇಕೆಂದು ಬಯಸುತ್ತಾರೆ. ಸಾವಿನ ಲಾಭ ಪಡೆಯಬೇಕು ಎಂಬುದು ಬಿಜೆಪಿ ಯವರ ಪ್ಲ್ಯಾನ್. ಎಲ್ಲೇ ಕೋಮು ಗಲಭೆ ಆದರೂ



ಬಿಜೆಪಿಗೆ ಚುನಾವಣಾ ಲಾಭವಾಗಿದೆ. ಹೀಗಾಗಿ ಬಿಜೆಪಿಯವರು ಕೋಮು ಗಲಭೆಗೆ ಆಸಕ್ತಿ ವಹಿಸುತ್ತಾರೆ. ಮೈಸೂರು ಜಿಲ್ಲೆ ಟಿ.ನರಸೀಪುರದಲ್ಲಿ ಅದೇ ಕೆಲಸಕ್ಕೆ ಬಂದಿದ್ದಾರೆ. ಪ್ರತಿಭಟನಾ ಮೆರವಣಿಗೆ ಸೇರಿದಂತೆ ಏನಾದರೂ ಮಾಡಲಿ ಬಿಡಿ ಎಂದು ಬಿಜೆಪಿ ವಿರುದ್ಧ ವಾಗ್ದಾಳಿ ನಡೆಸಿದರು.

## ಇಡೀ ರಾಜ್ಯಕ್ಕೆ ಬೆಳಕು ನೀಡೋ ಊರಲ್ಲೇ ಕತ್ತಲು

# ಜೆಸ್ಕಾಂ ವಿದ್ಯುತ್ ಕಣ್ಣಾಮುಚ್ಚಾಲೆ ವಿರುದ್ಧ ಸಿಡಿದೆದ್ದ ರೈತರು

**ರಾಯಚೂರು, ಸೆ. 16:** ಭೀಕರ ಬರಗಾಲ, ಅಕ್ಷರಶಃ ಬರಗಾಲದಿಂದ ರೈತರು ತತ್ತರಿಸಿದ್ದಾರೆ. ಇತ್ತ ರಾಯಚೂರು ಜಿಲ್ಲೆಯ ಎಲ್ಲಾ ತಾಲ್ಲೂಕುಗಳು ಕೂಡ ಬರ ಪೀಡಿತ ಅಂತ ಘೋಷಣೆಯಾಗಿದ್ದು, ರೈತರ ಬದುಕು ಬರಗಾಲದಿಂದ ಬೀದಿಗೆ ಬಿದ್ದಿದೆ. ಆದ್ರೆ ಜಿಲ್ಲೆಯ ಅನೇಕ ರೈತರು ಬೆಳೆ ಉಳಿಸಿಕೊಳ್ಳಲು ಕೊಳವೆ ಬಾವಿಗಳು, ಪಂಪ್ ಸೆಟ್ ಗಳ ಮೂಲಕ ನೀರು ಹರಿಸಿ ಒಣಗಿ ಹೋಗುತ್ತಿರೋ ಭತ್ತ, ತರಕಾರಿಗಳು, ಇತರೆ ಬೆಳೆಗಳನ್ನು ಕಾಪಾಡಿಕೊಳ್ಳ ಬೇಕಂದ್ರೆ ವಿದ್ಯುತ್ ಸಮಸ್ಯೆ.




ಹೌದು, ಜೆಸ್ಕಾಂ ರಾಯಚೂರಿನಲ್ಲಿ ಬೇಕಾಬಿಟ್ಟಿ ವಿದ್ಯುತ್ ಕಡಿತ ಮಾಡುತ್ತಿದೆ. 12 ಗಂಟೆ ಬದಲು ಬರೀ 5 ಗಂಟೆ ಪೂರೈಕೆ ಮಾಡುತ್ತಿದ್ದು, ಗಾಯದ ಮೇಲೆ ಬರೆ ಎಳೆಯುತ್ತಿದೆ. ಇದರಿಂದ ರೈತರು ಸಹ ಸಿಡಿದೆದ್ದಿದ್ದಾರೆ.

ಜೆಸ್ಕಾಂ ಕೂಡ 12 ಗಂಟೆ ರೈತರ ಪಂಪ್ ಸೆಟ್ ಗಳಿಗಾಗಿ ವಿದ್ಯುತ್ ಈ ವರೆಗೆ ಪೂರೈಕೆ ಮಾಡ್ತಿತ್ತು. ಆದ್ರೀಗ ಕಳೆದ ಕೆಲ ದಿನಗಳಿಂದ ಏಕಾಏಕಿ 12 ಗಂಟೆ ಬದಲು ಬರೀ 5 ಗಂಟೆ ಮಾತ್ರ ಜೆಸ್ಕಾಂ ವಿದ್ಯುತ್ ಪೂರೈಸುತ್ತಿದೆ. ಇದರಿಂದ ಬೆಳೆಗಳು ನೀರಿಲ್ಲದೇ ಒಣಗಿ ಹೋಗ್ತಿದೆ..ಇದೇ ಕಾರಣಕ್ಕೆ ರೈತರು ರಾಯಚೂರಿನ ಜೆಸ್ಕಾಂ ಕಚೇರಿಗೆ ಮುತ್ತಿಗೆ ಹಾಕ ಆಕ್ರೋಶ ಹೊರಹಾಕಿದ್ದಾರೆ.

**ಇಡೀ ರಾಜ್ಯಕ್ಕೆ ವಿದ್ಯುತ್ ನೀಡೋ ಜಿಲ್ಲೆ :** ಪಂಪ್‌ಸೆಟ್ ಹಾಗೂ ಕೊಳವೆಬಾವಿಗಳ ಮೂಲಕ ಬೆಳೆಗಳನ್ನು ಉಳಿಸಿಕೊಳ್ಳುತ್ತಿದ್ದ ರೈತರಿಗೆ, ಇದೀಗ ಅತಿಯಾದ ವಿದ್ಯುತ್ ಕಡಿತ ಮತ್ತಷ್ಟು ಆತಂಕ ತಂದಿದೆ. ಆದ್ರೆ ಬೇಕಾಬಿಟ್ಟಿ ವಿದ್ಯುತ್ ಕಡಿತದಿಂದ ರೈತರು ಕೆರಳಿದ್ದಾರೆ. ಯಾಕಂದ್ರೆ ರಾಯಚೂರಿನಲ್ಲಿ ಎರಡು ವಿದ್ಯುತ್ ಸ್ಥಾವರಗಳಿವೆ. ಈ ಎರಡು ವಿದ್ಯುತ್ ಸ್ಥಾವರಗಳು ಇಡೀ ರಾಜ್ಯಕ್ಕೆ ಬೆಳಕು ನೀಡ್ತವೆ. ಆದ್ರೆ ವಿದ್ಯುತ್ ಸ್ಥಾವರಗಳಿಂದ ಜಮೀನು,ಆಸ್ತಿ–ಪಾಸ್ತಿ ಕಳೆದುಕೊಂಡು, ಆ ವಿದ್ಯುತ್ ಸ್ಥಾವರಗಳ ಮಾಲಿನ್ಯಕ್ಕೆ ಈ ಭಾಗದ ರೈತರು,ಜನ ಸಮಸ್ಯೆಗೀಡಾಗಿದ್ದಾರೆ. ಆದ್ರೆ ಜೆಸ್ಕಾಂ ಮಾತ್ರ ಈ ನಾವೇ ವಿದ್ಯುತ್ ಉತ್ಪಾದನೆ ಮಾಡಿದ್ರೂ,ಕಷ್ಟ ಕಾಲದಲ್ಲಿ ನಮ್ಮ ರೈತರಿಗೆ ವಿದ್ಯುತ್ ಕಡಿತಗೊಳಿಸಿ ದ್ರೋಹ ಮಾಡ್ತಿದೆ ಅಂತ ರೈತರು ಕೆರಳಿದ್ದಾರೆ.

12 ಗಂಟೆ ಬದಲು ಐದು ಗಂಟೆ ವಿದ್ಯುತ್ ಕೊಡ್ತಾರೆ. ಅದು ಬೆಳಿಗ್ಗೆ ಕೊಡ್ತಾರೋ ಇಲ್ಲಾ,ರಾತ್ರಿ ಕೊಡ್ತಾರೋ ಗೊತ್ತಿಲ್ಲ.ಇದರಿಂದ ಬೆಳೆ ಒಣಗಿ ಹೋಗ್ತಿವೆ ಎನ್ನುವುದು ರೈತರ ಅಳಲು.

**ಜೆಸ್ಕಾಂ ಕಚೇರಿಗೆ ಮುತ್ತಿಗೆ ಹಾಕಿದ ರೈತರು:** ಇದೇ ಕಾರಣಕ್ಕೆ ಈಗಾಗಲೇ ರೈತರು ಜೆಸ್ಕಾಂ ಕಚೇರಿಗೆ ಮುತ್ತಿಗೆ ಹಾಕಿ ಎಚ್ಚರಿಕೆ ನೀಡಿದ್ದಾರೆ. ಶೀಘ್ರವೇ ಮೊದಲಿನಂತೆ ಈ ಭಾಗದ ರೈತರ ಹಿತದೃಷ್ಟಿಯಿಂದ 12 ಗಂಟೆ ನೀರು ಹೊಡಲೇಬೇಕು ಅಂತ ಪಟ್ಟುಹಿಡಿದಿದ್ದಾರೆ.

ಒಂದು ವೇಳೆ ಪೂರ್ಣ ಪ್ರಮಾಣದಲ್ಲಿ ವಿದ್ಯುತ್ ಕೊಡದೇ ಇದ್ದಲ್ಲಿ ಉಗ್ರ ಹೋರಾಟದ ಎಚ್ಚರಿಕೆಯನ್ನ ರೈತರು ನೀಡಿದ್ದಾರೆ. ಸದ್ಯ ರೈತರ ಹೋರಾಟಕ್ಕೆ ಜೆಸ್ಕಂ ಅಧಿಕಾರಿಗಳು ಕೂಡ ಸಕಾರಾತ್ಮಕವಾಗಿ ಸ್ಪಂದಿಸಿದ್ದು,ಸೂಕ್ತ ರೀತಿಯಲ್ಲಿ ವಿದ್ಯುತ್ ಪೂರೈಕೆ ಮಾಡೋ ಭರವಸೆ ನೀಡಿದ್ದಾರೆ. ಆದ್ರೆ ಯಾವಾಗಿನಿಂದ 12 ಗಂಟೆ ವಿದ್ಯುತ್ ರೈತರಿಗೆ ಪೂರೈಕೆ ಪುನರಾರಂಭವಾಗತ್ತೋ ಕಾದು ನೋಡಬೇಕಿದೆ.

### ನಾಡಿನ ಒಳಿತಿಗಾಗಿ, ಮಳೆ-ಬೆಳೆ ಸಮೃದ್ಧಿಯಾಗಿ ಆಗಲೆಂದು ಪ್ರಾರ್ಥಿಸಿದ ಮಾಜಿ ಶಾಸಕ ಸೋಮಶೇಖರರೆಡ್ಡಿ



**ಬಳ್ಳಾರಿ,ಸೆ.16:** ಬಳ್ಳಾರಿ ನಗರದ ವಿವಿಧ ಪ್ರದೇಶಗಳಲ್ಲಿ ಗಣೇಶ ಹಬ್ಬದ ಅಂಗವಾಗಿ ಅನೇಕ ಸಂಘ, ಸಮಿತಿಗಳಿಂದ ಪ್ರತಿಷ್ಠಾಪಿಸಿದ್ದ ಶ್ರೀ ಗಣೇಶನ ಮೂರ್ತಿಗಳ ದರ್ಶನ ಪಡೆದ ಮಾಜಿ ಶಾಸಕ ಗಾಲಿ ಸೋಮಶೇಖರರೆಡ್ಡಿ ವಿಘ್ನ ವಿನಾಶಕನಿಗೆ ಪೂಜೆ ಸಲ್ಲಿಸಿ ನಾಡಿನ ಒಳಿತಿಗಾಗಿ, ಮಳೆ–ಬೆಳೆ ಸಮೃದ್ಧಿಯಾಗಿ ಆಗಲೆಂದು ಪ್ರಾರ್ಥಿಸಿದರು.

### ಬಳ್ಳಾರಿಯಲ್ಲಿ ಗೌರಿ-ಗಣೇಶ ಲಾಡು ಹರಾಜು, 5 ಸಾವಿರ ಜನಕ್ಕೆ ಅನ್ನಪ್ರಸಾದ ವಿತರಣೆ ಕಾರ್ಯಕ್ರಮ



**ಬಳ್ಳಾರಿ, ಸೆ.16:** ನಗರದ ವಿದ್ಯಾನಗರದಲ್ಲಿರುವ ಶ್ರೀ ಅಭಯ ಆಂಜನೇಯಸ್ವಾಮಿ ದೇವಸ್ಥಾನದಲ್ಲಿ ಶ್ರೀ ಗೌರಿ–ಗಣೇಶ ಹಬ್ಬದ ಅಂಗವಾಗಿ ಮಂಗಳವಾರ ಸಂಜೆ ಎರಡನೇ ದಿನದ ಲಡ್ಡು ಹರಾಜು ಕಾರ್ಯಕ್ರಮ ಹಾಗೂ ಅನ್ನಪ್ರಸಾದ ವಿತರಣೆ ನಡೆಯಿತು. 5 ಸಾವಿರ ಭಕ್ತರಿಗೆ ಅನ್ನಪ್ರಸಾದ ವಿತರಿಸಲಾಯಿತು. ಹರಾಜಿನಲ್ಲಿ ಮೊದಲ ಲಡ್ಡುವನ್ನು ಉದ್ಯಮಿ ಚೆರುಕೂರಿ ಅನೂಪ್ ಕುಮಾರ್ ಅವರು 5,67,000 ಪಡೆದರು. ಎರಡನೇ ಲಡ್ಡುವನ್ನು ರಾಯಚೂರು ಜಿಲ್ಲಾ ಬಿಜೆಪಿ ರೈತಮೋರ್ಚಾ ಅಧ್ಯಕ್ಷ ದೊರೆಬಾಬು ತೂಮು ಹಾಗೂ ಅವರ ಪುತ್ರ ಜಯಕೃಷ್ಣ ಅವರು 1,73,000ಕ್ಕೆ ಸ್ವೀಕರಿಸಿದರು.

# ಅಮೆರಿಕ ಮಹಿಳೆಗೆ ಪರಿಹಾರ ನೀಡುವ ಆದೇಶ ಪಾಲಿಸದ ಹೋಮ್‌ಸ್ಟೇ ಮಾಲೀಕನ ವಿರುದ್ಧ ನ್ಯಾಯಾಂಗ ನಿಂದನೆ ಅರ್ಜಿ ಸಲ್ಲಿಕೆ

**ಮಡಿಕೇರಿ, ಸೆ.16:** ಅಮೆರಿಕಾದ ಮಹಿಳೆಯ ಮೇಲೆ ಅತ್ಯಾಚಾರ ನಡೆದಿತ್ತು ಎನ್ನಲಾದ ಹೋಮ್‌ಸ್ಟೇ ಮಾಲೀಕರಾಗಿದ್ದ ಪಾಲೇಕಂಡ ಪೊನ್ನಪ್ಪ ಅಲಿಯಾಸ್ ವಿಶಾಲ್ ಅವರನ್ನು ಅಕ್ರಮವಾಗಿ ಬಂಧಿಸಿರುವುದರಿಂದ ಅವರಿಗೆ ರೂ.5 ಲಕ್ಷ ಪರಿಹಾರ ವಿತರಿಸುವಂತೆ ನಿರ್ದೇಶಿಸಿ ಕರ್ನಾಟಕ ಹೈಕೋರ್ಟ್‌ನ ಸಮನ್ವಯ ಪೀಠ ಮಾಡಿರುವ ಆದೇಶ ಪಾಲಿಸದಿರುವುದನ್ನು ಪ್ರಶ್ನಿಸಿರುವ ಅರ್ಜಿ ಸಂಬಂಧ ರಾಜ್ಯ ಸರ್ಕಾರಕ್ಕೆ ಕರ್ನಾಟಕ ಹೈಕೋರ್ಟ್ ಬುಧವಾರ ನೋಟಿಸ್ ಜಾರಿಗೊಳಿಸಿದೆ.

ಹೈಕೋರ್ಟ್ ನಿರ್ದೇಶನದಂತೆ ಒಂದು ತಿಂಗಳಲ್ಲಿ ರಾಜ್ಯ ಸರ್ಕಾರವು 5 ಲಕ್ಷ ಪರಿಹಾರ ಪಾವತಿಸಲಿಲ್ಲ ಎಂದು ಪೊನ್ನಪ್ಪ ಸಲ್ಲಿಸಿರುವ ನ್ಯಾಯಾಂಗ ನಿಂದನೆ ಅರ್ಜಿಯ ವಿಚಾರಣೆಯನ್ನು ನ್ಯಾಯಮೂರ್ತಿಗಳಾದ ಜಯಂತ್ ಬ್ಯಾನರ್ಜಿ ಮತ್ತು ಕೆ.ಬಿ.ಗೀತಾ ಅವರ ವಿಭಾಗೀಯ ಪೀಠ ನಡೆಸಿತು.

ಮುಖ್ಯ ಕಾರ್ಯದರ್ಶಿ ಮತ್ತು ಗೃಹ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗೆ ನೋಟಿಸ್ ಜಾರಿಗೊಳಿಸಿರುವ ಪೀಠವು ಮೂರು ವಾರಗಳಲ್ಲಿ ಆಕ್ಷೇಪಣೆ ಸಲ್ಲಿಸಲು ಸರ್ಕಾರಕ್ಕೆ ನಿರ್ದೇಶಿಸಿದೆ.

ಪೊನ್ನಪ್ಪ ಅವರನ್ನು ಪ್ರತಿನಿಧಿಸಿದ್ದ ವಕೀಲ ಅನಗದ್ ಕಾಮತ್ ಅವರು ರಾಜ್ಯ ಸರ್ಕಾರಕ್ಕೆ ಹೈಕೋರ್ಟ್‌ನ ಸಮನ್ವಯ ಪೀಠದ ಪ್ರಮಾಣೀಕೃತ ಆದೇಶವು ಜುಲೈ 15ರಂದು ಹೆಚ್ಚುವರಿ ವಿಶೇಷ ಸರ್ಕಾರಿ ಅಭಿಯೋಜಕರ ಮೂಲಕ ತಲುಪಿದೆ. ಪರಿಹಾರ ಪಾವತಿಸಲು ವಿಧಿಸಿದ್ದ ಗಡುವು ಆಗಸ್ಟ್ 12ಕ್ಕೆ ಮುಕ್ತಾಯವಾಗಿದೆ. ಹೈಕೋರ್ಟ್ ಆದೇಶವನ್ನು ಪಾಲಿಸುವಂತೆ ಸಕ್ಷಮ ಪ್ರಾಧಿಕಾರಕ್ಕೆ ಜುಲೈ 27ರಂದು ನೋಟಿಸ್ ನೀಡಲಾಗಿದೆ. ಆದಾಗ್ಯೂ, ಪರಿಹಾರ ಪಾವತಿಸಿಲ್ಲ ಮತ್ತು ಅದರ ಸಂಬಂಧ ವಿವರಣೆಯನ್ನೂ ನೀಡಲಾಗಿಲ್ಲ ಎಂದರು.




ಅತ್ಯಾಚಾರ ವರದಿ ಮಾಡದ ಆರೋಪ: ಅಕ್ರಮವಾಗಿ ಬಂಧಿಸಲ್ಪಟ್ಟ ಹೋಮ್‌ಸ್ಟೇ ಮಾಲೀಕನಿಗೆ 5 ಲಕ್ಷ ಪರಿಹಾರಕ್ಕೆ ಆದೇಶತನ್ನ ಹೋಮ್‌ಸ್ಟೇನಲ್ಲಿ ನೆಲೆಸಿದ್ದ ಅಮೆರಿಕಾದ ಮಹಿಳೆಯ ಅತ್ಯಾಚಾರ ಪ್ರಕರಣವನ್ನು ವರದಿ ಮಾಡಿಲ್ಲ ಎಂದು ಪೊನ್ನಪ್ಪ ಅವರನ್ನು ಏಪ್ರಿಲ್ 19ರಂದು ಬಂಧಿಸಲಾಗಿತ್ತು. ಜುಲೈನಲ್ಲಿ ಪೊನ್ನಪ್ಪ ಬಂಧನ ಅಕ್ರಮ ಎಂದಿದ್ದ ಹೈಕೋರ್ಟ್‌ನ ಸಮನ್ವಯ ಪೀಠವು ಹೋಮ್‌ಸ್ಟೇ ಮಾಲೀಕನ ಮೂಲಭೂತ ಹಕ್ಕು ಉಲ್ಲಂಘಿಸಿದ್ದಕ್ಕಾಗಿ 5 ಲಕ್ಷ ಪರಿಹಾರ ಪಾವತಿಸುವಂತೆ ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಿತ್ತು. ಆನಂತರ ಪೊನ್ನಪ್ಪ ವಿರುದ್ಧದ ಕ್ರಿಮಿನಲ್ ಪ್ರಕರಣವನ್ನೂ ರದ್ದುಪಡಿಸಿತ್ತು.

# ದಾಸ್ಯದ ಕತ್ತಲೆಯಿಂದ ಕಲ್ಯಾಣದ ಬೆಳಕಿನೆಡೆಗೆ

**ಬಳ್ಳಾರಿ, ಸೆ.16–**ಬಿರು ಬಿಸಿಲಿನ ನಾಡು ಎಂದೇ ಪರಿಚಿತವಾಗಿರುವ ಕಲ್ಯಾಣ ಕರ್ನಾಟಕದ ಇತಿಹಾಸವು ನೋವು, ದೌರ್ಜನ್ಯ, ಹೋರಾಟ ಮತ್ತು ತ್ಯಾಗದ ಹೆಜ್ಜೆಗುರುತುಗಳಿಂದ ಕೂಡಿದೆ. ಹೈದರಾಬಾದ್ ನಿಜಾಮನ ಆಳ್ವಿಕೆಗೆ ಒಳಪಟ್ಟಿದ್ದ ಈ ಪ್ರದೇಶವು ಆರ್ಥಿಕ, ಶೈಕ್ಷಣಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕವಾಗಿ ಹಿಂದುಳಿದಿತ್ತು. ಅಜ್ಞಾನ, ಮೂಢನಂಬಿಕೆ, ಗೊಡ್ಡು ಸಂಪ್ರದಾಯಗಳು ಮತ್ತು ಮೇಲು–ಕೀಳು ಭಾವನೆಗಳು ಜನಜೀವನವನ್ನು ಕಟ್ಟಿ ಹಾಕಿದ್ದವು.


1947ರ ಆಗಸ್ಟ್ 15ರಂದು ಭಾರತ ಸ್ವಾತಂತ್ರ್ಯ ಪಡೆದರೂ, ಹೈದರಾಬಾದ್ ಸಂಸ್ಥಾನದ ಜನರಿಗೆ ಸ್ವಾತಂತ್ರ್ಯದ ಸೂರ್ಯೋದಯ ವಾಗಿರಲಿಲ್ಲ. ನಿಜಾಮನು ತನ್ನ ಸಂಸ್ಥಾನವನ್ನು ಸ್ವತಂತ್ರವಾಗಿಯೇ ಉಳಿಸಿಕೊಳ್ಳಲು ಪ್ರಯತ್ನಿಸಿದನು. ರಜಾಕಾರರ ದೌರ್ಜನ್ಯದಿಂದ ಜನಜೀವನ ಮತ್ತಷ್ಟು ದುಸ್ತರಗೊಂಡಿತು. ಈ ಅನ್ಯಾಯದ ವಿರುದ್ಧ ಸ್ವಾಮಿ ರಮಾನಂದ ತೀರ್ಥ, ಜನಾರ್ದನ ದೇಸಾಯಿ, ಜಗನ್ನಾಥರಾವ್ ಚಂದ್ರಕಿ, ಎಂ. ನಾಗಪ್ಪ ವಕೀಲರು, ಶಿವಮೂರ್ತಿಸ್ವಾಮಿ ಅಳವಂಡಿ, ನಾರಾಯಣರಾವ್ ಕಾನಿಹಾಳ್, ಆಚಾರ್ಯ ನರೇಂದ್ರಜಿ, ಕೋಳೂರು ಮಲ್ಲಪ್ಪ ಸೇರಿದಂತೆ ಅನೇಕರು ಹೋರಾಟದ ಕಹಳೆ ಮೊಳಗಿಸಿದರು. ಸಾವಿರಾರು ಜನರು ಸೆರೆಮನೆ ಸೇರಿದರು. ಅನೇಕರ ತ್ಯಾಗದಿಂದ ವಿಮೋಚನೆಯ ಹೋರಾಟ ಮತ್ತಷ್ಟು ತೀವ್ರಗೊಂಡಿತು.

ಈ ಹೋರಾಟದ ಕರಾಳ ನೆನಪುಗಳಲ್ಲಿ ಬೀದರ್ ಜಿಲ್ಲೆಯ ಗೋರ್ಟಾ ಗ್ರಾಮದ ಘಟನೆ ಪ್ರಮುಖವಾದುದು. 1948ರ ಮೇ 9ರಂದು ರಜಾಕಾರರ ದಾಳಿಯಲ್ಲಿ ಅನೇಕ ಅಮಾಯಕರು ಪ್ರಾಣ ಕಳೆದುಕೊಂಡರು. ಇಂತಹ ಘಟನೆಗಳು ಸ್ವಾತಂತ್ರ್ಯ ನಮಗೆ ಎಷ್ಟು ಬೆಲೆಗೆ ದೊರಕಿತು ಎಂಬುದನ್ನು ನೆನಪಿಸುತ್ತವೆ.

ಹೈದರಾಬಾದ್‌ನ ಪರಿಸ್ಥಿತಿಯನ್ನು ಅರಿತ ಸರ್ದಾರ್ ವಲ್ಲಭಭಾಯಿ ಪಟೇಲ್ ನೇತೃತ್ವದ ಭಾರತ ಸರ್ಕಾರ ನಿಜಾಮನೊಂದಿಗೆ ರಾಜತಾಂತ್ರಿಕ ಮಾತುಕತೆ ನಡೆಸಿತು. ಫಲಿತಾಂಶ ಕಾಣದ ಹಿನ್ನೆಲೆಯಲ್ಲಿ 1948ರ ಸೆಪ್ಟೆಂಬರ್ 13ರಂದು ಭಾರತೀಯ ಸೇನೆ 'ಆಪರೇಷನ್ ಪೋಲೋ' ಕಾರ್ಯಾಚರಣೆ ಆರಂಭಿಸಿತು. ಐದು ದಿನಗಳ ಕಾರ್ಯಾಚರಣೆಯ ಬಳಿಕ ನಿಜಾಮನ ಪಡೆ ಶರಣಾಯಿತು. 1948ರ ಸೆಪ್ಟೆಂಬರ್ 17ರಂದು ಹೈದರಾಬಾದ್ ಸಂಸ್ಥಾನ ಭಾರತೀಯ ಒಕ್ಕೂಟದಲ್ಲಿ ವಿಲೀನವಾಯಿತು.

1956ರ ಭಾಷಾವಾರು ರಾಜ್ಯಗಳ ಪುನರ್‌ವ್ಯವಸ್ಥೆಯ ಸಂದರ್ಭದಲ್ಲಿ ಹೈದರಾಬಾದ್ ಸಂಸ್ಥಾನದ ಕನ್ನಡ ಭಾಷಿಕ ಪ್ರದೇಶಗಳು ಅಂದಿನ ಮೈಸೂರು ರಾಜ್ಯಕ್ಕೆ ಸೇರ್ಪಡೆಯಾದವು.

ದೀರ್ಘಕಾಲ ಸೆಪ್ಟೆಂಬರ್ 17ನ್ನು ಹೈದರಾಬಾದ್ ಕರ್ನಾಟಕ ವಿಮೋಚನಾ ದಿನವಾಗಿ ಆಚರಿಸಲಾಗುತ್ತಿತ್ತು. 2019ರಿಂದ ಇದೇ ದಿನವನ್ನು ಕಲ್ಯಾಣ ಕರ್ನಾಟಕ ಉತ್ಸವ ದಿನವಾಗಿ ಆಚರಿಸಲಾಗುತ್ತಿದೆ. ಸೆಪ್ಟೆಂಬರ್ 17 ಕೇವಲ ಒಂದು ದಿನಾಂಕವಲ್ಲ; ಅದು ಈ ನೆಲದ ಜನರ ಹೋರಾಟ, ತ್ಯಾಗ ಮತ್ತು ಸ್ವಾಭಿಮಾನದ ಸಂಕೇತ. ಆಗಸ್ಟ್ 15 ಬ್ರಿಟಿಷರ ದಾಸ್ಯದಿಂದ ಭಾರತ ಮುಕ್ತವಾದ ದಿನವಾದರೆ, ಸೆ.17 ನಿಜಾಮನ ಆಡಳಿತದಿಂದ ಹೈದರಾಬಾದ್ ಕರ್ನಾಟಕದ ಜನರು



ಮುಕ್ತರಾಗಿ ಭಾರತೀಯ ಒಕ್ಕೂಟದೊಂದಿಗೆ ಒಂದಾದ ದಿನ.

ಆದರೆ ವಿಮೋಚನೆಯ ಸ್ಮರಣೆ ಕೇವಲ ಧ್ವಜಾರೋಹಣ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಸೀಮಿತವಾಗಬಾರದು. ಶಿಕ್ಷಣ, ಉದ್ಯೋಗ, ಆರೋಗ್ಯ, ಕೃಷಿ, ಕೈಗಾರಿಕೆ ಮತ್ತು ಮೂಲಸೌಕರ್ಯಗಳಲ್ಲಿ ಈ ಪ್ರದೇಶದ ಸಮಗ್ರ ಅಭಿವೃದ್ಧಿಯೇ ನಿಜವಾದ ಉತ್ಸವವಾಗಬೇಕು.

'ಕಲ್ಯಾಣ ಕರ್ನಾಟಕ' ಎಂಬ ಹೆಸರು ಬದಲಾವಣೆಯಿಂದ ಮಾತ್ರ ಕಲ್ಯಾಣ ಸಾಧ್ಯವಿಲ್ಲ; ಪ್ರತಿಯೊಬ್ಬರ ಬದುಕಿನಲ್ಲೂ ಅಭಿವೃದ್ಧಿಯ ಬೆಳಕು ಮೂಡಿದಾಗ ಮಾತ್ರ ಆ ಹೆಸರಿಗೆ ನಿಜವಾದ ಅರ್ಥ ದೊರೆಯುತ್ತದೆ.

ಕುವೆಂಪು ಅವರ ಸರ್ವರಿಗೂ ಸಮಬಾಳು, ಸರ್ವರಿಗೂ ಸಮಪಾಲು? ಎಂಬ ಆಶಯದಂತೆ, ಸಮಾನ ಅವಕಾಶ ಮತ್ತು ಸಮಾನ ಅಭಿವೃದ್ಧಿಯ ಸಮಾಜ ನಿರ್ಮಾಣವಾಗಲಿ. ವಿಮೋಚನಾ ಹೋರಾಟಗಾರರ ತ್ಯಾಗದ ಸ್ಮರಣೆ ನಮ್ಮ ದಾರಿ ದೀಪವಾಗಲಿ; ಕಲ್ಯಾಣ ಕರ್ನಾಟಕದ ಸಮಗ್ರ ಅಭಿವೃದ್ಧಿ ನಮ್ಮ ಸಂಕಲ್ಪವಾಗಲಿ.

ಸೆಪ್ಟೆಂಬರ್ 17ರ ಉತ್ಸವವು ಕೇವಲ ವಿಮೋಚನೆಯ ನೆನಪಾಗದೆ, ಕಲ್ಯಾಣದ ಹೊಸ ಸಂಕಲ್ಪವಾಗಲಿ.

# ಪ್ರಜಾಪ್ರಭುತ್ವಕ್ಕೆ ಅನುಭವ ಮಂಟಪ ಬುನಾದಿ: ಸಚಿವ ಈಶ್ವರ ಖಂಡ್ರೆ

**ಬೀದರ್, ಸೆ. 16:** 12ನೇ ಶತಮಾನದಲ್ಲೇ ಬಸವಾದಿ ಶರಣರು ಅನುಭವ ಮಂಟಪದ ಮೂಲಕ ಪ್ರಜಾಪ್ರಭುತ್ವಕ್ಕೆ ಭದ್ರ ಬುನಾದಿ ಹಾಕಿದ್ದರು ಎಂದು ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಬಿ. ಖಂಡ್ರೆ ತಿಳಿಸಿದರು.

ಅಂತರರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆಯನ್ನು ಉದ್ಘಾಟಿಸಿ ಮಾತನಾಡಿ, ಡಾ. ಬಿ.ಆರ್. ಅಂಬೇಡ್ಕರ್ ಅವರು ನೀಡಿದ ಸಂವಿಧಾನ ಹಾಗೂ ಬುದ್ಧ, ಬಸವಣ್ಣನವರ ತತ್ವಗಳನ್ನು ವೈಯಕ್ತಿಕ ಜೀವನದಲ್ಲಿ ಅಳವಡಿಸಿ ಕೊಂಡರೆ ಎಂತಹ ಸವಾಲುಗಳನ್ನೂ ಎದುರಿಸಬಹುದು ಎಂದರು.

ವಿಶ್ವದಲ್ಲೇ ಅತ್ಯಂತ ಮಾದರಿ ಹಾಗೂ ಬೃಹತ್ ಲಿಖಿತ ಸಂವಿಧಾನ ಹೊಂದಿರುವ ಭಾರತದಲ್ಲಿ, ಪ್ರಜಾಪ್ರಭುತ್ವದ ಆಶಯಗಳನ್ನು ಎತ್ತಿಹಿಡಿಯಲು ಮತ್ತು ಯುವಜನತೆಯಲ್ಲಿ ಸಂವಿಧಾನದ ಅರಿವು ಮೂಡಿಸಲು ಪ್ರತಿಯೊಬ್ಬರೂ ಶ್ರಮಿಸಬೇಕು. ದೇಶದ ಭವಿಷ್ಯದ ಪ್ರಜೆಗಳಾದ ವಿದ್ಯಾರ್ಥಿಗಳಿಗೆ ಸಂವಿಧಾನದ ಆಶಯಗಳು, ಸದಾಶಯಗಳು ಮತ್ತು




ಹಕ್ಕು–ಬಾಧ್ಯತೆಗಳ ಬಗ್ಗೆ ಜಾಗೃತಿ ಮೂಡಿಸುವುದು ಈ ಆಚರಣೆಯ ಮುಖ್ಯ ಉದ್ದೇಶವಾಗಿದೆ. ಕಳೆದ ವರ್ಷ ಪ್ರಜಾಪ್ರಭುತ್ವ ದಿನದಂದು ಬಸವಕಲ್ಯಾಣದಿಂದ ಆರಂಭವಾದ ಬೃಹತ್ ಮಾನವ ಸರಪಳಿಯಲ್ಲಿ ಲಕ್ಷಾಂತರ ಜನರು ಭಾಗವಹಿಸಿ ರಾಜ್ಯದಾದ್ಯಂತ ಅತ್ಯಂತ ಯಶಸ್ವಿಯಾಗಿ ಆಚರಿಸಲಾಗಿತ್ತು ಎಂದರು.

ಇಂದಿನ ದಿನಗಳಲ್ಲಿ ಸಮಾಜದಲ್ಲಿ ಜಾತಿ–ಧರ್ಮಗಳ ಹೆಸರಿನಲ್ಲಿ ಭಾವನಾತ್ಮಕ ವಿಷಯಗಳನ್ನು ಕೆರಳಿಸಿ, ಸಮಾಜವನ್ನು ಒಡೆಯುವ ಯತ್ನಗಳು ನಡೆಯುತ್ತಿವೆ. ಇದರ ವಿರುದ್ಧ ಪ್ರತಿಯೊಬ್ಬರೂ ಸೋದರತ್ವ, ಸಹಬಾಳ್ವೆ ಹಾಗೂ ಸಾಮರಸ್ಯದ ಸಮಾಜ ನಿರ್ಮಾಣಕ್ಕೆ ಪೂರಕವಾಗಿ ನಿಲ್ಲಬೇಕಿದೆ. ಡಾ. ಬಿ.ಆರ್. ಅಂಬೇಡ್ಕರ್ ಅವರ ಪರಿಕಲ್ಪನೆಯಂತೆ ಸಮಾಜದ ಕಟ್ಟಕಡೆಯ ವ್ಯಕ್ತಿಗೂ ಸರ್ಕಾರದ ಸೌಲಭ್ಯಗಳು ತಲುಪಿ, ಆತ ಸಬಲನಾದಾಗ ಪ್ರಜಾಪ್ರಭುತ್ವ ಯಶಸ್ವಿಯಾಗುತ್ತದೆ. ತಳ ಸಮುದಾಯಗಳ ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಯು ಇಡೀ ದೇಶಕ್ಕೆ ಶಕ್ತಿ ತರುತ್ತದೆ ಎಂದು ಅಭಿಪ್ರಾಯಪಟ್ಟರು.

ಶಾಸಕ ರಹೀಂ ಖಾನ್ ಮಾತನಾಡಿ, ದೇಶದ ಪ್ರತಿಯೊಬ್ಬ ಪ್ರಜೆಗೂ ಸಮಾನ ಅವಕಾಶ ಸಿಗಲು ಸಂವಿಧಾನವೇ ಮೂಲ ಕಾರಣ' ಎಂದು ಹೇಳಿದರು. ಭೀಮರಾಯನ ಗುಡಿ ಕೃಷ್ಣಾ ಮೇಲ್ದಂಡೆ ಯೋಜನೆಯ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷ ಬಾಬು ಹೊನ್ನ ನಾಯ್ಕ, ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಸಂಜಯ್ ಮಠಪತಿ, ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಗಿತ್ತೆ ಮಾಧವ್ ವಿಠ್ಠಲರಾವ್, ಹೆಚ್ಚುವರಿ ಜಿಲ್ಲಾಧಿಕಾರಿ ಸುರೇಖಾ, ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕ ಯೋಗೀಶ ಎಸ್.ಬಿ., ವಿವಿಧ ಸಮಾಜದ ಮುಖಂಡರು, ಸಂಘ ಸಂಸ್ಥೆಗಳ ಪದಾಧಿಕಾರಿಗಳು, ಜಿಲ್ಲಾಮಟ್ಟದ ಅಧಿಕಾರಿಗಳು, ಶಾಲಾ–ಕಾಲೇಜಿನ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

**ಜನರ ಪಾಲ್ಗೊಳ್ಳುವಿಕೆ ಪ್ರಜಾಪ್ರಭುತ್ವ:** ವಿಶೇಷ ಉಪನ್ಯಾಸ ನೀಡಿದ ಭಾಲ್ಕಿಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಇತಿಹಾಸ ವಿಭಾಗದ ಸಹಾಯಕ ಪ್ರಾಧ್ಯಾಪಕಿ ಸುಮನಬಾಯಿ ಶಿಂಧೆ, 'ಪ್ರಜಾಪ್ರಭುತ್ವ ಎಂದರೆ ಚುನಾವಣೆ, ಮತ ಹಾಕುವುದು ಅಥವಾ ಸರ್ಕಾರ ರಚನೆಯಷ್ಟೇ ಅಲ್ಲ; ಅದು ಜನರ ಪಾಲ್ಗೊಳ್ಳುವಿಕೆ, ಸಮಾನತೆ, ಸ್ವಾತಂತ್ರ್ಯ , ನ್ಯಾಯ, ಬಂಧುತ್ವ ಹಾಗೂ ಜವಾಬ್ದಾರಿಯುತ ಆಡಳಿತವಾಗಿದೆ ಎಂದು ಹೇಳಿದರು.

ಭಾರತದಲ್ಲಿ ಪ್ರಜಾಪ್ರಭುತ್ವದ ಬೇರುಗಳು ಅತ್ಯಂತ ಪ್ರಾಚೀನವಾಗಿದ್ದು, 12ನೇ ಶತಮಾನದಲ್ಲಿ ಬೀದರ್ ಜಿಲ್ಲೆಯ ಬಸವಕಲ್ಯಾಣದಲ್ಲಿ ಬಸವಣ್ಣನವರು ಸ್ಥಾಪಿಸಿದ ಅನುಭವ ಮಂಟಪವು ಪ್ರಪಂಚದ ಮೊದಲ ಸಂಸತ್ ಜಗತ್ತಿಗೆ ಮಾದರಿಯಾಗಿತ್ತು. ಇಲ್ಲಿ ಜಾತಿ, ಮತ, ಲಿಂಗ ಭೇದವಿಲ್ಲದೆ ಎಲ್ಲಾ ಶರಣ–ಶರಣೆಯರಿಗೆ ಮುಕ್ತ ಚರ್ಚೆಗೆ ಸಮಾನ ಅವಕಾಶ ಕಲ್ಪಿಸಲಾಗಿತ್ತು ಎಂದರು.


ದೇಶ ಕಂಡ
ಸರ್ವೋಚ್ಚ
ನಾಯಕ, ರಾಷ್ಟ್ರದ
ಹೆಮ್ಮೆಯ
ಪ್ರಧಾನಿಗಳಾದ
17.09.2026
ಶ್ರೀ ನರೇಂದ್ರ
ಮೋದಿ ಅವರಿಗೆ
ಜನ್ಮದಿನದ
ಹಾರ್ದಿಕ
ಶುಭಾಶಯಗಳು
ಶುಭಕೋರುವವರು:
ವಿ.ಸೋಮಣ್ಣ
ಜಲಶಕ್ತಿ ಮತ್ತು ರೈಲ್ವೇಖಾತೆ
ರಾಜ್ಯ ಸಚಿವರು, ಭಾರತ ಸರ್ಕಾರ